ಸುಖಪ್ರಾರಬ್ಧ

ಪ್ರೊ|| ಎಸ್. ಕೆ. ರಾಮಚಂದ್ರರಾವ್



ಸುಖ ಪ್ರಾರಬ್ಧ

ಸರಸ ಸಾಮಾಜಿಕ ಕಾದಂಬರಿ

ರಚನೆ :

ಪ್ರೊ|| ಎಸ್. ಕೆ. ರಾಮಚಂದ್ರರಾವ್

ಶಾರದಾ ಪ್ರಕಾಶನ

ಅರಳೆಪೇಟೆ : : ಬೆಂಗಳೂರು-೫೬೦ ೦೫೩

SUKHA PRARABDHA—a social novel by Prof. S. K. Ramachandra Rao, Callison College, Bangalore.

ಪ್ರಥಮ ಮುದ್ರಣ 1971

ದ್ವಿತೀಯ ಮುದ್ರಣ 1982

(ಎಲ್ಲಾ ಹಕ್ಕುಗಳೂ ಲೇಖಕರ ವಶ)

ಮುದ್ರಣ :

ಎಮ್‌ಎಮ್ ಪ್ರಿಂಟಿಂಗ್ ವರ್ಕ್ಸ್

ಬೆಂಗಳೂರು-560 004

The names and characters in this work of fiction are entirely imaginary and have no references to any persons. If there is any such coincidences it is purely accident.

ಮೊದಲ ಮೂರು ಮಾತು

ಬಾಳಿನಲ್ಲಿ ಕಷ್ಟಕಾರ್ಪಣ್ಯಗಳೂ, ಆಕಸ್ಮಿಕ ಅಪಘಾತಗಳೂ ಒದಗುವುದು ಸಾಮಾನ್ಯ. ಯಾವೊಂದು ದುರ್ಘಟನೆಯೂ ಇಲ್ಲದೆ ಬದುಕನ್ನು ನಡೆಸುವುದು ವಿಶೇಷವೇ; ಆದರೆ ಅಂಥ ಬದುಕಿನಲ್ಲಿ ಏನು ಸ್ವಾರಸ್ಯ? ಉಪ್ಪು, ಹುಳಿ, ಖಾರ ಇಲ್ಲದ ಊಟ ರುಚಿಯೆ? ಬರಿಯ ಸಿಹಿ ಬರುಬರುತ್ತ ಸಪ್ಪೆಯಾಗುತ್ತದೆ. ಬೇಕೆಂದು ಬಯಸಿ ಯಾರೂ ದುಃಖವನ್ನು ಅನುಭವಿಸುವುದಿಲ್ಲ, ನಿಜ; ಆದರೆ ದುಃಖ ಬಂದಾಗ ಅದನ್ನು ಸಹಿಸಿಕೊಳ್ಳುವಲ್ಲಿ ವಿವೇಕವಿದ್ದರೆ ಒಳಿತು. ಪ್ರಕೃತಿನಿಯಮದಲ್ಲಿ ಯಾವೊಂದು ಪ್ರಸಂಗವೂ ಬದಲದೆ ನಿಲ್ಲುವಂತಿಲ್ಲ; ಮಾರ್ಪಾಟು ಸತತವಾದುದು. ಈ ಮಾತು ಸುಖಕ್ಕೂ ಅನ್ವಯಿಸುತ್ತದೆ. ದುಃಖಕ್ಕೂ ಅನ್ವಯಿಸುತ್ತದೆ. ದುಃಖ ಬಂದರೂ ನಾಲ್ಕು ಕಾಲ ನೆಲೆಯಾಗಿ ನಿಲ್ಲುವಂತಿಲ್ಲ.

"ರಾತ್ರಿರ್ಗಮಿಷ್ಯತಿ, ಭವಿಷ್ಯತಿ ಸುಪ್ರಭಾತಂ" ಎಂದು ಮುಚ್ಚಿದ ತಾವರೆಯೊಳಗೆ ಸಿಕ್ಕಿಕೊಂಡ ದುಂಬಿ ಹೇಳಿಕೊಂಡಿತಂತೆ; ಆದರೆ ಬೆಳಗಾಗುವುದರಲ್ಲೇ ಆನೆ ಬಂದು ತಾವರೆಯನ್ನು ಕಿತ್ತು ಬಿಸುಟಿತಂತೆ; ಮುಚ್ಚಿದ ತಾವರೆ ಹೂ ಸೂರ್ಯನ ಬೆಳಕಿಗೆ ಅರಳುವಂತೆಯೇ ಇಲ್ಲ, ದುಂಬಿಗೆ ಬಿಡುಗಡೆಯೂ ಇಲ್ಲ! ದುಃಖದಲ್ಲೇ ಬಳಲಿ ಬೆಂಡಾಗುತ್ತಿರುವವರಿಗೆ ಈ ಶ್ಲೋಕದಿಂದ ಸಮಾಧಾನ ವಿರದು; ಅವರ ನಿರಾಶೆ ಇನ್ನಷ್ಟು ದಟ್ಟವಾದೀತು. ಅದರೆ ಇದು ಕವಿ ಸಮಯವಷ್ಟೆ. ಯಾವ ಕಷ್ಟವೂ ನಮ್ಮನ್ನು ಹಾಗೆ ಕವಿದು ಮುಚ್ಚುವುದಿಲ್ಲ; ದುಂಬಿಯಂತೆ ದೈವಾನುಗ್ರಹಕ್ಕೇ ನಾವು ಕೈಕಟ್ಟಿ ಕುಳಿತಿರುವುದೂ ಇಲ್ಲ. ಮನುಷ್ಯ ಪ್ರಯತ್ನ, ಪುರುಷಕಾರ ಎನ್ನುವುದಿದೆ. ದೈವವನ್ನೇ ಇದು ಎದುರಿಸಬಲ್ಲುದು ಎಂದು ಲಕ್ಷ್ಮಣನ ಭರವಸೆಯಿದೆ. 'ದೈವಂ ಪುರುಷಕಾರೇಣ ನಿವರ್ತಯಿತುಮರ್ಹಸಿ' ಎಂದು ರಾಮನ ವನಗಮನದ ಸಂದರ್ಭದಲ್ಲಿ ಲಕ್ಷ್ಮಣ ಹೇಳುತ್ತಾನೆ. ಕಷ್ಟಕಾರ್ಪಣ್ಯಗಳು ತಾವಾಗಿ ಹರಿದು ಹೋಗುವುದು ತಡವಾದರೆ ಪುರುಷಕಾರ ಅಲ್ಲಿ ಫಲಿಸಬಲ್ಲುದು. ನಿವೃತ್ತಿಯಿಲ್ಲದ ಕಷ್ಟ ಒಂದೂ ಇಲ್ಲ.

ವಿವೇಕವಿಲ್ಲದೆ, ದೋಷದಲ್ಲೇ ನಿಂತು, ಎಚ್ಚರ ತಪ್ಪಿ ತಪ್ಪುಗಳನ್ನೇ ಮಾಡುತ್ತ ಕಷ್ಟವನ್ನು ತಂದುಕೊಳ್ಳುವವರು ಕೆಲವರಾದರೆ ತಮ್ಮ ಯಾವ ತಪ್ಪೂ ಇಲ್ಲದೆ, ಆಕಸ್ಮಿಕ ಘಟನೆಗಳ ಹೊಡೆತಕ್ಕೆ ಸಿಕ್ಕಿ ಕಷ್ಟಪಡುವವರು ಕೆಲವರು. ಹಾಗೆ ಅನಿರೀಕ್ಷಿತವಾಗಿ ಕಷ್ಟದ ಸುಳಿಗೆ ಸಿಕ್ಕುವರು ಕೂಡ ಮುಂದೆ ಎಚ್ಚರ ತಪ್ಪಿ ತಪ್ಪುಗಳನ್ನು ಮಾಡುವುದು ಸಾಮಾನ್ಯವೇ. ಸಮಾಜದಲ್ಲಿ ಗರ್ಹ್ಯವೆನಿಸಿದ ಅಪರಾಧಗಳಲ್ಲಿ ಎಷ್ಟು ಹೀಗೆ ನಡೆಯುವುದಿಲ್ಲ ? ವೇಶ್ಯೆಯರ ಸಮಸ್ಯೆಯಲ್ಲಿ ವಿಧಿಯಿಲ್ಲದೆ, ಬಂದೆರಗಿದ ಕಷ್ಟದಿಂದ ಕಾಲು ಜಾರಿ, ಆಯ ತಪ್ಪಿದವರೆಷ್ಟು ಮಂದಿಯಿಲ್ಲ ? ಒಮ್ಮೆ ಕಳಂಕಿತರೆಂದಮೇಲೆ ಅವರಿಗೆ ಹಿಂದಿರುಗಲು ಅವಕಾಶ ಕಡಮೆಯೇ ? 'ಸಭ್ಯ ಸಮಾಜ'ದಲ್ಲಿ ಅವರನ್ನು ಪಾಪದಲ್ಲಿಯೋ ಅಪರಾಧದಲ್ಲಿಯೋ ಮುಂದುವರಿಸಿದ ಹೊಣೆ ಸಮಾಜದ್ದೆ ಎಂದರೂ ಸರಿಯೇ. ಅದು ಬೇರೆ ಮಾತು.

ಏನೋ ಅಚಾತುರ್ಯ ನಡೆದು, ಯಾರ ತಪ್ಪೂ ಇಲ್ಲದೆ ತೊಂದರೆಗಳು ನುಗ್ಗಿ ಬಂದು ಸಂಸಾರದಲ್ಲಿ ತೊಡಕುಗಳುಂಟಾದರೆ, ಅದಕ್ಕೆ ಭಾಗಿಗಳಾದವರು ಸಂಯಮವನ್ನು ಸಡಿಲ ಬಿಡದೆ, ವಿವೇಕ ತಪ್ಪದೆ ಸಾಧ್ಯವಾದಷ್ಟೂ ಸಮಾಧಾನವನ್ನು ತಂದುಕೊಳ್ಳುವವರ ಸಂಖ್ಯೆಯೇ ಹೆಚ್ಚು. ಇಲ್ಲವಾದರೆ ಪ್ರಪಂಚದ ಬಹು ಮಂದಿ ಹುಚ್ಚರಾಗದೆ, ಪಾಪಿಗಳಾಗದೆ, ಕಳಂಕಿತರಾಗದೆ ಇರುವುದು ಹೇಗೆ ? ಎಚ್ಚರ ತಪ್ಪದೆ, ಬಂದ ದುಃಖವನ್ನು ನುಂಗಿಕೊಂಡು, ಮೇಲೆ ನಗುತ್ತ ಒಳಗೆ ಬವಣೆಪಡುತ್ತ, ತಮ್ಮ ಕಷ್ಟವನ್ನು ನೆರೆಯವರಿಗೆ ಹಂಚದೆ, ತಮ್ಮ ತೊಂದರೆಯನ್ನು ತಮ್ಮೊಳಗೇ ಇರಿಸಿಕೊಂಡು ಬದುಕನ್ನು ನೂಕುವವರು ಬಹು ಮಂದಿ. ಇಂಥವರ ಬದುಕನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಮೇಲೆ ಕಾಣಿಸದ ಗುಪ್ತಗಾಮಿನಿಯಂತೆ ಅವರ ವ್ಯಥೆ. ಇಂಥವರಿಗೆ 'ರಾತ್ರಿರ್ಗಮಿಷ್ಯತಿ, ಭವಿಷ್ಯತಿ ಸುಪ್ರಭಾತಂ' ಎನ್ನುವ ಮಾತಿನಲ್ಲಿ ನಂಬಿಕೆಯಿರುತ್ತದೆ ; ನಿರಾಶೆ ಅವರನ್ನು ಕಾಡುವುದಿಲ್ಲ. ಹಾಗೆಂದು ನಿಶ್ಚಿಂತರಾಗಿಯೂ ಇರುವುದಿಲ್ಲ ಅವರು.

ಇದು ಇಂಥ ಸಂಸಾರವೊಂದರ ಕಥೆ. ಕಷ್ಟ ಬಂದಿತು, ಬೇಸರವಾಯಿತು ; ವೇದನೆಗಳು ಬಂದುವು ; ಅರಿಯದ ಹುಡುಗರು ಹೊರೆಯನ್ನು ಹೊರಬೇಕಾ

ಯಿತು. ಇದರಲ್ಲಿ ಯಾರ ಉದ್ದೇಶವೂ ಕೆಟ್ಟುದಲ್ಲ, ಯಾರ ಸ್ವಭಾವವೂ ದುಷ್ಟ ವಲ್ಲ. ಕಷ್ಟದಿಂದಲೂ ಕೆಟ್ಟವರಾದವರು ಇಲ್ಲಿಲ್ಲ. ಆದರೆ ಉದಾಸೀನ ತಟಸ್ಥ, ನಿರಪೇಕ್ಷ ಎನಿಸಿಕೊಳ್ಳುವ ವ್ಯಕ್ತಿಯೂ ಇಲ್ಲ ಇಲ್ಲಿ. ಮುಕ್ತಿಯೋಗ್ಯರಾದ ವಿರಕ್ತ ಯತಿಗಳೂ ಅಲ್ಲ, ಅಂಧಃತಮಸ್ಸಿಗೆ ಹೋಗುವ ಪಾಪಿಗಳೂ ಅಲ್ಲ ಇಲ್ಲಿನ ಪಾತ್ರಗಳು ; ವ್ಯಾಮಿಶ್ರರು ಸಂಸಾರಿಗಳು ಇವರೆಲ್ಲ. ಚಿಂತೆ; ಭರವಸೆ ಎರಡೂ ಉಳ್ಳವರು.

ಇಂಥವರ ಹಿತಚಿಂತನೆ ಮಾಡುತ್ತ, ದೈವಕ್ಕೆ ನೆರವಾಗಿ, ಇವರಿಗೆ ಅನು ಕೂಲವಾಗಿ ಕೆಲಸಮಾಡುವ ಪರೋಪಕಾರಿ ಜೀವಿಗಳು ನಮ್ಮ ನಡುವೆ ಇರು ವುದು ಸ್ವಾರಸ್ಯ. 'ಪರಾರ್ಥಘಟಕಾಃ ಸ್ವಾರ್ಥಂ ಪರಿತ್ಯಜ್ಯ' ಎನ್ನುವ ವರ್ಣನೆ ಇವರಿಗೆ ಅನ್ವಯಿಸುತ್ತದೆ. ಇವರೇನು ಯೋಗಿಗಳಲ್ಲ; ಜಗದುದ್ಧಾರ ಇವರ ಧ್ಯೇಯವಲ್ಲ. ಅಂತಹ ಉಚ್ಚ ಆದರ್ಶವೇನು ಇವರ ಬಾಳನ್ನು ನಡೆಸುವುದಿಲ್ಲ. ತಮ್ಮ ಹಿತವನ್ನೂ ಸುಖವನ್ನೂ ಬದಿಗಟ್ಟು ಬೇರೆಯವರ ಕಷ್ಟಸುಖಗಳಲ್ಲಿಯೇ ಆಸಕ್ತರಾಗಿರುವವರೂ ಸಮಾಜದಲ್ಲಿ ಬಹುಮಂದಿ ಇರುತ್ತಾರೆ. ಇವರು ಸಾಮಾನ್ಯ ಮನುಷ್ಯರೇ ; ಸಾಮಾನ್ಯರಿಗಿಂತ ಒಂದು ಮಟ್ಟ ಕೆಳಗೇ ಎನ್ನ ಬಹುದು. ಏಕೆಂದರೆ ಸಮಾಜದಲ್ಲಿ ಪ್ರತಿಷ್ಠೆಯನ್ನು ದೊರಕಿಸಿಕೊಡುವಂಥ ವೃತ್ತಿಯನ್ನೇನು ಅವರು ಹಿಡಿದಿರುವುದಿಲ್ಲ; ಅದಕ್ಕೆ ಬದಲಾದ ಕೌಶಲವಾಗಲೀ ವೈದುಷ್ಯವಾಗಲೀ ಅವರಿಗಿರುವುದಿಲ್ಲ. ಅವರ ನಡವಳಿಕೆಯನ್ನು 'ಸಭ್ಯ', 'ಸಂಭಾವಿತ' ಎಂದು ತಾವು ಸಭ್ಯರೆಂದುಕೊಂಡವರು, ಸಂಭಾವಿತರೆಂದು ಕೊಂಡವರು ಪರಿಗಣಿಸುವ ಸಂಭವ ಕಡಮೆ. ಅವರನ್ನು ಕಂಡು ಪರಿಹಾಸ್ಯ ಮಾಡುವುದು ವಾಡಿಕೆ.

ಇದಕ್ಕೆ ಅನುಕೂಲವಾಗಿಯೇ ಅವರ ನಡೆ, ನುಡಿ, ಆಚಾರ ವ್ಯವಹಾರ ವಿಚಿತ್ರವಾಗಿರುವುದೂ ಉಂಟು. ಉಡಿಗೆ-ತೊಡಿಗೆಯಲ್ಲಿ ಓರಣವಿಲ್ಲ, ಅಚ್ಚು ಕಟ್ಟಿಲ್ಲ; ಮಾತುಕತೆಯ ನಯವಿಲ್ಲ ; ನಾಜೂಕಿಲ್ಲ; ಬರುವಾಗ, ಹೋಗು ವಾಗ ಘನವಿಲ್ಲ, ಗಾಂಭೀರ್ಯವಿಲ್ಲ. ಬಿಗುಮಾನವಂತೂ ಇಲ್ಲವೇ ಇಲ್ಲ. ಒರಟು ಸ್ವಭಾವ ಎನ್ನಬಹುದು, ನಿರ್ದಾಕ್ಷಿಣ್ಯ ಪ್ರಕೃತಿ ಎನ್ನಬಹುದು ;

ಸೂಕ್ಷ್ಮಭಾವನೆಗಳು ಅವರಲ್ಲಿ ಸಲ್ಲದೇನೋ ಎನ್ನುವ ಶಂಕೆಯೂ ಉಂಟಾಗ ಬಹುದು. ನೀವು ಹಾಸ್ಯಮಾಡಿದಿರೆಂದರೆ, ಅವರಿಗೇನು ದುಃಖವಿಲ್ಲ. ಅವರ ಮರ್ಯಾದೆಗೇನೂ ಕಡಮೆಯಿಲ್ಲ. ಅದನ್ನು ಗಣನೆಗೆ ತಂದುಕೊಳ್ಳುವ ನಾಜೂಕು ಅವರಿಗಿರುವುದಿಲ್ಲ. ನೀವು ಅವರನ್ನು ನೋಡಿ ನಕ್ಕರೂ ಸಂತೋಷ ಪಟ್ಟರೆಂದು ತಾವೂ ಸಂತೋಷಪಡುತ್ತಾರೆ; ತಮ್ಮ ನಡತೆಯಲ್ಲಿ ಏನೋ ಅನೌಚಿತ್ಯ ಇದ್ದೀತೆಂದು ಅವರಿಗನಿಸುವುದಿಲ್ಲ. ತಮ್ಮನ್ನು ತಾವು ತಿದ್ದಿ ಕೊಳ್ಳಬೇಕೆಂಬ ತವಕ ಅವರಿಗೆ ಕನಸಿನಲ್ಲಿಯೂ ಕಾಣಿಸಿಕೊಳ್ಳುವುದಿಲ್ಲ.

ಹೀಗೆಂದ ಮಾತ್ರಕ್ಕೆ ಅವರನ್ನು ನಿಷ್ಕರುಣಿಗಳು, ಹಟವಾದಿಗಳು, ಶಠರು ಎನ್ನುವ ಹಾಗಿಲ್ಲ. ಇಂಥ ಧೀರೋದಾತ್ತ ವಿದೂಷಕರಿಗೆ ಅನುಕಂಪ ಹೆಚ್ಚು; ಬೇರೆಯವರ ಕಷ್ಟಕ್ಕೆ ಬೇಗ ಮರುಗುವ ಹೃದಯ ಅವರದ್ದು. ಮರುಕ ಅಷ್ಟೇ ಅಲ್ಲ, ತೊಂದರೆಗೀಡಾದವರ ನೆರವಿಗೆ ಹೋಗುವಲ್ಲಿ ಅವರು ಹಿಂದೆ ಮುಂದೆ ನೋಡುವುದಿಲ್ಲ. ಒಂದು ಬಗೆಯ ಅನಾಸಕ್ತ, ಉತ್ಸುಕ, ಕರ್ಮಯೋಗಿಗಳು ಅವರು.

ನನ್ನ ಬಂಧುವರ್ಗದಲ್ಲಿ ಇಂಥ ವ್ಯಕ್ತಿಯೊಬ್ಬರಿದ್ದರು; ಅವರೇ ಈ ಕಥೆ ಯಲ್ಲಿ ಬರುವ ಪಾತ್ರವೊಂದಕ್ಕೆ ಪ್ರೇರಣೆ ನೀಡಿದವರು. ನಾಲ್ಕು ಜನರ ಕಣ್ಣಿಗೆ ಅವರು ಸೋಮಾರಿ, ಒರಟು, ತಿಂಡಿಪೋತ, ಊರವರ ಹವ್ಯಾಸಕ್ಕೆಲ್ಲ ನುಗ್ಗುವ ಕರಡಿ; ದಪ್ಪ ತೊಗಲಿನ ಆಸಾಮಿ; ಶರೀರ ಎಷ್ಟು ಸ್ಥೂಲವೋ ಮನಸ್ಸೂ ಅಷ್ಟೇ ಸ್ಥೂಲ; ಇಂಥ ವಿಷಯ ಮಾತನಾಡಬಹುದು, ಇಂಥ ವಿಷಯ ಮಾತ ನಾಡಬಾರದು ಎಂಬ ಪರಿಗಣನೆ ಇಲ್ಲದವರು; ಹೆಣ್ಣು-ಗಂಡು, ಹಿರಿಯರು-ಕಿರಿಯರು, ಪರಿಚಿತರು, ಅಪರಿಚಿತರು, ಎನ್ನುವ ವಿವೇಕ ಅವರಿಗಿಲ್ಲ. ಅವರ ವಯಸ್ಸು ನಲವತ್ತಾದರೂ ಎಳೆಯ ಹುಡುಗರೂ ಏಕವಚನದಲ್ಲಿಯೇ ಅವ ರೊಂದಿಗೆ ಮಾತನಾಡುವರು. ನಾನೊಬ್ಬನೇ ಅವರಿಗೆ ಗೌರವ ಕೊಟ್ಟು, ಮರ್ಯಾದೆಯಿಂದ ಮಾತನಾಡಿಸುತ್ತಿದ್ದುದು. ಎಲ್ಲರಿಗೂ ಅವರಲ್ಲಿ ತುಂಬ ಸಲಿಗೆ; ಎಲ್ಲರ ಗೇಲಿಗೆ ಅವರು ಗುರಿ. ಆದರೆ ಎಲ್ಲರೂ ಅವರಿಂದ ಅದು, ಇದು ಕೆಲಸ ಮಾಡಿಸಿಕೊಳ್ಳುವವರೇ; ಎಲ್ಲರಿಗೂ ಅವರ ನೆರವು ಮತ್ತೆ ಮತ್ತೆ ಅಗತ್ಯ ವಾದದ್ದೇ. ಅವರಿಗೂ 'ಇವರು ನನ್ನನ್ನು ಬಯ್ದರು, ಇವರು ನನ್ನನ್ನು

ಗೇಲಿ ಮಾಡಿದರು' ಎಂದು ಮುಂತಾದ ನೆನಪುಗಳು ಬಾರವು ; ತಮ್ಮ ಕೈಲಾದ, ಆಗದ ಎಲ್ಲ ನೆರವನ್ನೂ ಎಲ್ಲರಿಗೂ ಎಲ್ಲ ಸಮಯದಲ್ಲಿಯೂ ಒದಗಿಸಲು ಅವರು ಎಂದೂ ಸಿದ್ಧವೇ. ಪ್ರತಿಫಲಾಪೇಕ್ಷೆಯಿಲ್ಲದೆ ಎಂದು ಬೇರೆ ಹೇಳಬೇಕೆ ?

ನಾನೂ ಅವರನ್ನು ಗೇಲಿಮಾಡಿದ್ದೇನೆ, ಅವರ 'ಅಗತ್ಯವಿಲ್ಲದ ಸಹಾಯ'ಕ್ಕೆ ಕೋಪಗೊಂಡಿದ್ದೇನೆ, 'ಅಧಿಕ ಪ್ರಸಂಗಿ'ಯೆಂದು ಕರೆದಿದ್ದೇನೆ. ಆದರೆ ಇದರಿಂದ ಅವರಿಗೆ ಯಾವ ಸಂದರ್ಭಲ್ಲಿಯೂ ನನ್ನ ಮೇಲೆ ಅನಾದರ ಬರಲಿಲ್ಲ, ಬೇಕಾದಾಗ ನೆರವನ್ನು ಬಿಗಿ ಹಿಡಿಯಲಿಲ್ಲ. ನನ್ನನ್ನು ಒಂದೇ ಸಮನೆ ಕಂಡುಕೊಂಡರು ಎಂಬುದನ್ನು ಅರಿತು ನಾಚಿಕೆ ಪಟ್ಟಿದ್ದೇನೆ. ನಿಜವಾಗಿ 'ಅಜಾತಶತ್ರು'ವೆಂದರೆ ಅವರೇ, 'ವಸುಧೈವ ಕುಟುಂಬಕರಾದ ಉದಾರ ಹೃದಯ'ವೆಂದರೆ ಅಂಥವರೇ ಎಂದು ನನ್ನ ನಂಬಿಕೆ. ನಾಲ್ಕೂ ಜನ ಅವರನ್ನು 'ದಡ್ಡ', 'ಮೊಂಡು', 'ತಲೆಹರಟೆ', ಹೊಟ್ಟೆಬಾಕ', 'ಒರಟ', ಎಂದು ವರ್ಣಿಸುತ್ತಿದ್ದರೆ ಅದಕ್ಕೆ ಆಧಾರವಿಲ್ಲದೆ ಇರುತ್ತಿರಲಿಲ್ಲ ; ಆದರೆ ಇವು ಅವರ ವ್ಯಕ್ತಿತ್ವದ ಹೊರ ಆವರಣದ ವಿವರಗಳಷ್ಟೆ. ಮುಖ್ಯವಾಗಿ ಆ ವ್ಯಕ್ತಿತ್ವದ ಗುಣವೆಂದರೆ ಔದಾರ್ಯ.

ಅವರು ತೀರಿಕೊಂಡು 6-7 ವರ್ಷಗಳಾದುವು. ಅಷ್ಟು ಸಣ್ಣ ಪ್ರಾಯದಲ್ಲಿಯೇ ಡಯಾಬಿಟೀಸ್ ರೋಗ ಅವರ ಮೈಯಲ್ಲಿ ಮನೆಮಾಡಿದ್ದಿತು. ತೀರಿಕೊಳ್ಳುವುದಕ್ಕೆ ಒಂದು ಗಂಟೆ ಮೊದಲು ಯಾರೋ ಒಬ್ಬ ಮೇಸ್ತ್ರಿಯ ನೆರವಿಗೆ ಹೋಗಿದ್ದವರು, ನಡುಹಗಲಿನಲ್ಲಿ ಮನೆಗೆ ಹಿಂದಿರುಗಿ ಮಲಗಿ ಇದ್ದಕ್ಕಿದ್ದಂತೆ ಪ್ರಾಣಬಿಟ್ಟರು. ಎಲ್ಲರ ಕಷ್ಟಕ್ಕೂ ತಾನು ಮುಂದು ಎಂದು ಹೋಗುತ್ತಿದ್ದ ಈ ವ್ಯಕ್ತಿ ಕಡೆಯ ಗಳಿಗೆಯಲ್ಲಿ ಕೂಡ ಇಷ್ಟೂ ಕಷ್ಟ ಕೊಡದೆ ಸತ್ತುದು ಆಕಸ್ಮಿಕವೆ ? 'ಶರಣರ ಮರಣ' ಎನ್ನುವ ಮಾತಿಗೆ ಬೆಲೆಯಿಲ್ಲವೆ ?

ಅವರನ್ನು ನೆನಪು ಮಾಡಿಕೊಂಡಾಗಲೆಲ್ಲ ಅವರ ಬಗ್ಗೆ ನನ್ನ ಗೌರವ ಹೆಚ್ಚುತ್ತದೆ, ಬದುಕಿನ ತಾತ್ಪರ್ಯವನ್ನು ಆತ ಮಾತನಾಡದೆ ನನಗೆ ತಿಳಿಸಿರುವ ಹಾಗೆ ಬೇರೆಲ್ಲಿಂದಲೂ ನನಗೆ ತಿಳಿದು ಬಂದಿಲ್ಲ. ಇದ್ದಾಗ ಮಿತ್ರನಂತೆ ವರ್ತಿಸುತ್ತಿದ್ದ ಅವರು ಇಲ್ಲವಾದಾಗ ಗುರುವಂತೆ ಆಗಿದ್ದಾರೆ. ನನ್ನ ಈ

ಕಥೆಗೆ ಅವರೇ ಸೂತ್ರಧಾರಿ; ಈ ಕಥೆಯನ್ನು ಅವರಿಗೇ ಕೃತಜ್ಞತೆಯಿಂದ ಸಮರ್ಪಿಸಿದ್ದೇನೆ.

ಕಾದಂಬರಿಯ ಜಾತಿಗೆ ಸೇರುವ ಈ ಕಥೆ ನನ್ನಿಂದ ಹೇಗೆ ಹೊರ ಬಂದಿತೋ ನನಗೇ ಆಶ್ಚರ್ಯ. ಇದೇ ನನ್ನ ಮೊದಲ ಪ್ರಯತ್ನ; ಬಹು ಮಟ್ಟಿಗೆ ಇದೇ ಕಡೆಯದೂ ಆದೀತೋ ಏನೋ! ಮಕ್ಕಳಿಗೆ ಕಥೆ ಹೇಳು ವುದು, ಕಥೆ ಬರೆಯುವುದು ನನಗೆ ತುಂಬ ಇಷ್ಟವಾದ ಕೆಲಸಗಳು; ಮಾಡಿ ದ್ದೇನೆ. ಆದರೆ ಬೆಳೆದವರ ಪಾಲಿಗೆ ನಾನು 'ಪಂಡಿತ' ಅಷ್ಟೆ—ನನ್ನಿಂದ ಅವರಿಗೆ ದಕ್ಕಿರುವುದು ನೀರಸವಾದ ಶಾಸ್ತ್ರ ಪ್ರಬಂಧಗಳು, ಅಂಥವೇ ಗ್ರಂಥಗಳಷ್ಟೆ. ಈಗ ಸರಸವಾದ ಬರಹವೊಂದನ್ನು ಅವರಿಗೆ ಕೊಡಲು ಯತ್ನಿಸಿದ್ದೇನೆ. ಅಭ್ಯಾಸ ವಿಲ್ಲದ ಬ್ರಾಹ್ಮಣ ಅಗ್ನಿಹೋತ್ರ ಮಾಡಿದಂತೆಯೇ ಆಗಿದೆಯೋ ತಿಳಿಯದು.

ಅಚ್ಚಿಗೆ ಕಳುಹಿಸುವ ಮೊದಲು ಕೆಲವರು ಸ್ನೇಹಿತರಿಗೆ ಇದನ್ನು ಓದಿ, ತಿಳಿಸುವಂತೆ ಕೊಟ್ಟೆನು. ಅವರು ಚೆನ್ನಾಗಿದೆಯೆಂದು ಮೆಚ್ಚಿಕೊಂಡು ಉತ್ತೇಜಿಸಿದರು. ದಾಕ್ಷಿಣ್ಯಕ್ಕಿದ್ದೀತೆಂದು ನನಗೆ ಅನಿಸದಿರಲಿಲ್ಲ. ಆದರೂ ಧೈರ್ಯಮಾಡಿ ಅಚ್ಚುಮನೆಯವರಿಗೆ ಕಳುಹಿಸಿದ್ದೇನೆ, ಅಲ್ಲಿಂದ ಹೊರ ಬಂದುದೂ ಆಯಿತು! ನಿಮ್ಮ ಮುಂದೆ ಬಂದೂ ಇದೆ; ಕಡೆಯವರೆಗೂ ಓದುವುದು ಸಾಧ್ಯವಾದರೆ ನನ್ನ ಕೆಲಸ ನಿರರ್ಥಕವಾಗಲಿಲ್ಲವೆಂದು ಕೊಳ್ಳುತ್ತೇನೆ.

ಜಯನಗರ, ಬೆಂಗಳೂರು. —ಎಸ್. ಕೆ. ರಾಮಚಂದ್ರರಾವ್

ಮಾರ್ಚ್ 10, 1971

೧

ಸಂತೆ ಸೇರುವ ಮೊದಲೇ ಗಂಟು ಕಳ್ಳರು ನೆರೆದ ಹಾಗೆ, ಹಾಸಿಗೆಯಿಂದ ಏಳುವ ಮೊದಲೇ ಆಗಂತುಕರ ಕಾಟವಾದರೆ ಹೇಗೆ? ಪರದೆಯನ್ನು ಸರಿಸಿ ಹಾಸಿಗೆಯಿಂದ ಹೊರಗೆ ಹಾರುವಷ್ಟು ಎಚ್ಚರವಾಗುವುದು ಎಷ್ಟು ಕಷ್ಟವೆಂದು ಬಾಗಿಲು ಕುಟ್ಟುತ್ತಿರುವ ಆ ಅನಿಷ್ಟಕ್ಕೇನು ಗೊತ್ತು? ನನ್ನನ್ನು ನಾನೇ ಎಚ್ಚರಿಸಿಕೊಳ್ಳಲು ಉದಯರಾಗವನ್ನು ಹಾಡಿಕೊಳ್ಳುವುದು ನನ್ನ ವಾಡಿಕೆ. "ಏಳಯ್ಯ ಬೆಳಗಾಯಿತು!" ಎಂದು ನನಗೆ ನಾನೇ ಅಂದುಕೊಳ್ಳದೆ ನನಗೆ ಬೆಳಗಾಯಿತೆಂಬ ನಂಬಿಕೆಯೇ ಉಂಟಾಗದು. ಸೂರ್ಯನೇ ಬಂದು ಮುಂದೆ ನಿಂತರೂ ನಂಬುವ ಆಸಾಮಿ ನಾನಲ್ಲ. ದಾಸರಾಯರೇನೋ ಉದಯ ಕಾಲದಲ್ಲೇ ಗಡಗಡ ನಡುಗುತ್ತಾ ಎದ್ದು ಅನಂತರ ಆ ಲಕ್ಷ್ಮೀರಮಣ ಶ್ರೀಗಿರಿಯವಾಸ ಶ್ರೀ ವೆಂಕಟೇಶನನ್ನು ಎಬ್ಬಿಸಲು ಸಿದ್ಧವಾಗುತ್ತಿದ್ದರು. ಸೋಮಾರಿತನದ ಸುಖ ಅವರಿಗೆ ತಿಳಿದಿದ್ದರೆ ಅವರೇಕೆ ದಾಸರಾಗುತ್ತಿದ್ದರು? ಎಂಟು ಗಂಟೆಯವರೆಗೆ ಮಲಗಿರುವ ಸೌಲಭ್ಯ ಅವರಿಗಿದ್ದಿದ್ದರೆ, ಹಕ್ಕಿ ಚಿಲಿಪಿಲಿ ಎನ್ನುವಾಗಲೇ ವಿಶ್ವನಿಯಾಮಕನಾದ ಭಗವಂತನನ್ನೇ ಎಚ್ಚರಗೊಳಿಸುವ ಹುಚ್ಚುತನಕ್ಕೆ ಏಕೆ ಕೈಹಾಕುತ್ತಿದ್ದರು? ಅಂತೂ, ಅವರ ಉದಯರಾಗವೇನೋ ನನ್ನ ಉದಯ ಕಾಲದ ಬೀಗಕ್ಕೆ ಕೀಲಿಕೈಯಾಗಿ ಬಿಟ್ಟಿದೆ. ಇದನ್ನು ಸಾವಧಾನವಾಗಿ ಹೇಳಿಕೊಳ್ಳಲೂ ಅವಕಾಶ ಕೊಡದೆ ಕದ ತಟ್ಟಿ ಕುಟ್ಟಿ, ಕೂಗಿ ಕರೆದು ಗದ್ದಲ ಮಾಡಿದರೆ ಹೇಗೆ?

ಬಂದಾತ ಇಷ್ಟೆಲ್ಲ ಮಾಡಲಿಲ್ಲವೆನ್ನಿ. ಆದರೂ ಏಳುವ ಮನಸ್ಸಿಲ್ಲದಿದ್ದರೆ ಸ್ವಲ್ಪ ಮಾಡಿದರೂ ದೊಡ್ಡದಾಗಿ ಕಾಣುತ್ತದೆಯಷ್ಟೆ. ಇಷ್ಟು ಸಡಗರದಿಂದ ಬಂದವರ ಅವಸರ ಏನಿದ್ದೀತೆಂದು ಊಹೆ ಮಾಡಲು ಅವಕಾಶವಿಲ್ಲ. ಬಂದಿರುವವರನ್ನು ಹಾಗೆಯೇ ಹಿಂದಿರುಗಿಸಲು ಹಂಚಿಕೆಯನ್ನು ನನ್ನ ಮಡದಿ–ಮಕ್ಕಳೊಂದಿಗೆ ಹೂಡುವಷ್ಟು ವ್ಯವಧಾನವೂ ಇಲ್ಲ. ನನಗಾಗಿ ನಾನೇ ಮರುಗಿ, ಬಂದಾತನನ್ನು ಶಪಿಸಿ, ಹೇಗೋ ಎದ್ದು, ಬಾಗಿಲು ತೆರೆಯುವ ಮುನ್ನ ಕಿಟಕಿಯಿಂದ ಕಣ್ಣು ಹಾಯಿಸಿ ನೋಡಿದೆ. ಬಂದಾತನೇನು ಕಂಗಾಲನಂತೆ ಕಾಣ

ಲಿಲ್ಲ. ಇನ್ನೂ ತರುಣನಾದರೂ ಹುಡುಗುತನ ಇರಲಿಲ್ಲ. ನನಗೆ ಈ ಮೊದಲು ಪರಿಚಿತನಲ್ಲದಿದ್ದರೂ ಬೇಡವಾದವನೆನಿಸಲಿಲ್ಲ. ಉಡುಗೆಯಲ್ಲಿ ಗಾಂಭೀರ್ಯ ವಿದ್ದಿತು. ಮುಖದಲ್ಲಿ ಕಾತರ ಕಾಣುತ್ತಿತ್ತು ಏನೋ ದುರ್ದೈವಕ್ಕೆ, ಅಪ ಚಾರಕ್ಕೆ ಸಂದವನೆಂಬ ಸೂಚನೆ ಇದ್ದಿತು. ಮುಂಜಾನೆಯೇ ಕಷ್ಟದ ಕಥೆ ಯನ್ನು ಕೇಳಬೇಕಾಗಬಹುದೆಂಬ ಶಂಕೆ ನನಗುಂಟಾದರೂ, ನಿರರ್ಥಕವಾಗಿ ವೇಳೆ ಕಳೆಯಲು ನನ್ನ ಮನೆಯನ್ನೇ ಬಳಸಿಕೊಳ್ಳುವ ಹಲವು ವೈರಿ ಮಿತ್ರರಲ್ಲಿ ಇವನೊಬ್ಬ ಅಲ್ಲವೆಂಬ ಸಮಾಧಾನ ಹೇಗೋ ಮೂಡಿತು.

ಎದೆಯನ್ನು ನೇವರಿಸಿಕೊಂಡು, ಜೀವವನ್ನು ಗಟ್ಟಿಯಾಗಿ ಹಿಡಿದು ಬಾಗಿಲನ್ನು ತೆರೆದೆ. ಬಂದಾತ ಮುಂದೆ ಬಂದು, "ನಮಸ್ಕಾರ, ಸ್ವಾಮಿ" ಎಂದ. ನಾನೂ ಉಪಾಯಗಾಣದೆ "ನಮಸ್ಕಾರ ಬನ್ನಿ, ಏನಾಗಬೇಕು" ಎನ್ನ ಬೇಕಾಯಿತು. ಕರೆಸಿಕೊಳ್ಳದೆ ಬಂದಾತ ಬನ್ನಿರೆಂದು ಕರೆದಾಗ ಬರದೆ ಇರು ತ್ತಾನೆಯೇ? ಆತ ಒಳಗೆ ಬಂದು ನಾನು ತೋರಿಸಿದ ಕುರ್ಚಿಯ ಮೇಲೆ ಕುಳಿತು,

"ನನ್ನ ಪರಿಚಯ ನಿಮಗಿಲ್ಲ" ಎಂದು ಆರಂಭಿಸಿದ. "ಇಲ್ಲ"ವೆಂದು ನಾನೂ ಒಪ್ಪಿಕೊಳ್ಳಲು ಕಷ್ಟವಾಗಲಿಲ್ಲ.

"ನನ್ನ ಊರು ಮಂಗಳೂರು"

"ಒಳ್ಳೆಯದು, ನನ್ನದು ಸಾಲಿಗ್ರಾಮ"

"ನನ್ನ ಹೆಸರು ಪದ್ಮನಾಭಶೆಟ್ಟಿ"

ನನ್ನ ಹೆಸರನ್ನೂ ಹೇಳಿಕೊಂಡೆ.

"ತಮ್ಮ ಹೆಸರು ತಿಳಿಯದೆ ತಮ್ಮ ಮನೆಗೆ ಬರುತ್ತೇನೆಯೇ ಸ್ವಾಮಿ."

"ಹೌದೆನ್ನಿ, ವಿಷಯ ಏನು?"

"ತಮಗೆ ಪುರಸೊತ್ತಿದ್ದರೆ........" ಎಂದು ಆತ ಶುರು ಮಾಡಿ ನಿಲ್ಲಿಸಲು; ನಾನು "ಇಲ್ಲದೆ ಏನು ಶೆಟ್ಟರೆ" ಈಗಿನ್ನೂ ಸರಿಯಾಗಿ ಬೆಳಗೇ ಆಗಿಲ್ಲ. ರಾತ್ರಿ ಹನ್ನೊಂದು ಗಂಟೆಗೆ ಮಲಗುವವರೆಗೂ ಪುರುಸೊತ್ತೇ! ನನ್ನನ್ನು ಕಾಣಲೆಂದು ಮಂಗಳೂರಿನಿಂದ ಬೆಂಗಳೂರಿನವರೆಗೆ ಬಂದಿದ್ದೀರಿ. ನನಗೆ ಪುರುಸೊತ್ತಿಲ್ಲವೆಂದರೆ ಹೇಗೆ? ಹೇಳಿ, ಹೇಳಿ, ಸಂಕೋಚ ಬೇಡ" ಎಂದು ನಾನು ದನಿಗೂಡಿಸಿದೆ. ಆತನ ಕಥೆಯನ್ನು ಕೇಳುವ ಕುತೂಹಲ ನನ್ನಲ್ಲಿ ಸ್ವಲ್ಪಮಟ್ಟಿಗೆ ಕೆರಳಿದ್ದಿತು.

"ಏನಿಲ್ಲ............" ಎಂದು ಆತ ರಾಗ ತೆಗೆದಾಗ ನನಗೆ ನಿರಾಶೆಯೇ ಆಯಿತು. ಯಾವುದೋ ಭೀಕರ ಕೊಲೆ, ಏನೋ ಭಯಾನಕ ದರೋಡೆ, ಎಲ್ಲಿಯೋ ಅದ್ಭುತ ದಂಡಯಾತ್ರೆ, ಯಾರದೋ ಅಸಹ್ಯ ಶೃಂಗಾರ, ನಿಸ್ಸೀಮ ಸಾಹಸ ಇಂಥ ಕಥೆಗಳನ್ನು ಈ ಸುಪ್ರಭಾತ ಸಮಯದಲ್ಲಿ ಅವಗಾಹಿಸಬಹುದೆಂದು ಮನಸ್ಸಿನಲ್ಲೇ ಮೆಲಕು ಹಾಕುತ್ತಿದ್ದ ನನಗೆ "ಏನಿಲ್ಲ" ಎನ್ನುವ ನಾಂದಿ ಹಿಡಿಸಲಿಲ್ಲ. ಏನಿಲ್ಲದಿದ್ದರೆ ಇಷ್ಟು ದೂರ ಬಂದುದೇಕೆ? ಬೆಂಗಳೂರೇನು ಮಂಗಳೂರಿಗೆ ನೆರೆಮನೆಯೇ? ಅಷ್ಟು ಗಡಿಬಿಡಿಯಿಂದ ನನ್ನನ್ನು ಎಬ್ಬಿಸಿದುದೇಕೆ? 'ಸುಖ ಸಂಕಥಾ ವಿನೋದ'ಕ್ಕೇನು ಈ ಮುಂಜಾನೆ ಸಂಜೆಯೆ? ನನಗೆ ಸುಮಾರಾಗಿ ಸಿಟ್ಟೊ ಬಂದಿತು. ಆದರೂ ಯಾವ ಅದ್ಭುತ ಕಾದಂಬರಿಯ ಪ್ರಸ್ತಾಪವೋ ಇದು ಎಂಬ ಪ್ರತೀಕ್ಷೆಯಿಂದ ಅವನನ್ನೇ ದಿಟ್ಟಿಸುತ್ತ ಕುಳಿತೆ.

"ತುಂಬ ತೊಂದರೆಯಲ್ಲಿ ಸಿಕ್ಕಿದ್ದೇನೆ, ಸ್ವಾಮಿ. ನಿಮ್ಮಿಂದ ನೆರವಾದೀತೆಂದು ಬಂದೆ."

ಸರಿಯೇ, ತೊಂದರೆ ಯಾರಿಗೆ ಬರದು? ಮನುಷ್ಯನಿಗೆ ಬರದೆ ಮರಕ್ಕೆ ಬರುತ್ತದೆಯೇ? ಕಂಡು ಕೇಳದ ಮನುಷ್ಯ, ಏಳುವ ಮೊದಲೇ ಬಂದು ತೊಂದರೆಯ ಕಥೆಯನ್ನು ಕೊರೆಯುವುದು ನನಗೆ ತೊಂದರೆಯಲ್ಲವೇ? ಆದರೆ, ಬರುವ ತೊಂದರೆಗಳಿಗೆಲ್ಲ ನೆರವು ನನ್ನಿಂದ ದೊರೆಯುವುದೆಂದು ಇವನಿಗೆ ಯಾರು ಹೇಳಿದರು? ಸಂಕಟಹರಣನೆಂದು ಹೆಸರು ಹೊತ್ತ ವೆಂಕಟರಮಣ ನನ್ನನ್ನು ಅವನ ಪ್ರತಿನಿಧಿಯನ್ನಾಗಿ ಈ ಊರಿನಲ್ಲಿ ನೇಮಿಸಿದ್ದಾನೆಯೇ" ನೆರವು ಅನ್ನುವ ಮಾತು ನನಗೇನು ಹೊಸದಲ್ಲ. ಸಭೆಯಲ್ಲಿ ಮಾತನಾಡಿ, ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಪುಸ್ತಕವನ್ನು ಬಿಡುಗಡೆ ಮಾಡಿ, ಪ್ರದರ್ಶನವನ್ನು ಉದ್ಘಾಟಿಸಿ, ಪತ್ರಿಕೆಗೆ ಲೇಖನ ಬರೆದು ಕೊಡಿ ಎಂದು ಮುಂತಾಗಿ ಜನ ನನ್ನನ್ನು ಕಾಡುವುದುಂಟು. ಅವರೆಲ್ಲರೂ ನೆರವೆಂಬ ಮಂತ್ರವನ್ನೇ ಮುಂದಿಟ್ಟುಕೊಂಡು ಬರುತ್ತಾರೆ. ನೆರವು ಮುಗಿದ ಮೇಲೆ ಮರೆವು ಕಟ್ಟಿಟ್ಟದ್ದೇ! ಯಾರಿಗೆ ಯಾರೋ, ವೆಂಕಟರಮಣ! ಇದರ ಮೇಲೆ ಒಂದು ಸಂಶೋಧನೆಯನ್ನೇ ನಡೆಸುವಷ್ಟು ವಿವರ ನನ್ನಲ್ಲುಂಟು. ಯಾರಿಗೂ ನೆರವನ್ನು ದೊರಕಿಸಿ ಕೊಡುವ ಹೊಣೆಗಾರಿಕೆ ನನ್ನದಲ್ಲವೆಂದೂ, ಹುಲ್ಲು ಮೇಯಿಸುವುದು ಹುಟ್ಟಿಸಿದ ದೇವರ ಹೊಣೆಗಾರಿಕೆಯೆಂದೂ ನಾನು ಎಲ್ಲರಿಗೂ ಹೇಳಿದ್ದೇನೆ. ಆದರೆ ನನ್ನ ಮಾತು

ದಿಟವೆಂದು ಈವರೆಗೆ ಯಾರೂ ನಂಬಿಲ್ಲ; ನನ್ನ ಪಾಡಿಗೆ ನನ್ನನ್ನು ಬಿಡುವುದಿಲ್ಲ. ಅದು ಹೋಗಲಿ, ಕೊಂದರೆಯೇನೆಂದು ತಿಳಿಯುವ ಮೊದಲೇ ನೆರವಿನ ಜಿಜ್ಞಾಸೆ ಏಕೆ?

"ನಿಮ್ಮ ಕಾಲೇಜಿನಲ್ಲಿ ನಿಮ್ಮ ಬಳಿ ಓದುತ್ತಿರುವ ಹುಡುಗಿಯೊಬ್ಬಳಿದ್ದಾಳೆ."

"ಒಬ್ಬಳೇನು ಸ್ವಾಮಿ, ಎಂಟು ಜನ ಇದ್ದಾರೆ!" ಎಂದೆ. ಈ ಅಷ್ಟ ಕನ್ಯೆಯರೇನು ಪ್ರಾತಃಸ್ಮರಣೀಯರೆ? ಬೆಂಗಳೂರಿನ ಈ ಕನ್ನಿಕೆಯರಿಗೂ ಮಂಗಳೂರಿನ ಪದ್ಮನಾಭಶೆಟ್ಟರಿಗೂ ಏನು ಸಂಬಂಧ? ಏನಾದರೂ ಸಂಬಂಧವಿದ್ದರೂ ಕಾಲೇಜಿಗೆ ಬಂದು ಪ್ರಸ್ತಾಪಿಸಬಹುದಲ್ಲ? ಆ ಹುಡುಗಿಯರನ್ನು ಕುರಿತು ಮನೆಯಲ್ಲಿ ಅದೂ ಮಡದಿಯಿದ್ದಾಗಲೇ ಚರ್ಚಿಸುವುದು ಏನು ಚೆನ್ನು?"

"ಪದ್ಮಾವತಿಯೆನ್ನುವ ಹುಡುಗಿ, ಅವಳು ನನ್ನ ತಂಗಿ."

"ಓ, ಹಾಗೇನು? ಸರಿ, ಈಗ ವಿಷಯ ಏನು ಹೇಳಿ!" ಎಂದು ಅನಾಸಕ್ತಿಯನ್ನು ಮೇಲೆ ನಟಿಸಿದರೂ ನನ್ನ ಮನಸ್ಸು ಮಾತ್ರ ಮಿಡಿಯುತ್ತಲೇ ಇತ್ತು. ಮಂಗಳೂರಿನ ಹುಡುಗಿ ಬೆಂಗಳೂರಿನಲ್ಲೇಕೆ ಓದುತ್ತಿದ್ದಾಳೆ? ಅಲ್ಲಿ ಕಾಲೇಜಿಲ್ಲವೇ? ಅವಳನ್ನು ಅರಸಿಕೊಂಡು ಈ ಅಣ್ಣ ಇಲ್ಲಿಗೆ ಬಂದಿರುವುದು ಏನು? ನನ್ನ ಬಳಿಗೆ ಅವನು ಬಂದಿರುವುದರ ತಾತ್ಪರ್ಯ ಏನು? ಕಲ್ಪನೆಗೆ ಸಾವಿರ ಕಾಲು............ಊಹೆ ಮಾಡಲು ತೊಡಗಿದರೆ ಅದಕ್ಕೆ ಅಡ್ಡಿಯೆ, ಆತಂಕವೆ? ಅವತ್ತು ಹೇಗೂ ಭಾನುವಾರ, ಕಾಲೇಜೂ ಇಲ್ಲ; ಬೇರೆ ಕೆಲಸವೂ ಇಲ್ಲ. ಇದೊಂದು ಮನಸ್ಸಿನ ರಾವಣ ಹೊಟ್ಟೆಗೆ ಮಜ್ಜಿಗೆಯೇ ಆಗಲಿ, ನಷ್ಟವೇನು? ಏಳಲು ಉತ್ಸುಕನಾಗಿಯೇ ಕುಳಿತಿದ್ದವನು ಈಗ ಸುಖಾಸೀನನಾದೆ.

"ಅವಳು ಇಲ್ಲಿ ಓದುವುದು ನಮಗೆ ಇಷ್ಟವಿಲ್ಲ. ಆದರೂ ಹಟ ಹಿಡಿದು ಬಂದಿದ್ದಾಳೆ. ನಮ್ಮ ತಾಯಿ ಬೇನೆಯಿಂದ ಹಾಸಿಗೆ ಹಿಡಿದಿದ್ದಾರೆ. ನನ್ನ ತಂಗಿಯ ನಿರ್ಧಾರವನ್ನು ಬದಲಾಯಿಸಲು ನಿಮ್ಮ ನೆರವು ದೊರಕೀತೆಂದು ನಾನು ಬಂದೆ" ಎಂದಾಗ ಅವನ ಮುಖದಲ್ಲಿ ನಿಜವಾದ ಕಾತರ ಇದ್ದುದಸ್ಪಷ್ಟವಾಯಿತು. ಆದರೂ ನಾನು—

"ಸ್ವಾಮಿ, ನನ್ನ ಕೆಲಸ ಪಾಠ ಹೇಳುವುದಷ್ಟೆ, ಕಲಿಯಲು ಬರುವವರ

ಗೃಹಕೃತ್ಯದಲ್ಲಿ ಆಸಕ್ತಿ ವಹಿಸುವ ಹವ್ಯಾಸ ನನಗಿಲ್ಲ. ಜನವಾದರೂ ಏನಂದಾರು, ಹೇಳಿ ! ಅನ್ಯಥಾ ಭಾವಿಸಬೇಡಿ. ನಿಮಗೆ ಸಹಾಯ ಮಾಡುವ ಇಷ್ಟ ನನಗಿಲ್ಲವೆಂದು ಬಗೆಯಬೇಡಿ. ಆದರೆ ನಾನು ಇದರಲ್ಲಿ ಪ್ರವೇಶ ಮಾಡಬಾರದು. ನನ್ನ ವ್ಯಾಪ್ತಿಗೆ ಮೀರಿದ ವಿಚಾರ ಇದು. ನೀವು ತಿಳಿದವರು, ಓದಿದವರು ಅರ್ಥಮಾಡಿಕೊಳ್ಳುತ್ತೀರಿ" ಎಂದೆ.

ಇಷ್ಟರಲ್ಲಿ ಗಂಟೆ ಎಂಟಾದರೂ ಮುಖ ತೊಳೆಯುವುದನ್ನೂ ಮರೆತು ಪಟ್ಟಾಂಗ ಹೊಡೆಯುತ್ತ ಕುಳಿತ ನನ್ನನ್ನು ನಿತ್ಯೋತ್ಸವದ ಅಂಕುರಾರ್ಪಣಕ್ಕೆ ಉಜ್ಜುಗಿಸಲು ನನ್ನ ಹೆಂಡತಿ ನಾವು ಕುಳಿತಿದ್ದ ಪಡಸಾಲೆಗೆ ಬಂದು "ಕಾಫಿ ತರಲೇ ?" ಎಂದು ಕೇಳಿದಳು. "ಮುಖವನ್ನೇ ತೊಳೆದಿಲ್ಲ ನಾನಿನ್ನೂ" ಎಂದುಕೊಂಡು ಎದ್ದೆ. ಬಂದವನ ಕಡೆ ತಿರುಗಿ "ಕೂಡಿ ಸ್ವಾಮಿ, ಸ್ವಲ್ಪ ಒಳಗೆ ಹೋಗಿ ಬರುತ್ತೇನೆ. ಅವಸರವಿಲ್ಲವಷ್ಟೆ? ಸ್ವಲ್ಪ ಕಾಫಿ ಕುಡಿದು ಹೋಗುವಿರಂತೆ" ಎಂದೆ. ಪದ್ಮನಾಭನೂ ಎದ್ದು "ಬೇಡ, ಸ್ವಾಮಿ, ಕ್ಷಮಿಸಿ ನಿಮ್ಮ ವೇಳೆಯನ್ನು ಆಗಲೇ ಸಾಕಷ್ಟು ಕಳೆದಿದ್ದೇನೆ. ನಿಮಗೆ ಬಿಡುವಾದಾಗ ಮತ್ತೊಮ್ಮೆ ಬರುತ್ತೇನೆ. ದೊಡ್ಡ ಮನಸ್ಸು ಮಾಡಿ ನನ್ನ ಕಷ್ಟವನ್ನಷ್ಟು ಮನಸ್ಸಿಗೆ ಹಚ್ಚಿಕೊಳ್ಳಿರೆಂದು ಬೇಡಿಕೊಳ್ಳುತ್ತೇನೆ" ಎಂದು ಎದ್ದು ನಿಂತನು. ನಾನು "ನನಗೆ ಈಗಲೇ ಬಿಡುವು, ಕೂಡಿ ಸ್ವಾಮಿ, ಮಾತನಾಡೋಣ ಎಂದಷ್ಟು ಹೇಳಿ ಒಳಗೆ ಹೋಗಿ ನಿತ್ಯಕರ್ಮವನ್ನು ತೀರಿಸಿಕೊಂಡು ಬಂದು ಮತ್ತೆ ಕುಳಿತೆ. ಕಾಫಿಯೂ ಬಂದಿತು.

"ಪದ್ಮನಾಭಶೆಟ್ಟರೆ, ನೀವು ಬೆಂಗಳೂರಿಗೆ ಎಂದು ಬಂದಿರಿ ?"

"ನೆನ್ನೆ ರಾತ್ರಿ ಸ್ವಾಮಿ."

"ಎಷ್ಟು ದಿನ ಇರುತ್ತೀರಿ ?"

"ಈ ರಾತ್ರಿಯೇ ಹೊರಡುತ್ತೇನೆ, ಸ್ವಾಮಿ."

"ಹ್ಹಾ, ಅದೇನು ಅಷ್ಟು ಅವಸರ ? ಏನು ಕೆಲಸಕ್ಕೆ ಬಂದಿರಿ ಎಂದು ಕೇಳಬಹುದೆ ?"

"ನಿಮ್ಮನ್ನು ಕಾಣುವುದೇ ಮುಖ್ಯ ಕೆಲಸವಾಗಿದ್ದಿತು, ಸ್ವಾಮಿ. ಮತ್ತೊಂದು ಕೆಲಸವೆಂದರೆ ಈ ದಿನ ಒಂದು ಗಂಟೆಗೆ ಇಂಟರ್‌ವ್ಯೂ ಬಂದಿದೆ."

"ಎಲ್ಲಿ ?"

"ನಿಮ್ಮ ಕಾಲೇಜಿನಲ್ಲೇ. ಕೆಮಿಸ್ಟ್ರಿ ವಿಭಾಗದಲ್ಲಿ ಡೆಮಾನ್‌ಸ್ಟ್ರೇಟರ್ ಕೆಲಸಕ್ಕೆ ಅರ್ಜಿ ಹಾಕಿದ್ದೆ. ಇವತ್ತು ಕರೆದಿದ್ದಾರೆ."

"ಅಲ್ಲ ಸ್ವಾಮಿ, ನಿಮ್ಮ ತಂಗಿಯನ್ನು ಮಂಗಳೂರಿಗೆ ಕಳುಹಿಸಬೇಕೆನ್ನುತ್ತೀರಿ. ನೀವು ಇಲ್ಲಿಗೆ ಬರುತ್ತೀರಾ? ಅದಿರಲಿ, ನೀವು ಈಗ ಏನು ಮಾಡುತ್ತಿದ್ದೀರಿ?"

"ಮಂಗಳೂರಿನ ಶಾಲೆಯೊಂದರಲ್ಲಿ ಉಪಾಧ್ಯಾಯನಾಗಿದ್ದೇನೆ. ನನಗೆ ಈಗ ಬಿ.ಎಸ್‌ಸಿ., ಆಗಿದೆಯಷ್ಟೆ. ಮುಂದೆ ಎಂ.ಎಸ್‌ಸಿ., ಮಾಡಿಕೊಳ್ಳಬೇಕೆಂಬ ಇಷ್ಟ ಉಂಟು. ಇಲ್ಲವಾದರೆ ಬೆಳಗಾಗುವುದು ಹೇಗೆ? ನಾವು ತುಂಬ ಬಡವರು ಸ್ವಾಮಿ, ಸಂಸಾರವೆಲ್ಲ ನನ್ನ ಮೇಲೆ ನಿಂತಿದೆ."

"ಎಂದರೆ, ನಿಮ್ಮ ತಂದೆ ಏನು ಮಾಡುತ್ತಾರೆ?"

"ತಂದೆ ಇಲ್ಲ ಸ್ವಾಮಿ. ನಾವಿಬ್ಬರು ಮಕ್ಕಳು, ತಾಯಿ ಇಷ್ಟೇ. ತಂಗಿಯ ಓದಿಗೂ ನಾನೇ ಹೊಣೆ."

"ನಿಮ್ಮ ತಂದೆ ತೀರಿಕೊಂಡು ಎಷ್ಟು ವರ್ಷ ಆಯಿತು?"

"ಸುಮಾರು ಇಪ್ಪತ್ತು ವರ್ಷ."

"ನಿಮಗೀಗ ಏನು ವಯಸ್ಸು?"

"ಇಪ್ಪತ್ತೆರಡು"

"ಕೆಲಸ ಸಿಕ್ಕರೆ ಬೆಂಗಳೂರಿಗೆ ಬರುತ್ತೀರಾ?"

"ಸಿಗುವ ಭರವಸೆಯಿಲ್ಲ, ಸ್ವಾಮಿ. ಅಂಕಗಳೇನೋ ಬಂದಿವೆ, ಆದರೆ ಅಷ್ಟೇ ಸಾಲದಲ್ಲ? ನಿಮ್ಮನ್ನು ಕಾಣಲೆಂದು ಇಲ್ಲಿಗೆ ಬರುವುದಿತ್ತು; ಹಾಗೆಯೇ ಈ ಇಂಟರ್‌ವ್ಯೂವನ್ನೂ ಮುಗಿಸುವಾ ಎಂದುಕೊಂಡೆ ಅಷ್ಟೆ."

"ನಿಮ್ಮ ತಾಯಿ ಹಾಸಿಗೆ ಹಿಡಿದಿದ್ದಾರೆಂದಿರಿ?"

"ಹೌದು, ಹತ್ತಾರು ವರ್ಷಗಳಿಂದ ಅವರು ಒಂದಲ್ಲ ಒಂದು ಬೇನೆಯಿಂದ ನರಳುತ್ತಿದ್ದಾರೆ. ಬೇನೆ ಇಂಥದೆಂದು ವೈದ್ಯರೂ ಹೇಳುವುದಿಲ್ಲ. ಕೆಲವರು 'ಮಾನಸಿಕ' ಎನ್ನುತ್ತಾರೆ."

"ಹೌದು, ಹೌದು, ಮಾನಸಿಕ ಎನ್ನುವುದು ಈಗೀಗ ವೈದ್ಯರ ಬತ್ತಳಿಕೆಯಲ್ಲಿ ಒಂದು ರಾಮಬಾಣವಾಗಿಬಿಟ್ಟಿದೆ. ಏನೆಂದು ತಿಳಿಯದಿದ್ದರೆ ಎಲ್ಲ ಮಾನಸಿಕವೇ! ಬೇನೆಯಲ್ಲಿ ಮಾನಸಿಕ ಇಲ್ಲವೆಂದಲ್ಲ; ಈಚೆಗೆ ವೈದ್ಯ ವಿಭಾಗದಲ್ಲಿ

ಸೈಕೋಸೊಮ್ಯಾಟಿಕ್ ಮೆಡಿಸಿನ್ ಎನ್ನುವುದು ಬಲವಾಗುತ್ತಿದೆ. ಆದರೆ ಬರಿದೇ ಮಾನಸಿಕ ಎಂದುಬಿಟ್ಟರೆ ಮುಗಿಯಿತೆ? ಅದೂ ಒಂದು ಬೇನೆಯಲ್ಲವೆ? ಅದನ್ನೂ ಗುಣಪಡಿಸಬಾರದೆ? ಎಲ್ಲರೂ ತಂತಮ್ಮ ಹೊಣೆಯನ್ನು ಜಾಡಿಸಿಕೊಳ್ಳುವುದರಲ್ಲಿ ಜಾಣರು!"

"ಇವರು ಮಾನಸಿಕ ಎಂದುದೇ ಕಾರಣ, ನನ್ನ ತಂಗಿ ಸೈಕಾಲಜಿ ಓದಲು ಹೊರಟಿದ್ದಾಳೆ. ನಮ್ಮ ತಾಯಿಯ ಸಲುವಾಗಿ ಅವಳು ಮನೋರೋಗದ ಅಂತರಾಳವನ್ನು ಅರಿಯಬೇಕಂತೆ."

"ಓಹೋ, ಅದೇ ಹಿನ್ನೆಲೆಯೋ? ಅದೂ ಒಳ್ಳೆಯದೇ ಎನ್ನಿ. ಸಂದರ್ಭವನ್ನರಿತು ಮಾಡುವ ವಿದ್ಯಾಭ್ಯಾಸ ಸಾರ್ಥಕವಾಗುತ್ತದೆ. ಗೊತ್ತು ಗುರಿಯಿಲ್ಲದೆ ಕುರಿಗಳ ಹಾಗೆ ಕಾಲೇಜಿಗೆ ನುಗ್ಗಿ ಕೈಗೆ ಸಿಕ್ಕ ಕೋರ್ಸನ್ನು ಹಿಡಿದು ಬವಣೆ ಪಡುವ ವಿದ್ಯಾರ್ಥಿಗಳೇ ಹೆಚ್ಚು. ಅದರಿಂದ ಅವರಿಗೂ ಉಪಯೋಗವಿಲ್ಲ, ನೆರೆಹೊರೆಗೂ ಪ್ರಯೋಜನವಿಲ್ಲ! ಆ ಓದು ಉದ್ಯೋಗಕ್ಕೂ ಬರುವುದಿಲ್ಲ. ವ್ಯಾಪಾರಕ್ಕೂ ಬರುವುದಿಲ್ಲ. ವೇಳೆ ಹಾಳು; ಹಣ ನಷ್ಟ ಅಷ್ಟೆ."

ಹುಡುಗ ಎದ್ದು ನಿಂತ; "ಇನ್ನು ಹೊರಡಲೇ, ಸ್ವಾಮಿ? ತಮಗೆ ಎಷ್ಟು ತೊಂದರೆಯಾಯಿತೋ? ಕ್ಷಮಿಸಿ."

"ಎಲ್ಲಿ ಉಳಿದಿದ್ದೀರಿ?"

"ಹೋಟಲಿನಲ್ಲಿ ಸ್ವಾಮಿ."

"ಹಾಗಾದರೆ ಈ ಹೊತ್ತು ಇಲ್ಲಿಯೇ ಊಟಕ್ಕೆ ಬನ್ನಿ. ಹಾಗೆಯೇ ಇಂಟರ್‌ವ್ಯೂಗೆ ಹೋಗಿ ಬರುವಿರಂತೆ!"

ಪದ್ಮನಾಭಶೆಟ್ಟಿ ಬಹಳ ಸಂಕೋಚದಿಂದ ಮುಖವನ್ನು ಮುದುರಿಸಿಕೊಂಡು ಜಾರಲೆತ್ನಿಸಿದ. 'ಬೇಡ', 'ಇಲ್ಲ' 'ತೊಂದರೆ'ಗಳನ್ನು ಆ ಕಡೆ ಈ ಕಡೆ ತುಯ್ದಾಡಿಸಿದ ಮೇಲೆ, ನನ್ನ ಬಲವಂತಕ್ಕೆ ಒಪ್ಪಿಕೊಂಡ. ಅವನನ್ನು ನೋಡಿದೊಡನೆಯೇ ನನಗೆ ಅವನು ಸಭ್ಯ ಎನಿಸಿದ್ದಿತು. ಅವನೊಂದಿಗೆ ಮಾತನಾಡಿದ ಮೇಲೆ ಯೋಗ್ಯ ಎಂದು ಮನವರಿಕೆಯಾಯಿತು. 'ಅಯ್ಯೋ ಪಾಪ, ಒಳ್ಳೆಯ ಹುಡುಗನಿದ್ದಾನು. ಕಷ್ಟಜೀವಿ!' ಎಂದುಕೊಂಡೆ. ನನ್ನ ಮೇಲೆ ಕೃತಜ್ಞತೆಗಳ ಕಂತೆಯನ್ನು ಹೇರಿಸಿ ಅವನು ಹೊರಟುಹೋದ. ಹನ್ನೊಂದು ಗಂಟೆಯ ಸುಮಾರಿಗೆ ಮತ್ತೆ ಬರತಕ್ಕದ್ದೆಂದು ಮಾತಾಯಿತು.

೨

ಹೀಗೆ ಸುಪ್ರಭಾತ ಸೇವೆ ಮುಗಿದ ಮೇಲೆ ತಿರುಮಂಜನಕ್ಕೆ ಅಣಿಯಾಗಿ ಹೊರಟೆ. ಭಾನುವಾರ ಒಂಬತ್ತು ಗಂಟೆಯವರೆಗೆ ಏಳಬಾರದು ಎಂದು ನಾನು ಮಾಡಿಕೊಂಡಿದ್ದ ಸಂಕಲ್ಪ ನನ್ನ ಹೆಂಡತಿಗೆ ತಿಳಿದಿದ್ದಿತು; ಈಗ ಆಕೆ ಅದನ್ನು ಹೇಳಿ "ಅಂತೂ ದಿನವೂ ಒಂದೊಂದು ತಾಪತ್ರಯ ಕಟ್ಟಿಕೊಳ್ಳುತ್ತೀರಲ್ಲ! ಅದೇ ನನಗೆ ಆಶ್ಚರ್ಯ. ಯಾರ ಮನೆಗೂ ಬಾರದವರೆಲ್ಲ ನಮ್ಮ ಮನೆಗೇ ಬರುತ್ತಾರೆ; ಯಾರನ್ನೂ ಕಾಣದವರು ನಮ್ಮನ್ನು ಕಾಣಲು ಬರುತ್ತಾರೆ. ನಮ್ಮ ಪಾಡಿಗೆ ನಾವು ಹಾಯಾಗಿ ಇರಬಾರದೆ? ಮಂಗಳೂರಿನಿಂದ ಬೆಂಗಳೂರಿಗೆ ಬಂದು ನಿಮ್ಮನ್ನೇ ನೋಡುತ್ತಾರಲ್ಲ! ಅದಲ್ಲವೆ ಸ್ವಾರಸ್ಯ?" ಎಂದು ಮೂದಲಿಸಿದಳು. ನಮ್ಮ ಮಾತುಕತೆಯನ್ನೆಲ್ಲ ನನಗಿಂತ ಹೆಚ್ಚು ಆಸಕ್ತಿಯಿಂದ ಕೇಳಿದ್ದಳಾಕೆ. "ತಂಗಿಯನ್ನು ಊರಿಗೆ ಕಳುಹಿಸಿ ತಾನು ಇಲ್ಲಿಗೆ ಬರಬೇಕೆಂದೇ ಆ ಹುಡುಗನ ಬಯಕೆ?" ಎಂದು ಕೇಳಿದಳು. ಅದಕ್ಕೆ ನಾನು "ಇರಲಿಕ್ಕಿಲ್ಲ, ತಂಗಿ ಊರಿಗೆ ಹೋಗಲೊಲ್ಲಳು; ಇನ್ನೇನು ಮಾಡುವುದು? ಅವರೇ ಇಲ್ಲಿಗೆ ಬರಬೇಕಲ್ಲ? ಆದರೆ ಅವನಿಗೆ ಕೆಲಸ ಸಿಗುವ ನಂಬಿಕೆಯಿಲ್ಲ. ಅದಕ್ಕೇ ತಂಗಿಯನ್ನು ಕರೆಸಿಕೊಳ್ಳುವ ಪ್ರಯತ್ನದಲ್ಲಿ ನನ್ನ ನೆರವನ್ನೂ ಅಪೇಕ್ಷಿಸಿ ಬಂದಿದ್ದಾನೆ" ಎಂದೆ.

"ತಾಯಿ, ಅಣ್ಣ ಇಬ್ಬರೂ ಮಾಡಲಾರದುದಕ್ಕೆ ನೀವೇನು ಮಾಡುವುದು? ನಿಮ್ಮ ಮಾತು ಆ ಹುಡುಗಿ ಕೇಳುತ್ತಾಳೆಂಬ ನಂಬಿಕೆಯೇನು? ಅದಲ್ಲದೆ, ಏನೋ ಪಾಪ, ತಾಯಿಯು ಸಲುವಾಗಿ ಒಂದಿಷ್ಟು ಮನೋರೋಗದ ಮರ್ಮ ತಿಳಿಯಬೇಕೆಂದು ಬಂದಿದ್ದಾಳೆ. ಮತ್ತೆ ಇವಳು ಮಂಗಳೂರಿಗೆ ಹೋದರೆ, ತಾಯಿಯ ಬೇನೆ ಹೋಗುತ್ತದೆಯೆ? ಮದುವೆಗೆ ಬಂದ ಮಗಳು ಮನೆಯಲ್ಲಿದ್ದರೆ ತಾಯಿ ಬೇನೆ ಇನ್ನಷ್ಟು ಹೆಚ್ಚೀತು! ನಿಮ್ಮ ಕೈಲಾದರೆ ಆ ಹುಡುಗನಿಗೇ ನಿಮ್ಮ ಕಾಲೇಜಿನಲ್ಲಿ ಕೆಲಸ ಕೊಡಿಸಿ. ಹೇಗೂ ಇಂಟರ್‌ವ್ಯೂಗೆ ಕರೆದಿದ್ದಾರೆ" ಎಂದು ಕಾಂತಾ ಸಮ್ಮಿತಿಯ ಉಪದೇಶವಾಯಿತು.

ನಾನು ಬೇಕೆಂದೇ ಮೂಗೆಳೆದು, "ಹುಡುಗನಿಗೇನೋ ಅಂಕಗಳು ಹೆಚ್ಚಾಗಿ ಬಂದಿವೆಯಂತೆ, ಅವನೇ ಹೇಳಿದನಲ್ಲ! ಆದರೆ ಯಾರೋ ಕಂಡು

ಕೇಳದವನ ಸಲುವಾಗಿ ನನ್ನ ದಾಕ್ಷಿಣ್ಯ ವೆಚ್ಚವಾಗಬೇಕೆ? ಅದೂ ಅಲ್ಲದೆ, ಹಾಗೆಲ್ಲ ಶಿಫಾರಸು ಮಾಡುವುದು ಸರಿಯಲ್ಲ" ಎಂದೆ. ನಾನು ನಿರ್ದಾಕ್ಷಿಣ್ಯ ಸ್ವಭಾವದವನಲ್ಲವೆಂದು ನನ್ನ ಅರ್ಧಾಂಗಿಯೇ ಆದ ಅವಳಿಗೆ ತಿಳಿಯದೆ? ಆಕೆ ವಾಕ್ಯಾರ್ಥವನ್ನು ಬೆಳೆಸಿ, "ಏನು ಕಂಡು ಕೇಳದವನು ಎನ್ನುತ್ತೀರಿ? ಬೆಳಗಿನಿಂದ ಈಗಿನವರೆಗೂ ಅವನೊಂದಿಗೆ ಪಟ್ಟಾಂಗ ಹೊಡೆಯುತ್ತಿದ್ದಿರಿ. ಅವನಿಗೆ ಕಾಫಿ ಕೊಟ್ಟಿರಿ; ಊಟಕ್ಕೆ ಕರೆದಿದ್ದೀರಿ! ಇನ್ನೇನು ಕಂಡು ಕಾಣಬೇಕು? ಪಾಪ, ನಿಮ್ಮನ್ನೇ ನೆನೆಯುತ್ತ ಮಂಗಳೂರಿನಿಂದ ಬಂದಿದ್ದಾನೆ!" ಎಂದು ಯುದ್ಧಕ್ಕೆ ಸಿದ್ಧವಾದಳು. ನಾನೂ ಸ್ವಲ್ಪ ಮೊಂಡಾಟ ಹೂಡಿ, "ಆದರೆ, ಅವನೇನು ನನ್ನನ್ನು ಕೆಲಸ ಕೊಡಿಸಿ ಎಂದು ಕೇಳಿದನೇ? ಅವನು ಬಂದದ್ದು ತಂಗಿಯ ವಿಚಾರಕ್ಕೆ. ತಾನಾಗಿ ಕೆಲಸದ ಪ್ರಸ್ತಾಪವನ್ನೂ ಅವನು ಮಾಡಲಿಲ್ಲ. ನಾನೇ ಕೇಳಿದ ಮೇಲೆ ಹೇಳಿದ, ಅಷ್ಟೆ" ಎಂದೆ. "ಅದೇ ಒಳ್ಳೆಯ ಗುಣ ಎಂದು ನಾನೂ ಹೇಳಿದ್ದು. ಅವನು ನಿಮ್ಮನ್ನು ಕೆಲಸಕ್ಕೆ ಶಿಫಾರಸು ಮಾಡಿ ಎಂದು ಕೇಳಿದ್ದಿದ್ದರೆ ಬೇಡ ಎಂದು ನಾನೇ ಹೇಳುತ್ತಿದ್ದೆ! ಅವನನ್ನು ಊಟಕ್ಕೆ ನೀವು ಕರೆದಾಗ ನಾನು ಇವತ್ತು ಏಕಾದಶಿ ಎಂದು ಜ್ಞಾಪಿಸುತ್ತಿದ್ದೆ! ಅವನು ಬಾಯಿ ಬಿಟ್ಟು ಕೇಳದೆ ಇದ್ದುದು ಅವನ ಸಭ್ಯತೆ; ನೀವಾಗಿ ಅವನ ಕಷ್ಟವನ್ನು ತಿಳಿದುಕೊಂಡು ಕೈಲಾದ ಸಹಾಯವನ್ನು ಮಾಡುವುದು ನಿಮ್ಮ ಕರ್ತವ್ಯ!" ಎಂದು ಮುಗಿಸಿಬಿಟ್ಟಳು. ನಾನೂ ಸಮಾಧಾನದಿಂದ ಸ್ನಾನದ ಮನೆಯನ್ನು ಸೇರಿದೆ.

ಅವನ ಕೆಲಸದ ಯೋಚನೆಯನ್ನು ನಾನೇನೂ ಮಾಡದೆ ಇರಲಿಲ್ಲ. ಅವನನ್ನು ಊಟಕ್ಕೆ ಕರೆದುದೂ ಅದೇ ಉದ್ದೇಶದಿಂದಲೇ. ಅವನನ್ನು ಕೇಳಿ, ಬೇಕೆಂದರೆ ಪ್ರಿನ್ಸಿಪಾಲ್‌ಗೆ ಒಂದು ಮಾತು ಹೇಳೋಣ, ಕೆಮಿಸ್ಟ್ರಿ ಪ್ರೊಫೆಸರನ್ನು ಕಾಣೋಣ ಎಂದೇ ನಿಶ್ಚಯಿಸಿದ್ದೆ. ಆದರೆ ಹೆಂಡತಿಯನ್ನು ಬಿಟ್ಟು ಗಂಡ ಅರ್ಧ ತಾನೆ? ಅವನ ನಿರ್ಧಾರವೂ ಅರ್ಧವೇ! ಈಗ ನಿರ್ಧಾರ ಪೂರ್ಣವಾಯಿತು. ಆದರೆ ಮನಸ್ಸು ಸುಮ್ಮನಾಗಲಿಲ್ಲ. ಹುಡುಗನ ತಾಯಿಗೆ ಯಾವ ಮಾನಸಿಕ ಬೇನೆ? ಕಾರಣ ಏನಿದ್ದೀತು? ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಹೆಂಗಸರಿಗೆ ಮಾನಸಿಕ ವ್ಯಾಧಿಗಳು ಒದಗುವುದು ಹೆಚ್ಚೇನಲ್ಲ. ಗಂಡ ತೀರಿಕೊಂಡ ಮೇಲೆ ಆಕೆ ಈ ಇಬ್ಬರು ಮಕ್ಕಳನ್ನು ಸಾಕಿ ಬೆಳೆಸುವಾಗ ಎಷ್ಟು ಬವಣೆಪಟ್ಟಿದ್ದಾಳೋ! ಅವಳ ಜೀವಕ್ಕೆ ಎಷ್ಟು ಘಾಸಿಯಾಗಿದೆಯೋ!

ಇಪ್ಪತ್ತು ವರ್ಷಗಳು ಒಂಟಿಯಾಗಿ ಹೆಂಗಸು ಬಾಳಬೇಕೆಂದರೆ ಸುಲಭವೇ? ನೆರೆಹೊರೆಯವರು ಸುಮ್ಮನಿರುತ್ತಾರೆಯೇ? ಈ ಪ್ರಪಂಚದ ವ್ಯವಹಾರವೆಲ್ಲ ಗಂಡಸಿಗೆ ಸರಿಯಾಗಿಯೇ ಸಿದ್ಧವಾದ ಹಾಗಿದೆ. ಹೆಂಗಸು ತಾನೇ ಮಾಡುವುದೂ ಕಷ್ಟ. ಅವರು 'ದುಷ್ಟ'ರೆನಿಸಿಕೊಳ್ಳುವುದೂ ಸುಲಭ. ಸ್ತ್ರೀಯರು ದುಷ್ಟರಾದರೆ ವರ್ಣಸಂಕರವಾಗುತ್ತದೆ ಎಂದು ಹೇಳಿದ ಕೃಷ್ಣ, ಪುರುಷರು ದುಷ್ಟರಾದರೆ ಏನಾಗುತ್ತದೆ ಎಂದು ಹೇಳಲಿಲ್ಲ. ಅವನು ಹೇಳುವುದೇನು? ಧರ್ಮಕ್ಷೇತ್ರವು ಕುರುಕ್ಷೇತ್ರವಾದುದು ಹೇಗೆಂದು ಅವನಿಗೆ ತಿಳಿಯದಿದ್ದಿತೆ? ಅಲ್ಲಿ ನಡೆದ ಗದ್ದಲವೆಲ್ಲ ಗಂಡಸರದ್ದೇ ಅಲ್ಲವೇ?

ಹೀಗೆಲ್ಲ ಏನೇನೋ ಯೋಚನೆ ಮಾಡುತ್ತ ಸ್ನಾನವನ್ನು ಮುಗಿಸಿ, ಆಹ್ನಿಕವನ್ನೂ ಆಯಿತೆನ್ನಿಸುವ ವೇಳೆಗೆ ಉಪಾಹಾರವೂ ಸಿದ್ಧವಾಯಿತು. ಮೈಸೂರಿನ ಸುಂದರೇಶ ಹೊತ್ತಿಗೆ ಸರಿಯಾಗಿ ಒದಗಿದ. ಊಟ ತಿಂಡಿಯ ಸಂದರ್ಭವೆಂದರೆ ಅವನಿಗೆ ಅತೀಂದ್ರಿಯ ದರ್ಶನದ ವಿಚಾರ; ಹೇಗೋ ತಿಳಿದುಬಿಡುತ್ತದೆ ಅವನಿಗೆ. ಬಂದೂ ಬರುತ್ತಾನೆ. ಅವನೇನು ಹೊಟ್ಟೆಬಾಕನಲ್ಲ, ಅಥವಾ ತಾನೇ ತಿನ್ನಲು ಕಾಸಿಲ್ಲದ ಕಂಗಾಲನಲ್ಲ. ನಮ್ಮ ಮನೆಗೆ ಬಂದ ಹಾಗೆ ಬೇರೆಲ್ಲೂ ಅವನು ಹೋಗುವುದಿಲ್ಲ. ಏನೋ ನನ್ನವಳ ಅಡುಗೆಗೂ ಅವನ ಮನಸ್ತೃಪ್ತಿಗೂ ಪ್ರಾಕ್ತನ ಸಂಬಂಧವಿದ್ದೀತು! ವಯಸ್ಸು ನಲವತ್ತಾದರೂ ಮದುವೆಯ ಗೀಳನ್ನು ಹಚ್ಚಿಸಿಕೊಳ್ಳದ ಕುಮಾರಸ್ವಾಮಿ ಅವನು; ಆಕಾರದಲ್ಲಿ ಮಾತ್ರ 'ಕುಮಾರ ಗುರು' ಎಂದರೆ ಗಣೇಶ. ಸೊಂಡಿಲೊಂದು ಇಲ್ಲ. ಇಲಿಗಳು ಹತ್ತಿರ ಬರಲು ಹೆದರುತ್ತವೆ ಅಷ್ಟೆ. ಸುಂದರೇಶ ಎನ್ನುವ ಹೆಸರನ್ನು ಅವನಿಗೆ ಯಾರು ಸೂಚಿಸಿದರೋ! ಅವರ ಸೌಂದರ್ಯಾನುಭೂತಿ ತುಂಬ ಉದಾರವಾದದ್ದಾಗಿರಬೇಕು.

ಆಕಾರ ಹೇಗಿದ್ದರೇನು? ತಿಂಡಿ ತಿನ್ನುವಾಗ, ಊಟ ಮಾಡುವಾಗ ಬಿಂಕ ಇಲ್ಲದಿದ್ದರೇನು? ಮದುವೆಯಾಗದಿದ್ದರೇನು? ಮನೆಯ ಯೋಚನೆ ಇಲ್ಲದಿದ್ದರೇನು? ಸುಂದರೇಶನಂತೂ ಸ್ಥಿತಪ್ರಜ್ಞ; ಜೀವನ್ಮುಕ್ತನೆಂದರೂ ಒಪ್ಪೀತು. ಅವನಿಗೆ ಡಯಾಬಿಟೀಸ್, ಬ್ಲಡ್ ಪ್ರೆಷರ್ ಇನ್ನೂ ಏನೇನೋ ಉಂಟು. ಆದರೆ ಯಾವುದೂ ಅವನ ಹೃದಯವನ್ನು ಹರಿದಿಲ್ಲ, ನಾಲಿಗೆಯ ಗೀಳನ್ನು ನಿಲ್ಲಿಸಿಲ್ಲ. ಅವನು ಸರ್ವದಾ ಸುಖಿ, ಹಸನ್ಮುಖಿ, ಅವನ ನಿರ್ಲಿಪ್ತತೆ

ಯನ್ನು ಬುದ್ಧಿಮಾಂದ್ಯವೆಂದು ಬಗೆದು ಅವನನ್ನು ಪರಿಹಾಸ್ಯ ಮಾಡುವವರೇ ಹೆಚ್ಚುಮಂದಿ; ಆದರೆ ಅವನಿಗೆ ಸಿಟ್ಟು ಬಂದ ಸಂದರ್ಭವನ್ನೇ ನಾನರಿಯೆ. ಬುದ್ಧಿ ಹರಿತವಾಗಿಲ್ಲದಿದ್ದರೆ ಸಹನೆ ಹೆಚ್ಚು ಎಂದು ಕುಹಕಿಗಳು ಹೇಳುವುದುಂಟು. ಅದನ್ನು ನಾನೊಪ್ಪುವುದಿಲ್ಲ. ಲೌಕಿಕ ಬುದ್ಧಿಯೇನೋ ಅವನಿಗೆ ಸಾಲದು, ನಿಜ; ಆದರೆ 'ಆಜನ್ಮ ಸಿದ್ಧ'ನಾದವನಿಗೆ ಇಂಥ ಬುದ್ಧಿಯೊಂದೇ ಬುದ್ಧಿಯೇ? ಮಕ್ಕಳು ಕೂಡ ಅವನನ್ನು ಲೇವಡಿ ಮಾಡುತ್ತಾರೆ; ಮುದುಕರು ಕೂಡ ಅವನನ್ನು ನೋಡಿ ನಗುತ್ತಾರೆ, ಇತರರಂತೂ ಸರಿಯೇ ಸರಿ. ಆದರೆ ಅವನನ್ನು ಕೆಟ್ಟವನೆಂದು ಯಾರೂ ಇದುವರೆಗೆ ಹೇಳಿದುದಿಲ್ಲ. ಅಜಾತ ಶತ್ರು ಅವನು; ಹಾಗೆಂದೇ ಅ–ಶೋಕ.

ಅಷ್ಟು ಮಾತ್ರವಲ್ಲ, ಯಾರಿಗೂ ಸಹಾಯ ಮಾಡಲು ಸದಾ ಸಿದ್ಧ; ಸುಬ್ಬಮ್ಮನ ಬಿಂದಿಗೆ ಭಾವಿಯಲ್ಲಿ ಬಿದ್ದರೆ ಇವನೇ ಇಳಿದು ತೆಗೆಯಬೇಕು. ಸೋಮು ಮನೆಯ ತೆಂಗಿನ ಮರದಿಂದ ಕಾಯಿಗಳನ್ನು ಇವನೇ ಹತ್ತಿ ಇಳಿಸಬೇಕು. ಮನೆ ಕಟ್ಟುವುದು, ವರ ಹುಡುಕುವುದು, ಬಟ್ಟೆ ಹೊಲಿಸುವುದು, ಆಸ್ಪತ್ರೆಗೆ ಸೇರಿಸುವುದು, ಬಾಡಿಗೆ ವಸೂಲಿ ಮಾಡುವುದು, ಸಾಮಾನು ತರುವುದು, ಗಿರವಿ ಇಡುವುದು, ರೇಡಿಯೋ ರಿಪೇರಿ ಮಾಡುವುದು, ಗಡಿಯಾರ ಮಾರಿಸುವುದು, ಗಂಡ ಹೆಂಡಿರ ಜಗಳ ಹಚ್ಚುವುದು, ನಿಲ್ಲಿಸುವುದು–ಅವನು ಮಾಡದೇ ಇದ್ದ ಕೆಲಸವೇ ಇಲ್ಲ, ಅವನಿಂದ ನೆರವು ಪಡೆಯದಿದ್ದ ಜನರೇ ಊರಿನಲ್ಲಿಲ್ಲ. ಎಲ್ಲರ ಗೃಹಕೃತ್ಯದಲ್ಲಿಯೂ ಅವನಿಗೆ ಆಸಕ್ತಿಯುಂಟು, ಕೇಳಲಿ, ಬಿಡಲಿ, ಅವನ ಉಪದೇಶವಂತೂ ಉಚಿತವಾಗಿ ಸಿದ್ಧವಾಗಿರುತ್ತದೆ. ನೀವು ಕೇಳಲಿಲ್ಲವೆಂದು ಅವನಿಗೆ ಬೇಸರವಿಲ್ಲ, ಕೇಳಿದರೆಂದು ಹೆಮ್ಮೆಯಿಲ್ಲ. ಅಂಥ ಸಮದರ್ಶಿಯನ್ನು ನಾನೆಲ್ಲೂ ನೋಡಿಲ್ಲ, ಹಾಗೆಂದೇ ಈ 'ವಸುಧೈವ ಕುಟುಂಬಕ'ನಾದ 'ಉದಾರ ಚರಿತ'ನನ್ನು ಮನಸಾರೆ ಮೆಚ್ಚಿಕೊಂಡು ನನ್ನ ಆಪ್ತವರ್ಗದಲ್ಲಿ ಸೇರಿಸಿಕೊಂಡಿದ್ದೇನೆ. ನನಗೆ ಅಸಾಧ್ಯವಾದ ಎಲ್ಲ ಕೆಲಸವನ್ನೂ ಅವನಿಗೆ ಒಪ್ಪಿಸಿಬಿಡುವುದು ನನ್ನ ರೂಢಿ.

ಎಲ್ಲರಂತೆ ಇವನೂ ಎನ್ನುವ ಮೌಢ್ಯದಿಂದ ನಾನು ಒಮ್ಮೆ ಇವನಿಗೆ ಕೆಲಸವೊಂದನ್ನೂ ಕೊಡಿಸುವ ಪ್ರಯತ್ನ ಮಾಡಿದೆ. "ಯಾರಿಗಯ್ಯ ಬೇಕು ನಿನ್ನ ಕೆಲಸ? ಚಾಕರಿ ಮಾಡಿ ಹೊಟ್ಟೆ ಹೊರೆದುಕೊಳ್ಳುವುದು ಏನು ಮಹಾ!"

ಎಂದು ನನ್ನ ಮುಖದ ಮೇಲೆ ತಣ್ಣೀರೆರಚಿದ. ಅವನು ಸಂಬಳಕ್ಕೆಂದು ಕೆಲಸವನ್ನು ಮಾಡಿದವನೇ ಅಲ್ಲ. ಮನೆ ಕಟ್ಟುವುದು ಮಾತ್ರ ಹೇಗೊ ಅವನ ಅಂತಃಕರಣವನ್ನು ವಶಮಾಡಿಕೊಂಡು ಬಿಟ್ಟದ್ದಿತು. ಬೀದಿಯಲ್ಲಿ ಯಾರಾದರೂ ಮನೆ ಕಟ್ಟಿಸುತ್ತಿದ್ದರೆ ಇವನು ಊಟ, ತಿಂಡಿ, ನಿದ್ದೆ ಬಿಟ್ಟು ನೋಡುತ್ತ ನಿಲ್ಲುತ್ತಿದ್ದ; ಕೆಲಸದವರಿಗೆ ಆಗಾಗ ಸಲಹೆಗಳನ್ನು ಕೊಡುತ್ತಿದ್ದ. ಆದರೆ ಕೂಲಿ ಕೊಡುವ ದಣಿಯ ಮಾತನ್ನೇ ಕೇಳದ ಕೆಲಸದವರು ದಾರಿಹೋಕನಾದ ಇವನ ಮಾತನ್ನು ಕೇಳುತ್ತಾರೆಯೇ? ಅಂತೂ ಕಾಮಾಟಿಗಳ, ಮೇಸ್ತ್ರಿಗಳ, ಕಂಟ್ರಾಕ್ಟರುಗಳ ಪರಿಚಯವನ್ನೇನೋ ಪಡೆದಿದ್ದಾನೆ. ಅವರೂ ಇವನಿಂದ ಏನೇನೋ ಕೆಲಸಗಳನ್ನು ಮಾಡಿಸಿಕೊಂಡು ಅಷ್ಟಿಷ್ಟು ಪುಡಿಗಾಸುಗಳನ್ನು ಇವನ ಕಿಸೆಗೆ ಹಾಕುತ್ತಾರೆ. ಇವನೂ 'ಯದೃಚ್ಛಾಲಾಭ ಸಂತುಷ್ಟ'; ಆಸೆಯೆನ್ನುವುದು ನಿರಾಸೆಗೆ ನಾಂದಿ ಎಂದು ಇವನ ಜೀವನ ಸಿದ್ಧಾಂತ. ವೇದಾಂತಿಗಳಲ್ಲದ ಸಾಮಾನ್ಯ ಜನರು ತಮ್ಮ ಸಂಕುಚಿತ ದೃಷ್ಟಿಯಿಂದ ಇವನನ್ನು 'ಸೋಮಾರಿ' 'ಮೈಗಳ್ಳ' 'ತಿಂಡಿಪೋತ' 'ಅಧಿಕ ಪ್ರಸಂಗಿ' ಎಂದು ಮುಂತಾಗಿ ವರ್ಣಿಸುತ್ತಾರೆ.

ಸೋಮಾರಿಯೋ, ಶುಂಠನೋ ಸುಂದರೇಶನೇನು ಯಾರಿಗೂ ಭಾರವಲ್ಲ. ತನ್ನ ನಿತ್ಯಯಾತ್ರೆಗೆ ಯಾರನ್ನೂ ಕಾಡುವುದಿಲ್ಲ, ಬೇಡುವುದಿಲ್ಲ, ತಾವಾಗಿ ತಿಂಡಿಕೊಟ್ಟರೆ ಸಂತೋಷದಿಂದ ತಿನ್ನುತ್ತಾನೆ; ಅದರಲ್ಲಿ ಸಂಕೋಚ, ವಂಚನೆ, ಏನೂ ಇಲ್ಲ. ನೀವು ಕೊಟ್ಟ ತಿಂಡಿಗೆ ಬದಲು ಗಂಟೆಯವರೆಗೆ ನಿಮ್ಮೊಂದಿಗೆ 'ಲೋಕಾಭಿರಾಮವಾಗಿ' ಮಾತನಾಡಿ, ನಿಮ್ಮನ್ನು ನಗಿಸಿ, ನೀವೇ ಅವನಿಗಿಂತ ಉತ್ತಮರು ಎಂದು ನೀವು ಅಂದುಕೊಳ್ಳುವ ಹಾಗೆ ಮಾಡಿ, ಹೊರಡುತ್ತಾನೆ. ಎಷ್ಟು ದುಡ್ಡು ಕೊಟ್ಟರೆ ಈ ಸಮಾಧಾನ ಸಿಗುತ್ತದೆ ಸ್ವಾಮಿ? ಆದರೆ ನಿಮಗೆ ಬೇರೆ ಕೆಲಸವಿದೆ, ಯಾವುದೋ ಯೋಚನೆಯಿದೆ ಎನ್ನುವ ಗಣನೆ ಅವನಿಗಿಲ್ಲ. ಅದು ಅವನ ಕರ್ತವ್ಯ ನಿಷ್ಠೆಯ ಫಲ! ತನ್ನಿಂದಾಗುವ, ತಾನು ಮಾಡಬೇಕೆಂದಿರುವ ಕೆಲಸವನ್ನು ಅವನು ಮಾಡಿಯೇ ತೀರುತ್ತಾನೆ! ಯಾರಪ್ಪನಿಚ್ಛೆಗೂ ನಿಲ್ಲುವುದಿಲ್ಲ. ಉತ್ತಮ ಜನರೇ ಹಾಗೆ ಎಂದು ಭರ್ತೃಹರಿ ಹೇಳಿದ್ದಾನಲ್ಲ?

ಗಂಡಸಿಗಾಗಲೀ, ಹೆಂಗಸಿಗಾಗಲೀ ವಿದ್ಯೆಯ ಅಗತ್ಯವಿಲ್ಲ; ಜ್ಞಾನಾರ್ಜನೆಯಿಂದ ಆಯುಷ್ಯ ಹಾನಿ ಎಂದು ಸುಂದರೇಶನ ಸಿದ್ಧಾಂತ. ಇದು ತನ್ನ ಬಾಳಿ

ನಲ್ಲೇ ಪ್ರಯೋಗಾತ್ಮಕವಾಗಿ ಬಂದಿದೆಯಾಗಿ ಈ ವಿಚಾರದಲ್ಲಿ ಅವನ ಆಗ್ರಹ ಹೆಚ್ಚು. ದೇಶದಲ್ಲಿ ಶಾಲೆಗಳನ್ನೆಲ್ಲ ಮುಚ್ಚಬೇಕು ಎಂದು ಒಂದು ಆಂದೋಲನ ನಡೆದರೆ ಇವನು ಅದರ ನೇತಾರನಾಗುವುದು ಖಂಡಿತ. 'ಓದಿ ಹಾಳಾದರೆಲ್ಲ' ಎನ್ನುವುದು ಅವನ ನಿರ್ಣಯ. ನಾನು ಓದಿದವನೆಂದೂ ಓದಿಸುವವನೆಂದೂ ನನ್ನ ಮೇಲೆ ಅವನಿಗೆ ತುಂಬ ನಿಕೃಷ್ಟ ಭಾವನೆ; ನನ್ನನ್ನು ನೋಡಿ 'ಅಯ್ಯೋ, ಪಾಪ!' ಎಂದು ಮರುಗುತ್ತಾನೆ! ನನಗೆ ಪ್ರಪಂಚದ ವ್ಯವಹಾರ ಜ್ಞಾನವೇ ಇಲ್ಲವೆಂದೂ, ಮನುಷ್ಯ ರೂಪದ ಕುರಿಯೆಂದೂ ಅವನು ಮತ್ತೆ ಮತ್ತೆ ಎಲ್ಲ ರೆದುರೂ ಹೇಳುತ್ತಿರುತ್ತಾನೆ. ಅದರಿಂದ ನನಗೆ ಸಿಟ್ಟೇನೂ ಬರುವುದಿಲ್ಲ; ಅವನ ಅನುಕಂಪಕ್ಕೆ ಹೆಮ್ಮೆಪಟ್ಟುಕೊಳ್ಳುತ್ತೇನೆ. ಆ ಮಾತನ್ನು ಅವನ ಬಾಯಿಂದ ಕೇಳುವುದು ನನಗೂ ಇಷ್ಟ.

ಈ ಜ್ಞಾನಿ ಯಾರೆಂದು ಕೇಳುತ್ತೀರಾ? ನಮ್ಮ ಊರಿನ ಕೆರೆ ದಂಡೆ ಹನುಮಂತರಾಯನ ಗುಡಿ ಪೂಜಾರಿ ತಿಮ್ಮಪ್ಪಯ್ಯನ ಮಗ. ಊರವರು ಎರಡು ಮೈಲು ದೂರ ನಡೆದು ಹೋಗಿ ಅಲ್ಲಿ ಅಘಮರ್ಷಣ ಜಪ ಮಾಡಿ ಪಾಪವನ್ನು ಅಲ್ಲಿಯೇ ಬಿಟ್ಟು ಊರಿಗೆ ಹಿಂದಿರುಗಲಿ ಎನ್ನುವ ಉದ್ದೇಶದಿಂದ ಯಾರೋ ಹಿಂದೆ ಅಲ್ಲೊಂದು ಸಂಧ್ಯಾವಂದನೆ ಕಟ್ಟೆಯನ್ನು ಕಟ್ಟಿಸಿದರು. ಆದರೆ ಊರಿನ ಉಂಡಾಡಿಗಳು ಸಂಧ್ಯಾವಂದನೆಯಂತಹ ಸಣ್ಣ ಕೆಲಸಕ್ಕೆ ಅಷ್ಟು ದೂರ ಹೋಗುತ್ತಾರೆಯೆ? ಸಂಧ್ಯಾವಂದನೆ ಕಟ್ಟೆ ಬರಿಯ ಕಟ್ಟೆಯಾಯಿತು. ಹಳ್ಳಿಯೆಲ್ಲ ಕೆಟ್ಟು ಪಟ್ಟಣ ಸೇರಬೇಕಾಗಿ ಬಂದ ಊರಿನವರೊಬ್ಬರು ತಮ್ಮ ಮನೆಯಲ್ಲಿದ್ದ ಕಲ್ಲು ಹನುಮಂತರಾಯನನ್ನು ತಂದು ಈ ಬರಿಯ ಕಟ್ಟೆಯ ಮೇಲೆ ಕೂರಿಸಿ ಹೋದರು. ಉದ್ಯೋಗವಿಲ್ಲದೆ ಅಲೆಯುತ್ತಿದ್ದ ತಿಮ್ಮಪ್ಪಯ್ಯ ಈ ಒಂಟಿ ಹನುಮನಿಗೆ ಗಂಟು ಬಿದ್ದ. ಮುಂದೆ ಈ ಪೂಜಾರಿ ತಿಮ್ಮಪ್ಪಯ್ಯ ನಿಗೆ ಮದುವೆಯೂ ಆಯಿತು. ಹನುಮಂತನಿಗೆ ದಿನವೂ ನೀರು ಹೊಯ್ದು ಗಂಧ ತಿಕ್ಕಿದ ಪುಣ್ಯದಿಂದ ಈ ಮಗ ಹುಟ್ಟಿದ. ಅದೇ ಪ್ರಭಾವದಿಂದ ಇವನು ಬ್ರಹ್ಮಚಾರಿಯಾಗಿಯೇ ಉಳಿದನೋ ಏನೋ!

ಅಂತೂ ಈ ಸುಂದರೇಶ ಆ ದಿನ ಉಪಾಹಾರದ ಸಮಯದಲ್ಲಿ ಮನೆಗೆ ಬಿಜಯ ಮಾಡಿದ ಎಂದೆನಲ್ಲವೇ? ಬಂದವನೇ ಮುಂದೆ ಸರಿಸಿದ ಉಪ್ಪಿಟ್ಟು ತಟ್ಟೆಯನ್ನು ಬರಿದು ಮಾಡಿ, ಬಾಯಿಗೆ ಬಿಡುವು ದೊರೆತೊಡನೆ—

"ಯಾರಯ್ಯ, ಬೆಳಿಗ್ಗೆ ನಿಮ್ಮ ಮನೆಗೆ ಬಂದ ಹುಡುಗ?" ಎಂದು ವಿಚಾರಣೆಗೆ ಆರಂಭಿಸಿದ. ವೈದಿಕ ಋಷಿಗಳು ವರುಣನ ಕಣ್ಣು ತಪ್ಪಿಸಿ ರೆಪ್ಪೆ ಮಿಟುಕಿಸುವುದೂ ಆಗದು ಎಂದು ಹೇಳಿದ್ದರು. ಆ ಮಾತು ಈಗ ನೆನಪಿಗೆ ಬಂದಿತು. ಪದ್ಮನಾಭಶೆಟ್ಟಿ ಬಂದುದನ್ನು ಇವನೆಲ್ಲಿ ನೋಡಿದ? ಅವನ ವಿಚಾರ ಇವನಿಗೇನು ಗೊತ್ತೋ? ಇವನಂತೂ ತ್ರಿಲೋಕ ಸಂಚಾರಿ, ತ್ರಿಕಾಲ ಜ್ಞಾನಿ! ನಾನು....

"ಯಾರೋ ಮಂಗಳೂರಿನ ಹುಡುಗನಂತೆ, ಕೆಲಸಕ್ಕೆಂದು ಬಂದಿದ್ದಾನೆ"

"ಪ್ರಪಂಚದವರೆಲ್ಲಾ ಇಲ್ಲಿಗೇ ಕೆಲಸಕ್ಕೆ ಬರಬೇಕೇ? ಇದ್ದಲ್ಲಿ ಇರಲಾಗದೆ?"

"ಅವನು ಬಂದರೆ ನಿನಗೇನಯ್ಯ?"

"ಏನು ಹಾಗೆ ಕೇಳುತ್ತೀ? ಅವರಿವರೆಲ್ಲ ಮುದುಕರು, ಮೋಟರು, ಎಲ್ಲರೂ ಇಲ್ಲಿಗೇ ಬರುತ್ತಾರೆ. ಬೆಂಗಳೂರಿನಲ್ಲಿ ಬಾಳುವುದು ಹೇಗಯ್ಯ? ದಿನ ದಿನಕ್ಕೆ ಬೆಲೆ ವಿಷದ ಹಾಗೆ ಏರುತ್ತಿದೆ."

"ಅಲ್ಲ, ಅವನಿಗೆ ಏನು ಕಷ್ಟವೋ, ನಿನಗೆ ನನಗೆ ಏನು ಗೊತ್ತು? ನೀನಂತೂ ಉದಾಸೀನ ಬ್ರಹ್ಮಚಾರಿ, ಯಾವ ಯೋಚನೆಯೂ ಇಲ್ಲ! ಅವನ ತಾಯಿಗೆ ಏನೋ ಬೇನೆಯಂತೆ, ಹೇಳುತ್ತಿದ್ದ. ಆಕೆಯ ಚಿಕಿತ್ಸೆಗಾಗಿ ಇಲ್ಲಿಗೆ ಬರಬೇಕೆನ್ನುತ್ತಿದ್ದಾನೋ ಏನೋ."

"ತಾಯಿಗೆ ಬೇನೆಯಾದರೆ ತಂದೆಯಿಲ್ಲವೇ? ಬೇನೆಯೆಲ್ಲ ಬೆಂಗಳೂರಿನಲ್ಲೇ ಗುಣವಾಗಬೇಕೆಂದು ಶಾಸ್ತ್ರವಿದೆಯೇ? ಹೋಗಲಿ, ನೀನು ಅವನಿಗೆ ಕೆಲಸ ಕೊಡಿಸುತ್ತೀನಿ ಎಂದು ಒಪ್ಪಿಕೊಂಡಿದ್ದೀಯೋ ಇಲ್ಲವೋ?"

"ನಾನು ಒಪ್ಪಿಕೊಂಡಿಲ್ಲ ಮಹಾರಾಯಾ! ಕೆಲಸ ಕೊಡಿಸುವುದಕ್ಕೆ ನಾನೇನು ಕಾರ್ಖಾನೆ ಇಟ್ಟಿದ್ದೇನೆಯೇ? ಅವನ ಕಥೆ ಕೇಳಿದರೆ "ಅಯ್ಯೋ ಪಾಪ! ಎನಿಸುತ್ತದೆ ಅಷ್ಟೆ"

"ಅದೇ ತಪ್ಪು. ಅವರವರ ಪಾಡು ಅವರವರಿಗೆ. ಬೇರೆಯವರು ಅದಕ್ಕೆ ಹೊಣೆಯಾಗುವುದಿಲ್ಲ. ಗಂಡನಿಗೆ ಹೆಂಡತಿ; ಹೆಂಡತಿಗೆ ಗಂಡ; ತಂದೆ ತಾಯಿಯರಿಗೆ ಮಕ್ಕಳು; ಮಕ್ಕಳಿಗೆ ತಂದೆತಾಯಿಯರು, ಇಷ್ಟು ಹೊಣೆ ಸರಿ. ಉಳಿದವರಿಗೆಲ್ಲ, ಯಾರಿಗೆ ಯಾರೋ ಪುರಂದರ ವಿಠಲ!

"ಈ ಹೆಂಡತಿಗೆ ಗಂಡನಿದ್ದಾನೋ ಇಲ್ಲವೋ ?"

"ಇದ್ದರೆಷ್ಟು ಇಲ್ಲದಿದ್ದರೆಷ್ಟು ? ಇಲ್ಲದಿದ್ದರೆ ತಂಟೆಯೇ ತಪ್ಪಿತು. ಹೋದವರು ಹೋದರೆಂದು ಇದ್ದವರು ಕಷ್ಟಪಡುವುದು ಯಾವ ನ್ಯಾಯ ? ಹೋದವರಿಗೂ ಇದ್ದವರಿಗೂ ಎಲ್ಲಿಯ ಸಂಬಂಧ ? ಗಂಡ ಸತ್ತನೆಂದು ಹೆಂಡತಿ ಸಹಗಮನ ಮಾಡುವ ಕಾಲವಂತೂ ಹೋಯಿತಲ್ಲ! ಸತ್ತಿಲ್ಲ, ಓಡಿಹೋಗಿದ್ದಾನೆ ಎನ್ನುತ್ತೀಯೋ ? ಇಷ್ಟವಿಲ್ಲದೆ ಬಾಳುವ ಗಂಡನಿಗಿಂತ ಓಡಿಹೋದ ಗಂಡನೇ ಲೇಸು. ಓಡಿಹೋದರೆ ಒಮ್ಮೆ ಕಷ್ಟ ಅಷ್ಟೆ ; ಮತ್ತೆ ಬಂದಾನೆಂಬ ಭಯವೂ ಸ್ವಲ್ಪ ಕಾಲವಾದ ಮೇಲೆ ಹೋಗಿಬಿಡುತ್ತದೆ. ಮನೆಯಲ್ಲೇ ಮುನಿಸಿಕೊಂಡು ಮೂಗು ಮುರಿಯುತ್ತಿದ್ದರೆ ಅಂಥ ಗಂಡ ಇರಲೇಬೇಕೆಂದು ಯಾವ ಗೃಹಿಣಿ ಬಯಸುತ್ತಾಳಯ್ಯ ?

"ಮದುವೆಯಾಗದಿದ್ದರೂ ಇಷ್ಟೊಂದು ದಾಂಪತ್ಯ ವಿಜ್ಞಾನ ತಿಳಿದಿದ್ದೀಯೆ ! ನಿಜವೆನ್ನು, ನಾವೇ ಬೆಕ್ಕಾದರೆ ಇಲಿಯಾದರೆ ಆ ಚೆಲ್ಲಾಟವನ್ನು ನೋಡುವುದು ಹೇಗೆ ? ಎರಡೂ ಆಗದೆ ಹೊರಗಿದ್ದರೆ ನೋಟ ಸ್ಪಷ್ಟವಾಗುತ್ತದೆ. ಅದು ಸರಿ, ಏನೋ ಯಾರದೋ ಕಾಷ್ಟವ್ಯಸನ ನಮಗೇಕೆ ? ಈಗೇನು ಸುದ್ದಿ ? ಏನು ಸಮಾಚಾರ ? ಈ ದಿನದ ಭವಿಷ್ಯ ಏನು ?"

ಆ ಹುಡುಗ ನಿಮ್ಮ ಮನೆಗೆ ಬಂದುದನ್ನು ನೋಡಿದೆ. ಅದಕ್ಕೇ ಬಂದೆ."

೩

ನನಗೆ ಆಶ್ಚರ್ಯವಾಯಿತು. ಇವನ ಚೀಲದಲ್ಲಿ ಇನ್ನೂ ಯಾವ ಮೊಸಳೆಯನ್ನು ತುಂಬಿಕೊಂಡಿದ್ದಾನೋ ತಿಳಿಯಬೇಕೆಂಬ ಕಾತರ ಉಂಟಾಯಿತು. ಆ ಹುಡುಗ ಇವನಿಗೆ ತಿಳಿದುದು ಹೇಗೆ ? ತಿಳಿಯಬೇಕೆಂದು ಮನಸ್ಸು ಹಂಬಲಿಸುತ್ತಿರುವಷ್ಟರಲ್ಲಿಯೇ ಪದ್ಮನಾಭಶೆಟ್ಟಿ ಬಂದೇ ಬಂದ. ಬಂದವನೇ ಈ ಸುಂದರೇಶನನ್ನು ನೋಡಿ—"ನಮಸ್ಕಾರ ಸ್ವಾಮಿ, ಇಲ್ಲಿ ನಿಮ್ಮನ್ನು ನೋಡುವುದು ಆಶ್ಚರ್ಯ ! ನಿಮಗೂ ಪ್ರೊಫೆಸರರಿಗೂ ಪರಿಚಯವಿದ್ದೀತೆಂದು ನಾನು ಭಾವಿಸಿರಲಿಲ್ಲ" ಎಂದ. ಅದಕ್ಕೆ ಸುಂದರೇಶ

ಅಭಯವಾಣಿಯಿಂದ, ಲೋಕಸಂಗ್ರಹ ದೃಷ್ಟಿಯಿಂದ "ಇವರೂ ನಮ್ಮವರೇ" ಎಂದ. ನಾನು ಈ ಅನುಗ್ರಹವನ್ನು ಪಡೆದುಕೊಂಡ ಮೇಲೆ, ಕೂಡಿ ಶೆಟ್ಟರೇ, ಈ ಸಮಸ್ಯೆಯನ್ನು ಬಗೆಹರಿಸಿ. ಸುಂದರೇಶ ನಮ್ಮವನೇ; ಅಥವಾ, ಅವನು ಹೇಳಿದ ಹಾಗೆ, ನಾನು ಅವರವನೇ! ಆದರೆ ಮಂಗಳೂರಿನ ನಿಮಗೆ ಬೆಂಗಳೂರಿನ ಈತ ಸ್ನೇಹಿತನಾದದ್ದು ಹೇಗೆ?"

"ಸ್ನೇಹಿತರೇ ಸ್ವಾಮಿ. ಅವರು ನನಗೆ ಉಪಕಾರ ಮಾಡಿದ್ದಾರೆ" ಎಂದು ಹುಡುಗ ಹೇಳಿದಾಗ ನಾನು ಅವಾಕ್ಕಾದೆ. ಈ ಮೊಳಕೆ ಹೊರಬಂದೀತೆಂದು ನಾನು ನಿರೀಕ್ಷಿಸಿಯೇ ಇರಲಿಲ್ಲ. ಈ ಹುಡುಗ ಯಾರೆಂದೇ ಸುಂದರೇಶ ಮಾತುಕತೆಯನ್ನು ಆರಂಭಿಸಲಿಲ್ಲವೆ? ತನಗೆ ಅವನ ವಿಚಾರ ಏನೂ ತಿಳಿಯದು ಎಂದೇ ನಟಿಸಿಬಿಟ್ಟನಲ್ಲ! ಅಷ್ಟಲ್ಲದೆ, ಯಾರಿಗೂ ಉಪಕಾರ ಮಾಡಬಾರದು, ಅವರವರ ಪಾಡು ಅವರವರಿಗೆ ಎಂದು ನನಗೆ ಉಪದೇಶ ಮಾಡಿದನಲ್ಲ? ಅವನೇ ಉಪಕಾರ ಮಾಡಿದ್ದಾನೆಂದು ಈ ಹುಡುಗ ಹೇಳುತ್ತಿದ್ದಾನೆ! ಏನು ಉಪಕಾರವೋ ತಿಳಿಯಬೇಕೆನ್ನುವ ಕುತೂಹಲ ಹೆಚ್ಚಿತು. ಸುಂದರೇಶ ಏನೂ ಬಾಯಿ ಬಿಡಲಾರ ಎನ್ನಿಸಿತು. ಪದ್ಮನಾಭನನ್ನೇ ಕೇಳೋಣ ಎಂದುಕೊಂಡು "ಅದೆಂಥ ಉಪಕಾರ ಸುಂದರೇಶ ಮಾಡಿರುವುದು? ನನಗಂತೂ ಇಲ್ಲಿಯವರೆಗೆ ಅವನು ಯಾವ ಉಪಕಾರವನ್ನೂ ಮಾಡಿದಂತಿಲ್ಲ" ಎಂದು ಆರಂಭಿಸಿದೆ.

ನನಗೆ ಉಪಕಾರ ಮಾಡಿಲ್ಲವೆನ್ನುವುದು ಸುಳ್ಳುಮಾತು. ನನ್ನನ್ನು ಹಲವು ವೇಳೆ ಇಕ್ಕಟ್ಟಿಗೆ ಸಿಕ್ಕಿಸಿ, ಫಜೀತಿಗೆ ಈಡುಮಾಡಿದ್ದಾನೆನ್ನುವುದು ನಿಜವಾದರೂ, ಅಪ್ರಸಕ್ತವಾದ ವಿಚಾರಗಳಲ್ಲಿ ಅಧಿಕ ಪ್ರಸಂಗಿಯಾಗಿ ನನಗೆ ಬೇಸರಪಡಿಸಿದ್ದಾನೆನ್ನುವುದೂ ನಿಜವಾದರೂ, ನನಗೆ ಆಗಾಗ ಅಷ್ಟಿಷ್ಟು ಉಪಕಾರ ಮಾಡಿಯೇ ಇದ್ದಾನೆ. "ಉಪಕಾರಿ ನಾನು, ಉಪಕೃತಿಯು ನನ್ನದು" ಎಂದೇನು, ಕವಿಯಂತೆ ಹೇಳಿಕೊಳ್ಳುವುದಿಲ್ಲ ಅವನು. ಆದರೆ ಅವನಿಗೆ ಉಪಕಾರ, ಅಪಕಾರ ಎನ್ನುವ ವಿವೇಕವಿಲ್ಲ. ಮನಸ್ಸಿಗೆ ಬಂದುದನ್ನು ಮಾಡುತ್ತಾನೆ, ಮಾಡಿದೊಡನೆ ಮರೆಯುತ್ತಾನೆ. ಮಾಡಿದ ಕೆಲಸದಿಂದ ಏನಾದೀತು, ಏನಾಯಿತು ಎನ್ನುವುದರ ಗೊಡವೆ ಅವನಿಗಿಲ್ಲ. "ಕರ್ಮಣ್ಯೇ ವಾಧಿಕಾರಸ್ತೇ, ಮಾ ಫಲೇಷು ಕದಾಚನ" ಎಂದು ಕೃಷ್ಣ ಇವನಿಗಾಗಿಯೇ ಹೇಳಿದನೋ ಏನೋ! ನಮ್ಮ ರಾಜಕಾರಣಿಗಳಿಗೂ ಇದೇ ಮನೋಧರ್ಮವಿರುವುದರಿಂದಲೇ

ದೇಶದ ವಿಚಾರದಲ್ಲಿ ಅವರು ಅನಾಸಕ್ತರು. ಜನ ಬೈದರೆ ನಿರ್ಲಿಪ್ತರು, ಅವರಿಗೆ ಮಾನಾಪಮಾನಗಳು ಸಮ! ಆದರೆ ರಾಜಕಾರಣಿಗಳಿಗೂ ಸುಂದರೇಶನಿಗೂ ಒಂದು ಅಂತರವುಂಟು. ಸುಂದರೇಶನಿಗೆ ಸ್ವಾರ್ಥವಿಲ್ಲ; ಸ್ವಾರ್ಥವಿರುವ ಕಾರಣವೂ ಇಲ್ಲವೆನ್ನಿ. ಅವನಿಗೇನು ಮನೆಯೇ? ಮಠವೇ? ಹೆಂಡತಿಯೇ? ಮಕ್ಕಳೇ? ಆದಕಾರಣ ಅವನು ದೀರ್ಘಸೂತ್ರಿಯಲ್ಲ. ಇರಲಿ, ಅವನು ಪದ್ಮನಾಭ ಶೆಟ್ಟಿಗೆ ಮಾಡಿದ ಉಪಕಾರ ಏನಿದ್ದೀತು ಎನ್ನುವುದಕ್ಕಿಂತ ಅವನಿಗೂ ಇವನಿಗೂ ಪರಿಚಯವಾದದ್ದು ಹೇಗೆ ಎಂದು ತಿಳಿಯುವ ಕುತೂಹಲ ಹೆಚ್ಚಾಗಿ ನನಗಿದ್ದಿತು.

ನನ್ನ ಪ್ರಶ್ನೆಗೆ ಪದ್ಮನಾಭಶೆಟ್ಟಿ ಉತ್ತರವಾಗಿ, ತಮ್ಮನ್ನು ಕಾಣಲು ಹೇಳಿದವರೇ ಇವರು ಸ್ವಾಮಿ!" ಎಂದಾಗ ನಾನು ಬೆಚ್ಚಿಬಿದ್ದೆ. "ಇಲ್ಲಿ ನೋಡಿ ಶೆಟ್ಟರೇ, ಇದು ಪತ್ತೇದಾರಿ ಕಾದಂಬರಿಯ ಹಾಗೆ ಆಗುತ್ತಿದೆ! ನನಗೆ ಏನೂ ಅರ್ಥವಾಗುತ್ತಿಲ್ಲ. ನಿಧಾನವಾಗಿ ಈ ಹಿನ್ನೆಲೆಯನ್ನು ವಿವರಿಸಿ. ನೀವು ಈ ಸುಂದರೇಶನನ್ನು ಹೇಗೆ ಬೆಟ್ಟಿಯಾದಿರಿ? ಎಲ್ಲಿ? ಯಾವ ಸಂದರ್ಭದಲ್ಲಿ? ನನ್ನನ್ನು ಕಾಣಿರೆಂದು ಇವನು ಸೂಚಿಸುವ ಸಂದರ್ಭವಾದರೂ ಏನು....?" ನನ್ನ ಪ್ರಶ್ನಾವಳಿಯನ್ನು ತಡೆದು ಸುಂದರೇಶ "ಅಂಥದೇನೂ ರಹಸ್ಯವಿಲ್ಲ, ನಿಮ್ಮ ಪ್ರಿನ್ಸಿಪಾಲರ ಮನೆಯಲ್ಲಿಯೇ ಕಳೆದ ವಾರ ಇವರನ್ನು ನೋಡಿದೆ ಅಷ್ಟೆ" ಎಂದ. ನನ್ನ ಕುತೂಹಲವನ್ನು ಇನ್ನಷ್ಟು ಹೆಚ್ಚಿಸಿದ.

ನನ್ನ ಮುಖದಲ್ಲಿ ಮೂಡಿದ ಅಚ್ಚರಿಯನ್ನು ಗಮನಿಸಿ ಪದ್ಮನಾಭಶೆಟ್ಟಿ "ನಡೆದುದು ಹೀಗೆ ಸ್ವಾಮಿ. ನಾನು ನಿಮ್ಮ ಕಾಲೇಜಿನಲ್ಲಿ ಒಂದು ಕೆಲಸಕ್ಕೆ ಅರ್ಜಿ ಹಾಕಿದ್ದೆನೆಂದು ಹೇಳಿದೆನಲ್ಲ. ನಮ್ಮೂರಿನ ವಕೀಲರೊಬ್ಬರಿಂದ ನಿಮ್ಮ ಕಾಲೇಜು ಪ್ರಿನ್ಸಿಪಾಲರಿಗೆ ಪರಿಚಯ ಪತ್ರವೊಂದನ್ನು ತಂದಿದ್ದೆ. ಇಬ್ಬರೂ ಬಾಲ್ಯ ಸ್ನೇಹಿತರಂತೆ. ಪ್ರಿನ್ಸಿಪಾಲರ ಮನೆಯನ್ನು ಹುಡುಕುತ್ತಾ ಇದ್ದಾಗ ದಾರಿಯಲ್ಲಿ ಇವರ ಭೆಟ್ಟಿಯಾಯಿತು. ಇವರಿಗೂ ನನಗೂ ಮೊದಲು ಪರಿಚಯವೇನೂ ಇರಲಿಲ್ಲ. ನಾನು ಇವರನ್ನು ಪ್ರಿನ್ಸಿಪಾಲರ ಮನೆಯೆಲ್ಲಿ ಎಂದು ಕೇಳಿದಾಗ ತಾವೇ ನನ್ನನ್ನು ಕರೆದುಕೊಂಡು ಅಲ್ಲಿಗೆ ಹೋದರು. ನನ್ನೊಂದಿಗೆ ತಾವೂ ಅಲ್ಲಿದ್ದರು. ಅಲ್ಲಿಂದ ಹಿಂದಕ್ಕೆ ಬಂದಾಗ ಅದೂ ಇದೂ ಮಾತನಾಡುತ್ತ ನನ್ನ ಕಷ್ಟಗಳನ್ನು ಇವರಿಗೆ ಹೇಳಿಕೊಂಡಾಗ ನಿಮ್ಮನ್ನು ನೋಡುವಂತೆ ಸಲಹೆ ಮಾಡಿದರು ಅಷ್ಟೆ!" ಎಂದು ಹೇಳಿದ.

"ಹಾಗಾದರೆ ನೀವು ಪ್ರಿನ್ಸಿಪಾಲರನ್ನು ನೋಡಿದ್ದಿರಿ ಎನ್ನಿ? ನಾನೂ ಅವರಿಗೆ ಒಂದು ಮಾತು ಹೇಳೋಣವೆಂದಿದ್ದೆ."

"ನಾನು ನೋಡಬೇಕೆಂದಿರಲಿಲ್ಲ ಸ್ವಾಮಿ, ಆದರೆ ಆ ವಕೀಲರ ಬಲವಂತಕ್ಕಾಗಿ ನೋಡಬೇಕಾಯಿತು. ಆ ವಕೀಲರು ನಮ್ಮ ತಂದೆಯವರಿಗೆ ತುಂಬ ಸ್ನೇಹಿತರಂತೆ; ನಮ್ಮ ಮೇಲೆ ತುಂಬ ಅಭಿಮಾನವಿಟ್ಟಿದ್ದಾರೆ. ಹಿರಿಯರ ಮಾತನ್ನು ಮೀರುವುದು ಹೇಗೆ ?"

"ನೋಡಿದ್ದು ಒಳ್ಳೆಯದೇ ಆಯಿತು ಬಿಡಿ. ಏನಾದರೂ ಹೇಳಿದರೋ ಹೇಗೆ?"

"ನೋಡೋಣ ಎಂದಷ್ಟು ಹೇಳಿದರು. ನಿಮ್ಮ ಈ ಮಿತ್ರರೂ ನನ್ನ ಪರವಾಗಿ ವಕೀಲಿ ವಹಿಸಿದರು."

"ನನ್ನ ಈ ಮಿತ್ರರು ಯಾರ ಪರವಾದರೂ ವಕೀಲಿ ವಹಿಸುತ್ತಾರೆ! ಆದರೆ ನಿಮ್ಮಲ್ಲಿ ಅಷ್ಟು ಆಸಕ್ತಿ ಬೆಳೆದುದು ಹೇಗೋ ತಿಳಿಯಲಿಲ್ಲ."

ಅದಕ್ಕೆ ಸಮಾಧಾನವಾಗಿ ಸುಂದರೇಶ, "ಅವರು ವಕೀಲರು ಎಂದರಲ್ಲ, ಅವರು ನನಗೂ ತಿಳಿದವರೇ. ನಿನಗೂ ತಿಳಿದಿರಬೇಕು, ಇಲ್ಲಿ ಡಾಕ್ಟರಿರಲಿಲ್ಲವೇ ಸುಂದರರಾಯರು, ಅವರ ತಮ್ಮ ವೆಂಕಟಕೃಷ್ಣರಾಯರು" ಎಂದ.

ಸುಂದರರಾಯರು ಈ ಕಡೆ ಹೆಸರು ಹೊತ್ತಿದ್ದ ಡಾಕ್ಟರೇ. ನನಗೆ ಬಂದ ಬಾಲಾರಿಷ್ಟಗಳನ್ನೆಲ್ಲ ಅವರೇ ತೊಲಗಿಸಿದವರು. ಆತ ಬೇಕಾದಷ್ಟು ಹಣವುಳ್ಳವರು, ವೈದ್ಯವೃತ್ತಿಯಿಂದಲೂ ಹಣವನ್ನು ಗಳಿಸಿದವರು. ಆದರೆ ಅವರ ಸ್ವಭಾವ ವಿಚಿತ್ರ. ಬಲು ಮಾತುಗಂಟರು ; ನೆರೆಹೊರೆಯವರ ಸುದ್ದಿಗಳನ್ನೆಲ್ಲ ಸಂಗ್ರಹಿಸಿ, ಬಂದ ರೋಗಿಗಳಿಗೆಲ್ಲ ಅಷ್ಟಿಷ್ಟು ಹಂಚಿ, ಅವರನ್ನೂ ನಗಿಸಿ, ತಾವೂ ನಕ್ಕು, ಕಾಲ ಕಳೆಯುವುದು ಅವರ ಹವ್ಯಾಸ. ಅವರ ವೈದ್ಯವೇನೋ ಖಚಿತವಾದದ್ದು. ಅವರ ಹಸ್ತಗುಣ ಪ್ರಸಿದ್ಧವಾಗಿಯೇ ಅವರ ಸುತ್ತ ರೋಗಿಗಳು ಜಾತ್ರೆಯಲ್ಲಿ ಸೇರಿದಂತೆ ಸೇರುತ್ತಿದ್ದರು. ಬಾಯಿ ಗುಣ ಅಷ್ಟು ಪ್ರಶಸ್ತವಾಗಿರದಿದ್ದರೂ ರೋಗಿಗಳು ಅದನ್ನು ಗಮನಿಸುತ್ತಿರಲಿಲ್ಲ. ಅವರು ವಿಚಿತ್ರ ವ್ಯಕ್ತಿ ಎಂದೆನಲ್ಲವೆ? ಅವರು ವೈದ್ಯಶಾಲೆ ತೆರೆಯುತ್ತಿದ್ದುದು ಬೆಳಿಗ್ಗೆ ಹತ್ತು ಗಂಟೆಗೆ; ಮಧ್ಯಾಹ್ನ ನಾಲ್ಕೈದು ಗಂಟೆಯವರೆಗೂ ತೆರೆದೇ ಇರುತ್ತಿದ್ದಿತು. ರಾತ್ರಿ ಮತ್ತೆ ಎಂಟು ಅಥವಾ ಒಂಭತ್ತು ಗಂಟೆಗೆ ವೈದ್ಯರು ಬಂದು

ಸರಿ ರಾತ್ರಿ ಹನ್ನೆರಡು ಒಂದು ಹೊಡೆದರೂ ಇವರ ಕೆಲಸ ನಡೆದೇ ಇರುತ್ತಿದ್ದಿತು. ಈ ಮನುಷ್ಯನಿಗೆ ಆತುರವೆಂಬುದು ಇಲ್ಲವೇ ಇಲ್ಲ. ಯಾವ ರೋಗಿ ಬಂದರೂ ಅವನ ರೋಗ, ಊಟ, ನಿದ್ರೆ, ಕೆಲಸ, ಸಂಸಾರ ಎಲ್ಲವನ್ನೂ ವಿವರವಾಗಿ ಕೇಳಿ ತಿಳಿದುಕೊಂಡು, ಪರೀಕ್ಷೆ ಮಾಡುತ್ತ ಮೆಲುಕು ಹಾಕಿ ಅನಂತರ ಹದಿನೈದು ನಿಮಿಷ ಲೋಕಾಭಿರಾಮವಾಗಿ ಬೀದಿಯಲ್ಲಿ ಹೋಗುವವರ ವೈಚಿತ್ರ್ಯಗಳನ್ನು ಚರ್ಚಿಸಿ, ಆಮೇಲೆ ಸಮಾಧಿಯಿಂದ ಎದ್ದವರಂತೆ ತಾವು ಪರೀಕ್ಷಿಸಿದ ರೋಗಿಗೆ ಚಿಕಿತ್ಸೆಯನ್ನು ಹೇಳುತ್ತಿದ್ದರು. ಬಾಯಿ ಹರಟೆ ಹೊಡೆಯುತ್ತಿದ್ದರೂ ಮನಸ್ಸು ಮಾತ್ರ ಬಂದ ರೋಗಿಯ ರೋಗದ ವಿಶ್ಲೇಷಣದಲ್ಲಿಯೇ ತೊಡಗಿರುತ್ತಿತ್ತು. ಅದರ ಆಲೋಚನೆ ನಡೆಯುತ್ತಲೇ ಇದ್ದಿತು ಎಂಬುದು ನಮಗೆ ನಂತರ ತಿಳಿಯುತ್ತಿದ್ದಿತು. ರೋಗಿಯನ್ನು ನೋಡಿದೊಡನೆ ಅವರು ಚಿಕಿತ್ಸೆಯನ್ನು ಹೇಳಿದುದೇ ಇಲ್ಲ. ಒಬ್ಬ ರೋಗಿಗೆ ಚಿಕಿತ್ಸೆ ತಿಳಿಯಬೇಕಾದರೆ ಕನಿಷ್ಟಪಕ್ಷ ಅರ್ಧ ಗಂಟೆ; ಅವರ ಬಳಿ ಹೋದರೆ ಎರಡು ಮೂರು ಗಂಟೆಗಳಿಗೆ ಕಮ್ಮಿ ಬರುವುದು ಸಾಧ್ಯವೇ ಇಲ್ಲ! ರೋಗಕ್ಕೆ ಮದ್ದು ಹೇಳಿ, ಕೊಟ್ಟು ಕಳುಹಿಸಿದರೆ ಸಾಮಾನ್ಯವಾಗಿ ವೈದ್ಯರ ಕೆಲಸ ತೀರಿತಲ್ಲವೆ? ಆದರೆ ಈ ವೈದ್ಯರು ಹಾಗಲ್ಲ. ರೋಗಿಗೆ ತನ್ನ ರೋಗದ ಕಾರಣ, ರೋಗದ ಸ್ವರೂಪ, ಔಷಧಿಯ ಕೆಲಸ, ಪಥ್ಯ ಎಲ್ಲವನ್ನೂ ವಿವರವಾಗಿ ಮನದಟ್ಟಾಗುವಂತೆ ತಿಳಿಯಪಡಿಸಿ ಅನಂತರವೇ ಮದ್ದು ಕೊಡುತ್ತಿದ್ದುದು ಅವರು. ರೋಗಿಗೆ ಇಷ್ಟೆಲ್ಲ ವಿವರಗಳು ಬೇಕೇ ಎನ್ನುವುದು ಅವರಿಗೆ ಬೇಕಾಗಿರಲಿಲ್ಲ. ಅದು ತಮ್ಮ ಕರ್ತವ್ಯ ಎಂದೇ ಬಗೆದಿದ್ದರು. ರೋಗಿಗೆ ಇಷ್ಟೆಲ್ಲ ತಿಳಿಯಹೇಳುವಾಗ ಅದೆಷ್ಟೋ ಸಾಮತಿಗಳು, ಉಪಮಾನಗಳು, ಗಾದೆಗಳು, ಬೈಗಳು, ಉಪದೇಶಗಳು, ಹಾಸ್ಯ, ಅಪಹಾಸ್ಯ ,ವಿಡಂಬನೆ, ಖಂಡನೆ, ಎಲ್ಲವೂ ನಡೆಯುತ್ತಿದ್ದುವು. ಆ ರೋಗಿಗೆ ಇದೆಲ್ಲ ಪ್ರಾಣ ಸಂಕಟವಾದರೂ, ಕೇಳುತ್ತ ಕುಳಿತಿದ್ದ ಇತರರಿಗೆ ತುಂಬ ಸ್ವಾರಸ್ಯವಾದ ವಿವಿಧ ವಿನೋದಾವಳಿ. ನಾನು ಒಮ್ಮೆ ಅವರ ಬಳಿ ಕುಳಿತಿದ್ದಾಗ ಹಿರಿಯ ಅಧಿಕಾರಿಗಳೊಬ್ಬರು ಬಂದು "ಡಾಕ್ಟರೇ, ನೋಡಿ ನನಗೆ ಗ್ಯಾಸ್ಟ್ರಿಕ್ ಅಲ್ಸರ್ ಇದ್ದ ಹಾಗಿದೆ" ಎಂದರು. ವೈದ್ಯರು ಒಡನೆಯೆ ಮುಖ ಗಂಟುಹಾಕಿ "ನಿಮಗೆ ಆ ಖಾಯಿಲೆ ಎನ್ನುವುದು ಗೊತ್ತಾದರೆ ಗುಣವನ್ನೂ ನೀವೇ ಮಾಡಿಕೊಳ್ಳಬಹುದಲ್ಲ, ನನ್ನ ಬಳಿ ಏಕೆ ಬಂದಿರಿ? ನಿಮಗೆ ಏನಾಗುತ್ತದೆ, ತೊಂದರೆ ಏನು ಎಂದು

ಹೇಳುವುದಷ್ಟೇ ನಿಮ್ಮ ಕೆಲಸ; ಖಾಯಿಲೆ ಏನೆಂಬುದನ್ನು ನಿರ್ಧರಿಸುವ ಕೆಲಸ ನನ್ನದು. ಅಧಿಕ ಪ್ರಸಂಗ ಮಾಡಬೇಡಿ!" ಎಂದು ಅವರ ಮುಖ ಮುರಿದೇ ಬಿಟ್ಟರು. ಇನ್ನೊಮ್ಮೆ ಅವರಿಗೆ ಏನೋ ಅಸ್ವಸ್ಥವಾದಾಗ ಮತ್ತೊಬ್ಬ ಅಧಿಕಾರಿ ಗಳು ಅವರನ್ನು ಕೆಣಕುವಂತೆ "ಏನು ವೈದ್ಯರಿಗೇ ವ್ಯಾಧಿ ಬಂದರೆ ಹೇಗೆ?" ಎಂದರು. ಅದಕ್ಕೆ ವೈದ್ಯರು ತಟ್ಟನೆ ಹಜಾಮನಿಗೆ ಗಡ್ಡ ಬೆಳೆಯುವುದಿಲ್ಲವೇ?" ಎಂದುಬಿಟ್ಟರು. ಇದು ಅವರ ಮಾತಿನ ಧಾಟಿ. ಅವರಿಗೆ ತಮ್ಮವರು, ಬೇರೆ ಯವರು, ಅಧಿಕಾರಿಗಳು, ಚಾಕರರು, ಬಡವರು, ಧನಿಕರು, ಎನ್ನುವ ಭೇದವೇ ಇರಲಿಲ್ಲ. ರೋಗ ಬಂದರೆ ಎಲ್ಲರೂ ಒಂದೇ ಎಂದು ಅವರ ಸಿದ್ಧಾಂತ. ಅವರ ಇಡೀ ವೇಳೆಯಲ್ಲಿ ಈ ಜಿಜ್ಞಾಸೆ, ವಾಕ್ಯಾರ್ಥ, ಉಪದೇಶ, ವಿನೋದ ಗಳಲ್ಲೇ ಕಳೆದು, ಕೊಟ್ಟ ಮದ್ದಿಗೆ ದುಡ್ಡು ಕೇಳುವುದನ್ನೂ ಮರೆಯುತ್ತಿ ದ್ದರು. ಮರೆವು ಏನು ಅವರು ದುಡ್ಡು ಕೊಡಿರೆಂದು ಕೇಳಿದುದೇ ಇಲ್ಲ. ರೋಗಿ ತಾನಾಗಿ ಕೊಟ್ಟರೆ ಕಾಂಪೌಂಡರ್ ಅದನ್ನು ತೆಗೆದುಕೊಳ್ಳು ತ್ತಿದ್ದ ಅಷ್ಟೆ. ಹಣದ ವಹಿವಾಟೆಲ್ಲ ಅವನದು; ಅವನೂ ಇವರಿಗೆ ಸರಿಯಾದವನು! ಎಂದ ಮೇಲೆ ಅವರ ವೈದ್ಯಶಾಲೆ ಧರ್ಮಛತ್ರವೇ. ಆದರೂ ಗುಣವಾದ ರೋಗಿಗಳು ಯಾರೂ ಹಣ ಕೊಡದೆ ಇರುತ್ತಿರಲಿಲ್ಲ. ಅವರು ತಮ್ಮ ವೃತ್ತಿಯಿಂದ ಬೇಕಾದಷ್ಟು ಹಣವನ್ನು ಗಳಿಸಿದರು. ಆರೋಗ್ಯವನ್ನು ಆರಾಧಿಸುವವರು ರೋಗಿಗಳಾಗಿಯೇ ಉಳಿಯುತ್ತಾರೆ ಎನ್ನುವ ಹಾಗೆ ಹಣ ವನ್ನು ಗಳಿಸಬೇಕೆಂಬ ಗೀಳುಳ್ಳವರು ಬಡವರಾಗಿಯೇ ಇರುತ್ತಾರೆ. ಧನವನ್ನು ತಾತ್ಸಾರ ಬುದ್ಧಿಯಿಂದ ನೋಡುವವರನ್ನು ಧನ ತಾನಾಗಿಯೇ ಅರಸಿಕೊಂಡು ಬರುತ್ತದೆ. ಅಂತೂ ಸುಂದರರಾಯರು ಶ್ರೀಮಂತರಾದರು. ಆದರೆ ಏನೋ ಆಕಸ್ಮಿಕವಾಗಿ ಇದ್ದಕ್ಕಿದ್ದಂತೆ ನಡುವಯಸ್ಸಿನಲ್ಲೇ ತೀರಿಕೊಂಡುಬಿಟ್ಟರು.

ಇವರ ತಂದೆ ಬಾಲಕೃಷ್ಣರಾಯರು ವಕೀಲರಾಗಿದ್ದವರು. ಇವರು ಬದುಕಿ ದ್ದಾಗ ಸುಂದರೇಶ ಅವರ ಜೊತೆಯಲ್ಲೇ ಅಡ್ಡಾಡುತ್ತಿದ್ದುದನ್ನು ಕಂಡಿದ್ದೆ; ಅವರು ತೀರಿಕೊಂಡ ಮೇಲೆ ಡಾಕ್ಟರ್ ಸುಂದರರಾಯರ ಅಂಗಡಿಯಲ್ಲಿಯೇ ಇರುತ್ತಿದ್ದುದನ್ನು ನೋಡಿದ್ದೆ. ಡಾಕ್ಟರು ಇವನಿಂದ ಆ ಕೆಲಸ ಈ ಕೆಲಸ ಮಾಡಿಸಿಕೊಂಡು ಆಗಾಗ ಪುಡಿಕಾಸನ್ನು ಕೊಡುತ್ತಿದ್ದರೆಂದು ಕೇಳಿದ್ದೆ. ಅವರು ಮನೆಯೊಂದನ್ನು ಕಟ್ಟಿದರು; ಆಗ ಸುಂದರೇಶನೇ ಕೆಲಸವನ್ನು ನೋಡಿ

ಕೊಂಡನಂತೆ. ಇವನ ಮೇಲೆ ಅವರಿಗೆ ತುಂಬಾ ಅಭಿಮಾನವಂತೂ ಇದ್ದಿತು. ಸಮಯ ಬಿದ್ದಾಗಲೆಲ್ಲ ಇವನನ್ನು ಗೇಲಿಮಾಡಿಕೊಂಡು ನಗುತ್ತಿದ್ದರು, ನಿಜ. ಉಂಡಾಡಿ, ವಾಚಾಳಿ, ವೈಗಳ್ಳ, ಅಧಿಕಪ್ರಸಂಗಿ, ತರಲೆ ಎನ್ನುವುದೆಲ್ಲ ಅವರು ಕರೆದ ಹೆಸರುಗಳೇ! ತುಂಬ ಬೇಕಾದವರ ವಿಚಾರದಲ್ಲಿ ತುಂಬ ಸಲುಗೆಯೂ ಇರುತ್ತದೆ, ಅಲ್ಲವೆ?

ಡಾಕ್ಟರ ತಮ್ಮ ವಕೀಲರನ್ನು ನಾನು ನೋಡಿರಲಿಲ್ಲ. ಅವರ ವಿಚಾರ ಏನೋ ಕೇಳಿದ ಹಾಗೆ ನೆನಪು. ಅವರು ಬೆಂಗಳೂರು ಬಿಟ್ಟು ತುಂಬ ದಿವಸ ಆಯಿತಂತೆ. ಸುಂದರೇಶ ಅವರನ್ನು ನೋಡಿದ್ದರೂ ನೋಡಿರಬಹುದು; ಆದರೆ ಹೆಚ್ಚು ಪರಿಚಯವಿರಲು ಕಾರಣವಿಲ್ಲ. ಈ ವಕೀಲರಿಗೂ ನಮ್ಮ ಪ್ರಿನ್ಸಿಪಾಲರಿಗೂ ಬಾಲ್ಯಸ್ನೇಹವೆಂದರೇನು? ಪ್ರಿನ್ಸಿಪಾಲರು ತಮಿಳುನಾಡಿನ ಕಡೆಯವರು, ಜಂಬುನಾಥಯ್ಯರೆಂದೇ ಅವರ ಹೆಸರು. ಅವರ ಕನ್ನಡವೂ ಒಂದು ಬಗೆಯದೇ. ಪದ್ಮನಾಭಶೆಟ್ಟಿಗೆ ಸಹಾಯ ಮಾಡಬೇಕೆನ್ನುವ ಬಯಕೆಗಿಂತ ಈ ರಹಸ್ಯವನ್ನು ಭೇದಿಸಬೇಕೆಂಬ ಕುತೂಹಲವೇ ಹೆಚ್ಚಾಯಿತು.

೪

ಹುಡುಗನಿಗೆ ಇಂಟರ್‌ವ್ಯೂಗೆ ತಡವಾಗಬಾರದೆಂದು ಅವನನ್ನು ಊಟಕ್ಕೆ ಎಬ್ಬಿಸಿದೆ. ಸುಂದರೇಶ ಕದಲುವ ಸೂಚನೆ ಕಾಣಲಿಲ್ಲವಾಗಿ "ಏನಯ್ಯಾ ಇಲ್ಲೇ ಆರೋಗಣೆ ಏಕೆ ಆಗಬಾರದು?" ಎಂದು ಕೇಳಲು ಅವನು "ಏಕಾಗಬಾರದು?" ಎಂದು ಪ್ರಶ್ನೋತ್ತರವನ್ನು ಕೊಟ್ಟು ಎದ್ದ. ನಾವು ಮೂರೂ ಜನ ಊಟಕೆ ಕುಳಿತೆವು. ಊಟದ ಮಧ್ಯೆ ಮಾತು ಸಾಗಲೆಂದು ನಾನು ಸುಂದರೇಶನ ಕಡೆ ತಿರುಗಿ "ಏನಯ್ಯಾ ಆ ವಕೀಲರು—ವೆಂಕಟಕೃಷ್ಣರಾಯರು ಎಂದೆಯಲ್ಲ—ಮಂಗಳೂರಿಗೆ ಹೋದದ್ದು ಯಾಕೆ? ಅವರ ತಂದೆಯೂ ಲಾಯರಾಗಿದ್ದರಲ್ಲವೆ? ಇಲ್ಲಿಯೇ ಅವರೂ ಲಾಯರಿ ನಡೆಸಬಹುದಾಗಿತ್ತಲ್ಲ?" ಎಂದು ಕೇಳಿದೆ. ಸುಂದರೇಶ ಉದಾಸೀನನಾಗಿ "ಏನೋ ಅಣ್ಣ ತಮ್ಮಂದಿರ ಜಗಳ" ಎಂದಷ್ಟು ಹೇಳಿದ. ನನಗೆ ಆಶ್ಚರ್ಯವಾಯಿತು. ಸುಂದರರಾಯರು ವಾಚಾಳಿಯಾದರೂ

ಜಗಳಗಂಟರಲ್ಲ; ಅವರ ನಾಲಗೆ ಅಷ್ಟು ಹರಿತವಾಗಿದ್ದರೂ ಅವರದ್ದು ಹೆಂಗರುಳು ಎಂದು ಕೇಳಿದ್ದೆ. ಅವರು ತಮ್ಮನ್ನೊಂದಿಗೆ ಜಗಳವಾಡಿಯಾರೆಂದು ನಾನು ನಿರೀಕ್ಷಿಸಿರಲಿಲ್ಲ. ಅದರ ಕಾರಣವನ್ನು ಕೇಳಿ ತಿಳಿದುಕೊಳ್ಳುವ ಕುತೂಹಲವಿದ್ದರೂ ಪರ ಊರಿನ ಹುಡುಗ–ಅದೂ ಹೊಸ ಪರಿಚಯ–ಎದುರಿಗಿದ್ದಾಗ ಬೇರೊಬ್ಬರ ಸಂಸಾರವನ್ನು ಕೆದಕುವುದು ಸರಿಯಲ್ಲವೆಂದು ಬಗೆದು ಸುಮ್ಮನಾದೆ. ಆದರೆ ಆ ಹುಡುಗನೇ ಮಧ್ಯೆ ಬಾಯಿ ಹಾಕಿ "ವಕೀಲರದ್ದು ತುಂಬ ನಿಷ್ಠುರ ಸ್ವಭಾವ ಸ್ವಾಮಿ. ಅವರು ಸಿಟ್ಟಿಗೆದ್ದರೆಂದರೆ ಶಿವನೇ ಗತಿ. ಮನೆಯವರೊಂದಿಗೆ ಜಗಳವಾಡಿಯೇ ಬಂದಿದ್ದಾರೆಂದು ಅಲ್ಲಿಯ ಮಾತು–ಅಲ್ಲಿಯೂ ಅವರು ಒಂಟಿಯಾಗಿಯೇ ಇದ್ದಾರೆ. ಸಂಸಾರವಿಲ್ಲ" ಎಂದು ಹೇಳಿದ.

ನನ್ನ ಕುತೂಹಲ ಇನ್ನಷ್ಟು ಕೆರಳಿತು ಸುಂದರೇಶನೇನೋ ಬಾಯಿ ಬಿಡಲಿಲ್ಲ, ಬಾಯಿ ಬಿಡುವ ಉತ್ಸಾಹವನ್ನು ತೋರಿಸಲಿಲ್ಲ. ಮುಂದೆ ಮೂರೂ ಜನರೂ ಮೌನದಿಂದಲೇ ಊಟ ಮುಗಿಸಿದೆವು. ಊಟವಾದ ಮೇಲೆ ಹುಡುಗ ಹೊರಗೆ ಹೊರಡಲು ಸಿದ್ಧನಾದ. ನಾನು ಪದ್ಮನಾಭನಿಗೆ "ಏನು, ಪ್ರಿನ್ಸಿಪಾಲರಿಗೆ ನಾನೂ ಒಂದು ಮಾತು ಹೇಳಲೋ?" ಎಂದು ಕೇಳಿದೆ. ಅದಕ್ಕೆ ಅವನು "ತೊಂದರೆಯಾಗುವ ಹಾಗಿದ್ದರೆ ಬೇಡ ಸ್ವಾಮಿ. ವಕೀಲರ ಕಾಗದವನ್ನಂತೂ ಕೊಟ್ಟುಬಂದಿದ್ದೇನೆ, ಅದೃಷ್ಟವಿದ್ದರೆ ಅದೇ ನಡೆಯುತ್ತದೆ. ನಿಮ್ಮ ದಾಕ್ಷಿಣ್ಯವನ್ನು ನನಗೀಗ ವೆಚ್ಚ ಮಾಡಿಸುವ ಇಷ್ಟವಿಲ್ಲ ನನಗೆ. ಇನ್ನೂ ಹೆಚ್ಚಿನ ಉಪಕಾರ ನಿಮ್ಮಿಂದ ಆಗಬೇಕಾದದ್ದಿದೆ!" ಎಂದು ಜಾರಿಕೊಂಡ.

ಈ ವರ್ತನೆ ನನಗೆ ಆಶ್ಚರ್ಯವೆನಿಸಿತು. ನಾನಾಗಿ ಕೇಳಿದಾಗಲೂ ನೆರವನ್ನು ನಿರಾಕರಿಸಿದನಲ್ಲವೆ? ಇದರ ರಹಸ್ಯವೇನು? ಹುಡುಗ ಅಷ್ಟು ನೇಮವಂತನೆ? ಅಥವಾ ಆ ಕೆಲಸದಲ್ಲಿ ಅವನಿಗೆ ಅಷ್ಟಾಗಿ ಅಭಿರುಚಿ ಇಲ್ಲವೋ? "ಒಳ್ಳೆಯದು ಹೋಗಿಬನ್ನಿ, ವಿಚಾರಿಸುತ್ತೇನೆ, ಅವಶ್ಯವಿದ್ದರೆ ಒಂದು ಮಾತು ಹೇಳುತ್ತೇನೆ. ಯಾರ ಮಾತಿಲ್ಲದೆಯೂ ಕೆಲಸ ಸಿಕ್ಕೀತು! ಸಮಯವಿದ್ದರೆ ಬಂದು ಹೋಗಿ, ಇಲ್ಲವಾದರೆ ಬೆಂಗಳೂರಿಗೆ ಮತ್ತೆ ಬಂದಾಗ ಬನ್ನಿ" ಎಂದು ಪದ್ಮನಾಭನ ಕೈ ಕುಲುಕಿ ನಗುಮುಖದಿಂದ ಕಳುಹಿಸಿಕೊಟ್ಟೆ. ಅವನೂ ಬಾಯಿ ತುಂಬ, ಮನಸಾರೆ, ತನ್ನ ಕೃತಜ್ಞತೆಗಳನ್ನು ಸೂಚಿಸಿ ಮತ್ತೆ ಬರುತ್ತೇನೆಂದು ಹೇಳಿ ಹೊರಬಿದ್ದ. ಹೊರಡುವ ಮುನ್ನ ಸುಂದರೇಶನಿಗೆ ಸಹ

ನಮಸ್ಕಾರಗಳನ್ನು ಹೇಳಿದ, ನನ್ನ ಹೆಂಡತಿಗೂ ಕೃತಜ್ಞತೆಗಳನ್ನು ಅರ್ಪಿಸಿದ. ಹುಡುಗ ತುಂಬ ಒಳ್ಳೆಯವನೆಂದು ನನಗೆ ದೃಢವಾಯಿತು.

ಪದ್ಮನಾಭ ಹೊರಟುಹೋದ ಮೇಲೆ ನಾನು ಸುಂದರೇಶನಿಗೆ "ಕೂಡಯ್ಯ ಹೊರಡಲು ಏನೂ ಅವಸರವಿಲ್ಲ, ಮಾತನಾಡುವುದು ಬಹಳ ಇದೆ" ಎಂದೆ. ಊಟವಾದೊಡನೆ ಹೊರಡುವ ಕುತೂಹಲ ಅವನಿಗೇನು ಇರುತ್ತದೆಯೆ? ಸುಖಾಸೀನನಾಗಿ ಕೂತ. ನನ್ನ ಹೆಂಡತಿಯೂ ಊಟ ಮುಗಿಸಿ ಬರುತ್ತೇನೆಂದು ಹೊರಟಳು. ನಿಧಾನವಾಗಿ ನಾನು "ವಕೀಲ ವೆಂಕಟಕೃಷ್ಣರಾಯರು ನಿನಗೆ ಚೆನ್ನಾಗಿ ಗೊತ್ತೇನಯ್ಯ?" ಎಂದು ಸುಂದರೇಶನನ್ನು ಕೇಳಿದೆ. "ಗೊತ್ತಿಲ್ಲದೆ ಏನು?" ಎಂದು ಅವನು ಆರಂಭಿಸಿದ.

ಸುಂದರೇಶ ಹೇಳಿದ ಕಥೆಯಿಂದ ಸ್ಪಷ್ಟವಾದದ್ದು ಇಷ್ಟು. ವೆಂಕಟಕೃಷ್ಣರಾಯರು ಮೊದಲು ಇಲ್ಲೇ, ತಮ್ಮ ತಂದೆಯ ಬಳಿಯೇ ವಕೀಲಿ ಮಾಡುತ್ತಿದ್ದರು. ತಂದೆ ತೀರಿಕೊಳ್ಳುವ ಮುಂಚೆ ತಮ್ಮ ಆಸ್ತಿಯನ್ನು ಇಬ್ಬರು ಮಕ್ಕಳಿಗೂ ಸಮನಾಗಿ ಹಂಚಿದರು. ಡಾಕ್ಟರರಿಗೆ ಮಕ್ಕಳಿಲ್ಲ; ಗಂಡ ಹೆಂಡತಿ ಇಬ್ಬರೇ; ತಮ್ಮನಿಗೋ ನಾಲ್ಕು ಜನ ಹೆಣ್ಣುಮಕ್ಕಳು. ಇದನ್ನು ಕಂಡು ಡಾಕ್ಟರು ತಮ್ಮ ಆಸ್ತಿಯ ಭಾಗವನ್ನು ತಮ್ಮನಿಗೇ ಕೊಟ್ಟುಬಿಟ್ಟರು. ತಮ್ಮ ಸಂಪಾದನೆಯೇ ತಮ್ಮ ಸಂಸಾರಕ್ಕೆ ಸಾಕೆಂದರು. ವೆಂಕಟಕೃಷ್ಣರಾಯರಿಗೆ ವಕೀಲಿ ವೃತ್ತಿಯಿಂದ ಸಂಪಾದನೆ ಅಷ್ಟಾಗಿ ಆಗಲಿಲ್ಲ; ಹೆಂಡತಿ ಮಕ್ಕಳು ದುಂದು ವೆಚ್ಚಮಾಡಿ ಪಿತ್ರಾರ್ಜಿತವಾಗಿ ಬಂದ ಆಸ್ತಿ ಬಹುಮಟ್ಟಿಗೆ ಮರೆಯಾಯಿತು. ಬಡತನ ಬಂದಾಗಲೇ ಹೆಣ್ಣುಮಕ್ಕಳೂ ಮದುವೆಗೆ ನಿಂತರು. ಹಾಗೂ ಹೀಗೂ ಮೂರು ಮಕ್ಕಳಿಗೆ ಮದುವೆಯಾಯಿತು. ಡಾಕ್ಟರು ಸಹಾಯ ಮಾಡಿದರು. ನಾಲ್ಕನೆಯವಳು ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿದಳು. ಸಂಸಾರ ಸ್ವಲ್ಪ ಸುಧಾರಿಸಿತು. ಆದರೆ ಇದ್ದಕ್ಕಿದ್ದ ಹಾಗೆ ಗಂಡನಿಗೂ ಹೆಂಡತಿಗೂ ಒಡಕು ಬಂತು. ಕಾರಣ ತಿಳಿಯದು. ತಾಯಿ-ಮಗಳು ಮನೆಯಲ್ಲಿಯೇ ಇದ್ದರು. ವೆಂಕಟಕೃಷ್ಣರಾಯರು ಬೇರೆ ಎಲ್ಲೆಲ್ಲೋ ಇರುತ್ತಿದ್ದರು. ಸ್ವಲ್ಪ ದಿನಗಳಾದ ಮೇಲೆ ಅವರು ಊರು ಬಿಟ್ಟರೆಂದು ತಿಳಿದು ಬಂದಿತು. ಮಂಗಳೂರನ್ನು ಸೇರಿದರೆಂದು ಒಂದು ವರ್ಷದ ಮೇಲೆ ತಿಳಿಯಿತು. ತಾಯಿ-ಮಗಳು ಮಾತ್ರ ಇಲ್ಲೇ ಇದ್ದಾರೆ; ಸುಖವಾಗಿಯೇ ಇದ್ದಾರೆ. ವಕೀಲರೇನು

ಹಣ ಕಳುಹಿಸುತ್ತಿಲ್ಲ; ಇವರೇ ಹೇಗೋ ನಿರ್ವಹಿಸುತ್ತಿದ್ದಾರೆ. ಅಲ್ಲಿ ವಕೀಲರು ಒಂಟಿಯಾಗಿಯೇ ಇದ್ದಾರೆ.

ಸುಂದರೇಶ ಹೇಳಿದ ಕಥೆಯಲ್ಲಿ ಸ್ಪಷ್ಟವಾದುದಕ್ಕಿಂತ ಅಸ್ಪಷ್ಟವಾಗಿ ಉಳಿದ ಭಾಗವೇ ಹೆಚ್ಚು. ಎಲ್ಲ ವಿವರಗಳೂ ಅವನಿಗೆ ತಿಳಿದಂತೆ ತೋರುತ್ತಿತ್ತು; ಆದರೆ ಅವನು ಏನೋ ಮರೆಮಾಚುತ್ತಿದ್ದ. ವಿವರಗಳನ್ನು ಹೇಳಲು ಅವನು ಆಸಕ್ತನಾಗಿರಲಿಲ್ಲ. ವಕೀಲರಿಗೆ ವ್ಯಾಪಾರವಿಲ್ಲದೇ ಹೋದುದು ಏಕೆ? ಅಷ್ಟು ಶ್ರೀಮಂತರಾಗಿದ್ದವರು ಇದ್ದಕ್ಕಿದ್ದಂತೆ ಬಡವರಾಗುವುದು ಹೇಗೆ? ಗಂಡ-ಹೆಂಡತಿಗೆ ಒಡಕು ಏಕೆ ಬಂದಿತು? ಆತ ಮಂಗಳೂರಿಗೆ ಹೋದದ್ದು ಏಕೆ? ಪರಿಸ್ಥಿತಿ ಸುಧಾರಿಸಿದ ಮೇಲೆ ಮತ್ತೆ ಬರಲಿಲ್ಲವೇಕೆ? ಈ ಪ್ರಶ್ನೆಗಳನ್ನೆಲ್ಲ ನಾನು ಕೇಳಿದೆನಾದರೂ ಸುಂದರೇಶನಿಂದ ಸಮರ್ಪಕವಾದ ಉತ್ತರಗಳು ಬರಲಿಲ್ಲ. ಇರಲಿ, ಮತ್ತೊಮ್ಮೆ ಕೆದಕಿದರಾಯಿತು ಎಂದುಕೊಂಡು ಸುಮ್ಮನಾದೆ.

ಸ್ವಲ್ಪ ಹೊತ್ತು ಮಾತನಾಡುತ್ತ ಕುಳಿತಿದ್ದು ಸುಂದರೇಶ ಎದ್ದು ಹೊರಟ. ನಾನು ನಿರೀಕ್ಷಿಸಿದ ವಿವರಗಳು ದೊರೆಯಲಿಲ್ಲವೆಂದು ನಿರಾಶನಾಗಿದ್ದೆ. ಹೊರಡುವ ಮುನ್ನ ಅವನು "ಈ ಹುಡುಗನಿಗೆ ಕೆಲಸ ದೊರೆಯುವುದೋ ಹೇಗೆ?" ಎಂದು ಕೇಳಿದ. ನಾನು "ಹೇಗೆ ಹೇಳುವುದು? ದೊರೆತರೂ ದೊರೆಯಬಹುದು; ಆದರೆ ಅವನಿಗೇನು ಅಷ್ಟು ಆಸಕ್ತಿ ಇದ್ದ ಹಾಗೆ ಕಾಣುವುದಿಲ್ಲ. ದೊರೆತರೆ ಸಂತೋಷವಿಲ್ಲ, ದೊರೆಯದಿದ್ದರೆ ನಷ್ಟವಿಲ್ಲ ಎಂದುಕೊಂಡಂತೆ ಕಾಣುತ್ತದೆ" ಎಂದೆ. ಸುಂದರೇಶ ಅನ್ಯಮನಸ್ಕನಾಗಿಯೆ "ಅದು ಸರಿಯೇ, ಅಲ್ಲಿಯೇ ಸುಖವಾಗಿದ್ದಾನೆ. ಇಲ್ಲಿ ಸುಖವಾಗಿರುವ ನೆಚ್ಚಿಗೆಯೇನು?" ಎಂದಷ್ಟು ಹೇಳಿ ಹೊರಟುಹೋದ.

೫

ಆ ದಿನ ಸಂಜೆ ಮ್ಯೂಸಿಯಂ ಕಡೆ ಹೊರಟಿದ್ದೆ. ಅಲ್ಲಿ ಈಚೆಗೆ ಆರ್ಟ್ ಗ್ಯಾಲರಿಯೊಂದನ್ನು ವ್ಯವಸ್ಥೆ ಮಾಡಿದ್ದಾರೆಂದು ಕೇಳಿದ್ದೆ; ಅದನ್ನು ನೋಡಿ ಬರುವ ಉದ್ದೇಶ ನನಗಿದ್ದಿತು. ದಾರಿಯಲ್ಲಿ ಕಬ್ಬನ್ ಪಾರ್ಕ್ ಕಡೆಯಿಂದ ನಮ್ಮ ಪ್ರಿನ್ಸಿಪಾಲರು ಕಾರಿನಲ್ಲಿ ಬರುತ್ತಿದ್ದರು. ನನ್ನನ್ನು ಕಂಡೊಡನೆ ಅವರು

ಕಾರು ನಿಲ್ಲಿಸಿ "ಏನು ಈ ಕಡೆ?" ಎಂದು ಪ್ರಶ್ನಿಸಿದರು. ನಾನು ಇದೇ ಮ್ಯೂಸಿಯಂಗೆ ಹೊರಟಿದ್ದೆ. ಅಲ್ಲೀಗ ಆರ್ಟ್ ಗ್ಯಾಲರಿಯೊಂದನ್ನುಮಾಡಿದ್ದಾರಂತಲ್ಲ" ಎಂದು ಹೇಳಲು ಅವರು "ಅಗತ್ಯವಾಗಿ ಹೋಗಲೇ ಬೇಕೆ?" ಎಂದು ಕೇಳಿದರು. ಅದಕ್ಕೆ ನಾನು "ಹಾಗೇನಿಲ್ಲ, ಮತ್ತೊಮ್ಮೆ ಹೋದರಾಯಿತು. ಈಗ ಇನ್ನೇನು ಅಗತ್ಯ ಹೇಳಿ" ಎಂದೆ.

ನನಗೂ ಅವರಿಗೂ ಬಹಳ ಕಾಲದ ಪರಿಚಯವಿಲ್ಲವಾದರೂ ಸಲುಗೆ ಯೇನೋ ಇದ್ದಿತು. ನನ್ನಲ್ಲಿ ಎಂದೂ ಅವರು ವಿಶ್ವಾಸದಿಂದಲೇ ನಡೆದು ಕೊಳ್ಳುತ್ತಿದ್ದರು. ಅವರ ವಿಚಾರದಲ್ಲಿ ನನಗೆ ಸ್ವಲ್ಪ ಕನಿಕರವೂ ಇದ್ದಿತು. ಕಾರಣ ಏನೆಂದರೆ ಅವರು ಏಕಾಂಗಿಗಳಾಗಿ ಬವಣೆ ಪಡುತ್ತಿದ್ದಾರೆಂದು ನನ್ನ ಎಣಿಕೆ. ಏಕಾಂಗಿಗಳೆಂದರೆ ಮನೆಯಲ್ಲಿ ಒಬ್ಬರೇ ಇದ್ದಾರೆಂದಲ್ಲ, ಅವರ ತಂಗಿಯೂ, ಆಕೆಯ ಮಗನೂ ಮಗಳೂ ಇವರೊಂದಿಗೇ ಇದ್ದರು. ತಂಗಿ ಮನೆತಪ್ಪಿದ ಹೆಂಗಸು; ಗಂಡ ತೀರಿಕೊಂಡಂದಿನಿಂದ ಅಣ್ಣನ ಜೊತೆಯಲ್ಲೇ ಇದ್ದಾರೆ. ಆಕೆಯನ್ನೂ ಆಕೆಯ ಮಕ್ಕಳನ್ನೂ ಪ್ರಿನ್ಸಿಪಾಲರು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾರೆ. ಪ್ರಿನ್ಸಿಪಾಲರಿಗೆ ಹೆಂಡತಿಯಿಲ್ಲ. ಮದುವೆಯೇ ಇಲ್ಲವೋ, ಮದುವೆಯಾಗಿ ವಿಧುರರೋ ತಿಳಿಯದು. ಮದುವೆಯಾಗಿದ್ದು ಹೆಂಡತಿ ತೀರಿಕೊಂಡಿದ್ದಾರೆಂದು ಜನ ಆಡುವ ಮಾತು. ಅಂತೂ ತುಂಬ ವರ್ಷಗಳಿಂದ ಅವರು ಹೀಗೆಯೇ ಇದ್ದಾರಂತೆ.

ಮನುಷ್ಯ ಸ್ವಲ್ಪ ಮುಂಗೋಪಿಯಾದರೂ ಸ್ವಭಾವ ಒಳ್ಳೆಯದು. ಯಾರನ್ನೂ ನಿಷ್ಕಾರಣವಾಗಿ ನೋಯಿಸುವ ಪ್ರಕೃತಿ ಅಲ್ಲ. ಅಧಿಕಾರದಲ್ಲಿ ದರ್ಪ ಕಾಣುವುದಾದರೂ ನಿತ್ಯ ವ್ಯವಹಾರದಲ್ಲಿ ವಿನಯಶಾಲಿಯೇ. ಪ್ರಾಪಂಚಿಕ ವ್ಯವಹಾರ ಜ್ಞಾನ ಅಷ್ಟಾಗಿ ಇಲ್ಲವೆಂದೇ ಹೇಳಬೇಕು. ಇಲ್ಲವೆಂದರೆ ಇತರರನ್ನು ನಂಬಿ ಕೆಲಸ ಮಾಡುವ ಸ್ವಭಾವವೇನಲ್ಲ. ಜನಗಳನ್ನು ಬೇಗ ನಂಬುವುದಿಲ್ಲ ಅವರು; ಕೆದಕಿ ಕೆದಕಿ ವಿವರಗಳನ್ನು ಹೊರತೆಗೆದು, ಮತ್ತೆ ಮತ್ತೆ ಮೆಲುಕು ಹಾಕಿ, ತಮ್ಮಲ್ಲಿ ತಾವೇ ಸಾಧಕ ಬಾಧಕಗಳನ್ನು ಗುಣಾಕಾರ ಹಾಕಿ, ವಿಧಿಯಿಲ್ಲ ದಿದ್ದರೆ ಒಪ್ಪುವ ಸ್ವಭಾವ ಅವರದ್ದು; ತುಂಬ ನಶಿ ನಶಿ. ತಾವು ಜಾಣರಲ್ಲ ವೆಂದು ತಮಗೇ ಗೊತ್ತಿದ್ದರೂ ಇತರರ ಕಣ್ಣಿಗೆ ಜಾಣರೆಂದು ಕಾಣಿಸಿಕೊಳ್ಳ ಬೇಕೆಂಬ ಕುತೂಹಲ ಅವರಿಗುಂಟು. ತಮಗೆ ತಾವೇ ಜಾಣರೆಂದು ನಂಬಿ

ಕೊಳ್ಳಬೇಕೆಂಬ ಬಯಕೆಯೂ ಉಂಟು. ಆತ್ಮವಿಶ್ವಾಸ ಕಡಮೆ ಅವರಿಗೆ. ಹೇಗೋ ನನ್ನನ್ನು ಕೇಳಿ ಕೆಲಸ ಮಾಡುವ ಪರಿಪಾಠವನ್ನಿರಿಸಿಕೊಂಡಿದ್ದರು ಅವರು.

ಈಗ ನನ್ನ ಪ್ರಶ್ನೆಗೆ ಉತ್ತರವಾಗಿ, "ಏನಿಲ್ಲ ಒಂದು ವಿಚಾರ ನಿಮ್ಮೊಡನೆ ಚರ್ಚಿಸಬೇಕಿತ್ತು. ಪುರುಸೊತ್ತಿದ್ದರೆ, ಮನೆಗೆ ಹೋಗೋಣ ಬನ್ನಿ" ಎಂದು ಪ್ರಿನ್ಸಿಪಾಲರು ಅಂದ ಮೇಲೆ ಇಲ್ಲವೆನ್ನಲಾದೀತೆ? ಆಗಲೆಂದು ಒಪ್ಪಿ ಅವರ ಕಾರಿನಲ್ಲಿ ಕೂತೆ. ಅವರ ಮನೆಯನ್ನು ಮುಟ್ಟಿದೆವು. ಮನೆಗೆ ಬಂದೊಡನೆ ಅವರು ತಮ್ಮ ಕೋಣೆಯನ್ನು ತೆರೆದು ನನ್ನನ್ನು ಒಳಗೆ ಕಳುಹಿಸಿ, ತಾವು ಬಟ್ಟೆ ಬದಲಾಯಿಸಿ ಬರುತ್ತೇನೆಂದು ಹೇಳಿ ಒಳಹೊಕ್ಕರು. ನಾನು ಕೋಣೆಯಲ್ಲಿ ಕುಳಿತಿದ್ದಾಗ ಅವರ ತಂಗಿಯ ಮಗ ಮೋಹನ ಬಂದು ಕಾಫಿಯನ್ನು ಕೊಟ್ಟು ಹೋದ. ಈ ಹುಡುಗ ನಮ್ಮ ಕಾಲೇಜಿನಲ್ಲಿಯೇ, ನನ್ನ ಬಳಿಯೇ ಓದುತ್ತಿದ್ದ. ನನಗೆ ತಿಳಿದ ಮಟ್ಟಿಗೆ ತುಂಬ ಸಂಭಾವಿತ, ವಿನಯಶಾಲಿ, ಬುದ್ಧಿವಂತ, ಶ್ರಮ ವಹಿಸಿ ಓದುತ್ತಿದ್ದ. ನನ್ನ ಸಂಶೋಧನೆಗಳಲ್ಲಿ ಆಗಾಗ ನೆರವಾಗುತ್ತಿದ್ದುದೂ ಉಂಟು. ಹುಡುಗ ಮೇಲೆ ನಗುನಗುತ್ತ ಇದ್ದರೂ ಒಳಗೆ ಏನೋ ಕುದಿಯುತ್ತಿದೆಯೆಂದು ನನಗನಿಸುತ್ತಿದ್ದಿತು. ತಂದೆ ಇಲ್ಲವೆಂಬ ಕೊರಗು ಇದ್ದೀತೆಂದು ನಾನು ಅರ್ಥ ಮಾಡಿದ್ದೆ. ಅಂತೂ ಈ ಹುಡುಗನ ಮೇಲೆ ನನಗೆ ಅವ್ಯಾಜವಾದ ಅಭಿಮಾನ ಮೂಡಿದ್ದಿತು ಎನ್ನುವುದು ನಿಜ.

ಐದು ಹತ್ತು ನಿಮಿಷಗಳಲ್ಲಿಯೇ ಪ್ರಿನ್ಸಿಪಾಲರು ಬಂದರು. ನನ್ನೆದುರು ಕುಳಿತು "ಈ ದಿನ ಮಧ್ಯಾಹ್ನ ಕೆಮಿಸ್ಟ್ರಿ ವಿಭಾಗದಲ್ಲಿ ಡೆಮಾನ್‌ಸ್ಟ್ರೇಟರ್ ಕೆಲಸಕ್ಕೆ ಇಂಟರ್‌ವ್ಯೂ ಇದ್ದಿತು. ನೀವೂ ಇದ್ದಿದ್ದರೆ ಚೆನ್ನಾಗಿತ್ತು"ಎಂದರು. ನಾನು "ಅದು ಹೇಗೆ ಸರ್ ಸಾಧ್ಯ? ನನ್ನದು ಸೈಕಾಲಜಿ. ಕೆಮಿಸ್ಟ್ರಿಗೂ ನನಗೂ ಏನು ಸಂಬಂಧ? ವಿಶ್ವನಾಥರಾಯರಿದ್ದರಲ್ಲವೇ?" ಎಂದು ಕೇಳಿದೆ. ವಿಶ್ವನಾಥ ರಾಯರು ಕೆಮಿಸ್ಟ್ರಿ ಪ್ರೊಫೆಸರರು. ಅವರದ್ದು ಶ್ರೀಮದ್ಗಾಂಭೀರ್ಯದ ಪ್ರಕೃತಿ; ಹೆಚ್ಚು ಮಾತಿಲ್ಲ. ತಾವು ಹೇಳಿದುದನ್ನು ಇತರರು ಕೇಳಲೇಬೇಕೆಂಬ ಹಟಮಾರಿತನ ಅವರದ್ದು. ಇನ್ನೊಬ್ಬರ ಅಭಿಪ್ರಾಯವೆಂದರೆ ಅಸಡ್ಡೆಯೇ; ತಾನೇ ಚಾಣಾಕ್ಷ; ಇತರರು ತನಗಿಂತ ಬುದ್ಧಿಯಲ್ಲಿ ಕೀಳು ಎನ್ನುವುದು ಅವರ ವಿಶ್ವಾಸ. ಪ್ರಿನ್ಸಿಪಾಲರಿಗೂ ಅವರಿಗೂ ಹಲವು ಸಂದರ್ಭಗಳಲ್ಲಿ ವಿರಸ ಒದಗಿದುದುಂಟು. ಪ್ರಸ್ತುತ ಸಂದರ್ಭದಲ್ಲಿ ಏನಾಯಿತೋ ನನಗೆ ತಿಳಿದಿರಲಿಲ್ಲವಾದರೂ

ಆತ ಪ್ರಿನ್ಸಿಪಾಲರ ಮುಖಭಂಗವನ್ನು ಮಾಡಿರಬಹುದೆಂದು ಊಹಿಸಿದೆ. ತನ್ನ ಶಾಖೆಯಲ್ಲಿ ಕೆಲಸಕ್ಕೆ ನೇಮಿಸುವಾಗ ತನ್ನ ಮಾತೇ ಮೇಲಾಗಬೇಕೆಂದು ಆತ ಹಟ ಹಿಡಿದಿದ್ದರೆ ಆಶ್ಚರ್ಯವೇನಲ್ಲ.

ಪ್ರಿನ್ಸಿಪಾಲರು—"ಅವರೂ ಇದ್ದರು. ಆದರೆ ಅವರ ಆಯ್ಕೆ ಸರಿಯೆಂದು ನನಗನಿಸಲಿಲ್ಲ, ಯಾರು ಹೇಳಿದುದನ್ನೂ ಅವರು ಕೇಳುವವರಲ್ಲವೆಂದು ನಿಮಗೂ ತಿಳಿದಿದೆಯಲ್ಲ! ನಾನು ಪ್ರಿನ್ಸಿಪಾಲನಾಗಿದ್ದೂ ನನ್ನ ಮಾತು ನಡೆಯುವುದಿಲ್ಲವಲ್ಲ. ಕೆಮಿಸ್ಟ್ರಿಯ ವಿಚಾರ ನನಗೆ ಹೆಚ್ಚು ತಿಳಿಯದಿರಬಹುದು. ಆದರೆ ಡೆಮಾನ್‌ಸ್ಟ್ರೇಟರ್ ಕೆಲಸಕ್ಕೆ ಏನು ಅರ್ಹತೆ, ನನಗೆ ತಿಳಿಯದೆ ?" ಎಂದು ದುಗುಡದಿಂದ ಹೇಳಿದರು. ನಾನು ಸಮಾಧಾನ ಪಡಿಸುತ್ತ "ಹೋಗಲಿ, ಬಿಡಿ ಸರ್. ಅವರ ಡಿಪಾರ್ಟ್‌ಮೆಂಟ್‌ನಲ್ಲಿ ತಾನೇ ಕೆಲಸ? ಅವರದ್ದೇ ಮಾತು ನಡೆಯಲಿ ಬಿಡಿ" ಎನ್ನಲು ಅವರು "ಅಲ್ಲ, ನಾನು ಅವರಿಗಿಂತ ಮೇಲಧಿಕಾರಿಯಲ್ಲವೆ? ಶಿಫಾರಸು ಮಾಡುವುದಷ್ಟೇ ಅವರ ಕೆಲಸ, ನಿರ್ಧಾರ ಮಾಡಬೇಕಾದುದು ನಾನೇ ತಾನೆ? ನನ್ನ ಅಭಿಪ್ರಾಯಕ್ಕೆ ಸ್ವಲ್ಪವೂ ಬೆಲೆಯಿಲ್ಲವೆ? ಅವರ ಡಿಪಾರ್ಟ್‌ಮೆಂಟ್ ಕೆಲಸವಾದರೆ ಆ ಕಮಿಟಿಯಲ್ಲಿ ನಾನು ಇರಬೇಕಾದುದೇಕೆ? ಅದೂ ಅಧ್ಯಕ್ಷನಾಗಿ ?" ಎಂದು ಕಸಿವಿಸಿಯಿಂದ ಉಸಿರೆಳೆದರು.

ಅವರ ಉದ್ವೇಗದ ಅಂತರಾಳವನ್ನು ಅರಿಯುವ ಇಚ್ಛೆಯಿಂದ ನಾನು, "ಏನಾಯಿತು ಸರ್? ಯಾರನ್ನು ಆರಿಸಿದ್ದಾರೆ ಕಡೆಗೆ? ಅವರ ಹುಡುಗನೇ ಇರಬಹುದೋ ಏನೋ ?" ಎಂದೆ. ಅದಕ್ಕೆ ಅವರು "ಯಾರೋ ಒಬ್ಬ ಮಂಗಳೂರಿನ ಹುಡುಗ, ಪದ್ಮನಾಭಶೆಟ್ಟಿಯೆಂದು ಅವನ ಹೆಸರು. ಅವನನ್ನು ನೇಮಕ ಮಾಡಬೇಕೆಂದು ರಾಯರ ಆಗ್ರಹ" ಎನ್ನಲು ನಾನು ಕುತೂಹಲದಿಂದ "ಯಾಕೆ, ನಿಮಗೆ ಆ ಹುಡುಗ ಸರಿಯೆನಿಸಲಿಲ್ಲವೇನು ?" ಎಂದು ಕೇಳಿದೆ. ಪ್ರಿನ್ಸಿಪಾಲರು ಮುಖವನ್ನು ಒಂದು ಕಡೆ ವಾಲಿಸಿ, "ಹಾಗಲ್ಲ ನೋಡಿ, ಪರೀಕ್ಷೆಯ ಅಂಕಗಳ ಮೇಲೆಯೇ ಒಬ್ಬನ ಯೋಗ್ಯತೆಯನ್ನು ಅಳೆಯುವುದು ಆಗುತ್ತದೆಯೇ? ಕೇಳಿದ ಪ್ರಶ್ನೆಗಳಿಗೇನೋ ಚಟಪಟ ಉತ್ತರ ಕೊಟ್ಟ. ಅವನೇನೂ ಅಧಿಕ ಪ್ರಸಂಗಿಯಂತೆ, ಒರಟನಂತೆ ಕಾಣಲಿಲ್ಲ. ಆದರೂ ಅವನು ಈ ಜಾಗಕ್ಕೆ ಸರಿ ಎಂದು ನನಗೆ ಅನಿಸಲಿಲ್ಲ" ಎಂದರು. ವಾದವನ್ನು ಬೆಳೆಸುವ ಉದ್ದೇಶದಿಂದಲೇ ನಾನು "ನೀವು ನಿಮ್ಮ ಅಭಿಪ್ರಾಯವನ್ನು ಹೇಳಿದಿರಿ ತಾನೆ?

ಹೇಗೂ ನಿಮ್ಮದೇ ಕಡೆಯ ನಿರ್ಧಾರವಲ್ಲವೆ?" ಎಂದೆ. ಪ್ರಿನ್ಸಿಪಾಲರು ನಾನು ಏನನ್ನೂ ಹೇಳಲಿಲ್ಲ, ಹೇಳಿದರೆ ಪ್ರಯೋಜನ ತಾನೇ ಏನು? ವಿಶ್ವನಾಥ ರಾಯರು ಇನ್ನಷ್ಟು ಗದ್ದಲ ಎಬ್ಬಿಸುತ್ತಾರಷ್ಟೆ. ಆದರೂ ನನ್ನ ಮನಸ್ಸಿಗೆ ಸಮಾಧಾನವಿಲ್ಲ. ಇವತ್ತು ಯಾವ ನಿರ್ಧಾರವನ್ನೂ ಮಾಡಿಲ್ಲ. ನಾಳೆ ನೋಡೋಣ ಎಂದಿದ್ದೇನೆ" ಎಂದು ಹೇಳಿ ಗೋಡೆಯನ್ನು ನೋಡಲಾರಂಭಿಸಿದರು.

ಅವರಿಂದ ದೊರೆತ ಇತರ ವಿವರಗಳೆಂದರೆ ಐದು ಮಂದಿ ಅಭ್ಯರ್ಥಿಗಳು ಇದ್ದರಂತೆ; ಅವರಲ್ಲಿ ಪದ್ಮನಾಭ ಶೆಟ್ಟಿಯೇ ಸರ್ವಶ್ರೇಷ್ಠನೆಂದು ಕೆಮಿಸ್ಟ್ರಿ ಪ್ರೊಫೆಸರರ ಅಭಿಪ್ರಾಯವಂತೆ; ಅವನಿಗೆ ಮಾತ್ರವೇ ಹಿಂದಿನ ಅನುಭವ ಇದ್ದಿತಂತೆ. ಹೀಗಿರುವಾಗ ಪ್ರಿನ್ಸಿಪಾಲರ ಆಗ್ರಹವೇಕೆ ಎಂಬುದು ನನಗೆ ಅರ್ಥವಾಗಲಿಲ್ಲ. ಮೇಲಾಗಿ ಪದ್ಮನಾಭಶೆಟ್ಟಿ, ಇವರ ಮಿತ್ರರಾದ ಮಂಗಳೂರು ವಕೀಲರಿಂದ ಪರಿಚಯ ಪತ್ರವನ್ನೂ ತಂದಿದ್ದನಲ್ಲವೆ? ಪ್ರಿನ್ಸಿಪಾಲರನ್ನು ನೋಡಿ ಬಂದುದಾಗಿಯೂ ನನಗೆ ಹೇಳಿದ್ದನಲ್ಲವೆ? ಶಿಫಾರಸು ಪತ್ರವನ್ನು ತಂದಿದ್ದಾನೆಂಬ ಕಾರಣದಿಂದಲೇ ಇವರು ಮುನಿಸಿಕೊಂಡಿದ್ದಾರೋ ಏನೋ? ಆ ವಿಚಾರ ನನಗೆ ತಿಳಿದಿದೆಯೆಂದು ಅವರಿಗೆ ತಿಳಿದಿರಲಿಲ್ಲವೆಂದು ತೋರುತ್ತದೆ. ನಾನೂ ಅವನ್ನು ಬಯಲು ಮಾಡುವ ಉತ್ಸಾಹ ತೋರಿಸಲಿಲ್ಲ.

ಸ್ವಲ್ಪ ಹೊತ್ತು ಮೌನವಾಗಿದ್ದು, ಮೋಹನ ತಂದುಕೊಟ್ಟ ಕಾಫಿಯನ್ನು ಕುಡಿಯುತ್ತ ಪ್ರಿನ್ಸಿಪಾಲರು "ಆ ಹುಡುಗನ ಮೇಲೆ ನನಗೇನು ದುರಭಿಪ್ರಾಯವಿಲ್ಲ. ಮಂಗಳೂರಿನ ವಕೀಲರೊಬ್ಬರು ಅವನ ವಿಚಾರವಾಗಿ ಒಳ್ಳೆಯ ಮಾತುಗಳನ್ನೇ ಬರೆದು ನನಗೆ ಕಳುಹಿಸಿದ್ದಾರೆ. ಅದು ವಿಶ್ವನಾಥ ರಾಯರಿಗೆ ತಿಳಿಯದು. ಆ ಹುಡುಗ ನಮ್ಮ ಮನೆಗೂ ಮೊದಲೇ ಬಂದಿದ್ದ; ನೋಡೋಣವೆಂದು ಹೇಳಿಯೂ ಕಳುಹಿಸಿದ್ದೆ. ಆದರೂ ನೋಡಿ, ಏನೋ ಅವನು ಇಲ್ಲಿರುವುದು ನನಗೆ ಸರಿತೋರುವುದಿಲ್ಲ. ಕಾರಣವನ್ನು ಹೇಳಲಾರೆ. ಅವನು ಮುಂದಿದ್ದರೆ ನನಗೆ ಏನೋ ಅಳುಕು, ಏನೋ ಸಂಕೋಚ. ಅದು ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಅವನಿಗೆ ಕೆಲಸ ಕೊಡಬಾರದೆಂದು ನನ್ನ ಉದ್ದೇಶವಲ್ಲ. ಅದಕ್ಕಾಗಿಯೇ ಈ ಮಧ್ಯಾಹ್ನ ಇಂಟರ್‌ವ್ಯೂನಲ್ಲಿ ನಾನು ಏನೂ ಹೇಳಲಿಲ್ಲ. ಆ ಹುಡುಗ ಬೇಡವೆಂದಲ್ಲ, ಆದರೆ ನನಗೆ ಏನೋ ಹೆದರಿಕೆ.

ನಿಮ್ಮ ಸೈಕಾಲಜಿಗೆ ಇದನ್ನು ಒರೆಹಚ್ಚಿ ನೀವು ತಿಳಿಯಹೇಳಬೇಕು. ಇದ ಕ್ಕಾಗಿಯೇ ನಿಮ್ಮನ್ನು ಇಲ್ಲಿಗೆ ಕರೆತಂದೆ. ನಾಳೆ ಬೆಳಿಗ್ಗೆ ಆ ಹುಡುಗನ ವಿಚಾರ ದಲ್ಲಿ ನಾನು ನನ್ನ ಅಭಿಪ್ರಾಯವನ್ನು ಹೇಳಬೇಕು" ಎಂದರು.

ಈ ರಹಸ್ಯವನ್ನು ಭೇದಿಸಬೇಕೆಂಬ ಕುತೂಹಲ ನನಗುಂಟಾಗದಿರಲಿಲ್ಲ. ಆದರೂ ಮೇಲೆ ಔದಾಸೀನ್ಯವನ್ನು ನಟಿಸುತ್ತ "ಏನು ಸರ್, ಸೈಕಾಲಜಿ ಯನ್ನು ಜ್ಯೋತಿಷ್ಯದ ಮಟ್ಟಕ್ಕೆ ಇಳಿಸಿಬಿಟ್ಟರಲ್ಲ?" ಎಂದು ಹೇಳಿ ನಕ್ಕೆ. ಅವರೂ ನಕ್ಕರು.

"ನಿಮ್ಮ ಸೈಕಾಲಜಿಯಲ್ಲಿ ಇಂಥ ವಿಚಾರಗಳು ಬರುವುದಿಲ್ಲವೆ?"

"ಬಾರದೆ ಉಂಟೆ ಸರ್? ಆದರೆ ಅವನ್ನು ಅರ್ಥಮಾಡಿಕೊಳ್ಳಲು ನೂರಾರು ಸಾಧನಗಳನ್ನು ಬಳಸಬೇಕು; ನಿಮ್ಮನ್ನು ಒಂದೆರಡು ಗಂಟೆ ಪರೀಕ್ಷೆಗೆ ಒಳಪಡಿಸಬೇಕು!"

"ಅಷ್ಟೆಲ್ಲ ಬೇಡ, ಮಹರಾಯರೇ. ನಿಮ್ಮ ಅನುಭವದಿಂದಷ್ಟು ಹೇಳಿ, ಆ ಹುಡುಗನನ್ನು ನೇಮಕ ಮಾಡಬಹುದೋ ಇಲ್ಲವೋ. ಇದರಲ್ಲೇನು ಅಂಥ ಗಹನ ಅಡಗಿದೆಯೆಂದು ನನಗನಿಸುವುದಿಲ್ಲ. ಆ ಹುಡುಗನನ್ನು ಈ ಮೊದಲು ನಾನು ನೋಡಿದ್ದಿಲ್ಲ; ಆ ಹುಡುಗನೂ ನನ್ನನ್ನು ಇಲ್ಲಿಯವರೆಗೆ ನೋಡಿರಲಿಲ್ಲ. ಅವನ ಪೈಕಿ ಯಾರೂ ನನಗೆ ತಿಳಿಯದು, ನನಗೆ ಪತ್ರ ಬರೆದುಕೊಟ್ಟ ವಕೀಲ ರಿಗೆ ಅವರ ಮನೆಯವರು ಪರಿಚಯವಂತೆ. ಆ ವಕೀಲರಿಗೂ ನನಗೂ ಹಳೆಯ ಪರಿಚಯ. ಅವರು ಈ ಊರಿನವರೇ. ಮನೆಯಲ್ಲಿ ಏನೋ ಅನಾನುಕೂಲ ವಾಗಿ ಊರು ಬಿಟ್ಟು ಮಂಗಳೂರು ಸೇರಿದರು. ಅಲ್ಲಿ ಈ ಹುಡುಗನ ತಂದೆಯ ಪರಿಚಯವಾಗಿದ್ದಿತೋ ಏನೋ, ಈಗ ಈ ಹುಡುಗನಿಗೆ ತಂದೆ ಇಲ್ಲವಂತೆ. ಹುಡುಗನ ವಿಚಾರ ನನಗೇನೂ ತಿಳಿಯದು. ಆದರೆ ಈ ಅಳುಕು ಏಕೆಂದು ನನಗೆ ಅರ್ಥವಾಗುತ್ತಿಲ್ಲ."

"ಆಗಲಿ ಸರ್, ನಾಳೆ ಬೆಳಿಗ್ಗೆ ಹೇಳಿದರೆ ಆಗದೆ? ಸ್ವಲ್ಪ ಯೋಚನೆ ಮಾಡುತ್ತೇನೆ."

"ಆಗಲಿ, ಆಗಲಿ. ನಿಮಗೇನು ಕೊಂದರೆ ಇಲ್ಲವಷ್ಟೆ? ಎಲ್ಲಿಗೋ ಹೋಗುತ್ತಿದ್ದವರನ್ನು ಹಿಡಿದುಕೊಂಡು ಬಂದು ಈ ಹೊಣೆಯನ್ನು ಹೊರಿಸಿದೆ! ನಿಮ್ಮ ಸಲಹೆಯಂತೆ ಮಾಡಿಬಿಡುತ್ತೇನೆ ಅಷ್ಟೆ."

೬

ಜಂಬುನಾಥಯ್ಯರು ಈಗ ತಮ್ಮ ತಲೆ ಬೇನೆಯನ್ನು ನನಗೆ ಒಪ್ಪಿಸಿದ್ದರು. ಅದರಿಂದ ಅವರ ಮನಸ್ಸಿಗೆ ನಿರಾಳವಾಯಿತೋ ಇಲ್ಲವೋ ತಿಳಿಯದು.! ನನ್ನ ಮನಸ್ಸಂತೂ ಭಾರವಾಗಿ ಬಸವಳಿಯಿತು. ಮನೆಗೆ ಬಂದೊಡನೆ ಮಡದಿ "ಏನಾಯಿತು? ಹೊರಡುವಾಗ ಚೆನ್ನಾಗಿದ್ದಿರಿ!" ಎಂದು ಬೆರಗಾದಳು. "ಏನಾಯಿತು?" ಎಂದು ನಾನೂ ಕೇಳಲು "ಏನೋ ಮುಖ ನೋಡಿದರೆ ಹಲ್ಲು ನೋವು, ತಲೆಶೂಲೆ, ಹೊಟ್ಟೆನೋವು ಒಟ್ಟಿಗೆ ಬಂದಹಾಗೆ ಕಾಣುತ್ತದೆ" ಎಂದು ಹೇಳಿದಳು. ಮನಸ್ಸಿನ ಆತಂಕ ಮೈಯಮೇಲೆ ಇಷ್ಟು ಪ್ರಭಾವ ಬೀರುವುದೆಂದು ನಾನೆಣಿಸಿರಲಿಲ್ಲ. ಅಂಥದೇನೂ ಇಲ್ಲವೆಂದು ಅವಳಿಗೆ ಸಮಾಧಾನ ಹೇಳಿ, ಪ್ರಿನ್ಸಿಪಾಲರು ನನಗೆ ಒಪ್ಪಿಸಿದ ಜವಾಬುದಾರಿಯ ಕಥೆಯನ್ನು ಹೇಳಿದೆ. ಅದರಿಂದ ಅವಳಿಗೆ ನನಗಾದಂತೆ ಆಶ್ಚರ್ಯವೇನೂ ಆಗಲಿಲ್ಲ.

"ಅಯ್ಯೋ ಬಿಡಿ. ವಿಶ್ವನಾಥರಾಯರಿಗೂ ಇವರಿಗೂ ಆಗದು. ಅವರು ಹೇಳಿದುದನ್ನು ಇವರು ಒಪ್ಪಿಬಿಟ್ಟರೆ ಇವರ ಗೌರವಕ್ಕೆ ಕುಂದು. ಒಪ್ಪುವುದಿಲ್ಲವೆಂದು ಗಟ್ಟಿಯಾಗಿ ಹೇಳುವಷ್ಟು ಧೈರ್ಯವಿಲ್ಲ. ಅದಕ್ಕೇ ಈ ನಾಟಕ. ಇದರಲ್ಲೇನು ಸೈಕಾಲಜಿಯೂ ಇಲ್ಲ, ಬದನೆಕಾಯಿಯೂ ಇಲ್ಲ!"

"ನಾಟಕ ಎನ್ನಬೇಡ, ಪಾಪ. ಪ್ರಿನ್ಸಿಪಾಲರ ಮನಸ್ಸಿನಲ್ಲಿ ಇನ್ನು ಯಾವ ಅಭ್ಯರ್ಥಿಯೂ ಇಲ್ಲ. ಈ ಹುಡುಗ ಯೋಗ್ಯನೆಂದು ಅವರೂ ಒಪ್ಪಿಕೊಳ್ಳುತ್ತಾರೆ."

"ನಾಟಕ ಎಂದರೆ ನಮಗಾಗಿ ಅವರು ಆಡುವ ನಾಟಕ ಎಂದಲ್ಲ; ತಮ್ಮ ತೃಪ್ತಿಗಾಗಿಯೇ ಆಡಿಕೊಳ್ಳುತ್ತಿರುವ ನಾಟಕ. ವಿಶ್ವನಾಥರಾಯರು ಈ ಹುಡುಗನನ್ನು ಒಪ್ಪಿದರಲ್ಲ ಎನ್ನುವುದಷ್ಟೇ ಸಾಕು ಇವರು ಒಪ್ಪದಿರುವುದಕ್ಕೆ. ಹುಡುಗನಲ್ಲಿ ಏನಾದರೂ ಕುಂದುಕೊರತೆ ಇದ್ದಿದ್ದರೆ ಅದನ್ನು ಎತ್ತಿ ತೋರಿಸಿ ವಿಶ್ವನಾಥರಾಯರ ಮುಖಭಂಗ ಮಾಡಬಹುದಾಗಿತ್ತು. ಅದೇನೂ ಕಾಣಲಿಲ್ಲ. ಮತ್ತೇನು ಮಾಡುವುದು? ಒಪ್ಪದೇ ಇರುವುದಕ್ಕೆ ಕಾರಣವಿಲ್ಲ. ಒಪ್ಪಿಬಿಟ್ಟರೆ ತಮ್ಮ ಕೈ ಕೆಳಗಾಯಿತು, ಎನ್ನುವ ಸಂಕಟ ಪ್ರಿನ್ಸಿಪಾಲರಿಗೆ ಅಷ್ಟೆ."

ಈ ವಿವರಣೆ ನನಗೂ ಸರಿಯೆಂದೇ ತೋರಿತು.

"ಆದರೆ ಇಲ್ಲಿ ನಾನು ಮಾಡುವುದೇನು ? ಅದು ಹೇಳು"

"ಮಾಡುವುದೇನು ? ಆ ಹುಡುಗನನ್ನು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಹೇಳುವುದು."

"ಅದರಿಂದ ಪ್ರಿನ್ಸಿಪಾಲರಿಗೆ ಇನ್ನಷ್ಟು ದುಗುಡವಾದೀತು."

"ಆದರೆ ಆಗಲಿ ! ಹಾಗೆಂದು ಒಳ್ಳೆಯ ಹುಡುಗನಿಗೊಂದು ಕೆಲಸ ಸಿಗ ಬೇಡವೇ ? ಹೇಗೂ ನೀವು ಬೇಡವೆಂದರೂ ಪ್ರಿನ್ಸಿಪಾಲರು ಬೇಡವೆಂದರೂ ವಿಶ್ವನಾಥರಾಯರು ಸುಮ್ಮನೆ ಇರುತ್ತಾರೆಯೇ ? ಗದ್ದಲ ಮಾಡಿಯೇ ಮಾಡು ತ್ತಾರೆ."

ಈ ವಿಚಾರವನ್ನು ಹೀಗೆ ಚರ್ಚೆ ಮಾಡಿ ಪ್ರಯೋಜನವಿಲ್ಲವೆಂದು ಬಗೆದು ನಾನು ದಿನದ ಕೆಲಸದಲ್ಲಿ ಉದ್ಯುಕ್ತನಾದೆ. ಸಂಜೆಯ ಆಹ್ನಿಕವನ್ನು ಮುಗಿಸಿ, ಊಟ ಮಾಡಿ, ಕೈಲೊಂದು ಪುಸ್ತಕವನ್ನು ಹಿಡಿದು ಆರಾಮ ಕುರ್ಚಿಯ ಮೇಲೆ ಒರಗಿದೆ" ಪುಸ್ತಕ ನೆಪಮಾತ್ರಕ್ಕಷ್ಟೆ ; ಮನಸ್ಸು ಎಲ್ಲಿಯೋ ಹರಿ ದಾಡುತ್ತಿದ್ದಿತು. ಗಂಟೆ ಎಂಟೂವರೆ ದಾಟಿದ್ದಿತು. ಮಡದಿ ಮನೆಗೆಲಸದಲ್ಲಿ ಮಗ್ನಳಾಗಿದ್ದಳು. ನಾನು ಸುಂದರೇಶ ಹೇಳಿದ ವಿವರಗಳನ್ನು ಮೆಲುಕು ಹಾಕುತ್ತಿದ್ದೆ. ಪ್ರಿನ್ಸಿಪಾಲರ ಆತಂಕ ನನ್ನ ಮನಸ್ಸಿನಿಂದ ಸರಿದಿದ್ದಿತು. ಮಂಗ ಳೂರಿನ ವಕೀಲರ ವ್ಯಕ್ತಿತ್ವ ಎಂಥದು ಎನ್ನುವುದನ್ನು ನಿಶ್ಚಯ ಮಾಡಿಕೊಳ್ಳುವ ಹಂಬಲ ನನ್ನಲ್ಲಿ ಮೂಡಿದ್ದಿತು. ಪ್ರಿನ್ಸಿಪಾಲರು ಅವರ ವಿಷಯ ಪ್ರಸ್ತಾಪಿ ಸುತ್ತ "ಮನೆಯಲ್ಲಿ ಅನನುಕೂಲವಾಗಿ ಊರು ಬಿಟ್ಟು ಮಂಗಳೂರು ಸೇರಿ ದರು" ಎಂದು ತಿಳಿಸಿದ್ದರಲ್ಲವೆ ? ಸುಂದರೇಶ ಇನ್ನಷ್ಟು ವಿಸ್ತಾರವಾಗಿ ತಿಳಿ ಸಿದ್ದ. ಮತ್ತೆ ಅವನು ಬಂದರೆ ವಿಚಾರಿಸಬಹುದು ಎಂದುಕೊಂಡೆ. ಮಧ್ಯಾಹ್ನ ಇಲ್ಲಿಂದ ಹೊರಡುವಾಗ ಅವನು ಮನಸ್ಸಿಲ್ಲದೆಯೇ ಹೋದ ಎನ್ನಿಸಿತು ; ವಿವರ ಗಳನ್ನು ಹೇಳುವ ಕುತೂಹಲ ಅವನಲ್ಲಿ ಕಾಣಲಿಲ್ಲವಾದರೂ ಹುಡುಗನ ಕೆಲಸದ ವಿಚಾರದಲ್ಲಿ ಅವನಿಗೆ ಆಸಕ್ತಿ ಇದ್ದುದಂತೂ ಸ್ಪಷ್ಟವಾಯಿತು. ಅಷ್ಟಲ್ಲದೆ, ಪ್ರಿನ್ಸಿಪಾಲರಿಗೂ ಅವನಿಗೂ ಪರಿಚಯ ಹೇಗೆ ? ಈ ಹುಡುಗನೊಡನೆ ಅವರ ಮನೆಗೆ ಹೋಗಿ ಮಾತನಾಡುತ್ತ ಕುಳಿತು, ಹುಡುಗನ ಪರವಾಗಿ ಶಿಫಾರಸು ಮಾಡಬೇಕಾದರೆ ಚೆನ್ನಾಗಿಯೇ ಪರಿಚಯವಿರಬೇಕಲ್ಲವೆ ? ಈ ಪರಿಚಯ ವಿದ್ದುದೇ ನನಗೆ ತಿಳಿದಿರಲಿಲ್ಲ. ಇಲ್ಲಿಯವರೆಗೆ ಅದು ಸೋಜಿಗವೆಂದೂ ಅನಿಸಿರ

ಲಿಲ್ಲ. ಮತ್ತೆ ಸುಂದರೇಶ ಬಂದಾಗ ಈ ವಿಚಾರ ಪ್ರಸ್ತಾಪಿಸಲೇಬೇಕೆಂದು ನಿರ್ಧರಿಸಿದೆ.

ಹೀಗೆಲ್ಲಾ ಆಲೋಚನೆಗಳ ಸಹಸ್ರಧಾರೆ ಹರಿಯುತ್ತಿರುವಲ್ಲಿ ಬಾಗಿಲು ಸದ್ದಾಯಿತು. ನಾನು ಎದ್ದುಹೋಗಿ ಬಾಗಿಲನ್ನು ತೆರೆಯಲು ಸುಂದರೇಶನ ಭವ್ಯಾಕೃತಿಯ ದರ್ಶನವಾಯಿತು! "ಇದೇನಯ್ಯ ಮತ್ತೆ ಬಂದೆ?" ಎಂದು ನನ್ನಿಂದ ಪ್ರಯತ್ನವಿಲ್ಲದೆಯೇ ಉದ್ಗಾರ ಹೊರಬಂದಿತು. ನನ್ನ ಹೆಂಡತಿ "ಇದೇನು ಹೀಗೆ ಕೇಳುತ್ತೀರಿ? ಒಳ್ಳೆಯ ಗೃಹಸ್ಥರು ನೀವು! ಮರ್ಯಾದೆ ಮಾಡುವುದನ್ನು ನಿಮ್ಮಿಂದ ಕಲಿಯಬೇಕು!" ಎಂದಾಗಲೇ ನಾನಾಡಿದ ಮಾತು ಅನುಚಿತವೆಂಬ ಅರಿವಾಯಿತು. ಮನೆಗೆ ಬಂದವರು ಯಾತಕ್ಕೆ ಬಂದರೆಂದು ತಿಳಿದುಕೊಳ್ಳುವುದು ಸಹಜವಾದ ಕುತೂಹಲವೇ ಆದರೂ ನೇರವಾಗಿ ಅದನ್ನು ಕೇಳುವುದು ಸಭ್ಯತೆಯಲ್ಲವಲ್ಲ; ಬಂದವರನ್ನು ಬಂದುದೇಕೆ ಎಂದು ಕೇಳುವುದು ತಪ್ಪಲ್ಲವಾದರೂ ಬಂದೊಡನೆಯೇ ಆ ಪ್ರಶ್ನೆಯನ್ನು ಅವರ ಮೇಲೆ ಹರಿಹಾಯಿಸುವುದು ತಪ್ಪೇ, ನನ್ನ ತಪ್ಪನ್ನು ಮುಚ್ಚಿಕೊಳ್ಳಲು ದೊಡ್ಡದಾದ ನಗೆಯೊಂದನ್ನು ಹೊರಬಿಟ್ಟು, "ಹಾಗಲ್ಲ, ಮಧ್ಯಾಹ್ನವೆಲ್ಲಾ ಇಲ್ಲೇ ಇದ್ದವನು ಮತ್ತೆ ಬಂದರೆ ಏನೋ ಮಹತ್ವದ ಕಾರಣವಿದ್ದೀತು ಎನಿಸಿತು. ನನ್ನ ಮಾತಿಗೆ ಸುಂದರೇಶನೇನೂ ತಪ್ಪು ತಿಳಿದುಕೊಳ್ಳುವುದಿಲ್ಲ!" ಎಂದೆ. "ಬಾರಯ್ಯ ಕೂಡು, ಮಧ್ಯಾಹ್ನ ಏನೋ ಅವಸರ, ಗದ್ದಲ. ಈಗ ಸ್ವಲ್ಪಹೊತ್ತು ನಿರಾಳವಾಗಿ ಮಾತನಾಡಬಹುದು....ಊಟವಾಯಿತೆ?" ಎಂದು ಸುಂದರೇಶನಲ್ಲಿ ಹೆಚ್ಚಿನ ಆತ್ಮೀಯತೆಯನ್ನು ತೋರಿಸಿ ಹೇಳಿದೆ. ಸದ್ಯ ಅವನ ಊಟವಾಗಿದ್ದಿತು. ಆಗಿಲ್ಲವೆಂದಿದ್ದರೆ ತಂಟೆಗೆ ಬರುತ್ತಿದ್ದಿತು; ನಮ್ಮೆಲ್ಲರ ಊಟವಾಗಿ ಮುಸುರೆಯನ್ನು ಹೊರಗೆ ಎಳೆದಾಗಿದ್ದಿತು.

ಕುರ್ಚಿಯ ಮೇಲೆ ಕೂತವನೇ ಸುಂದರೇಶ "ಪ್ರಿನ್ಸಿಪಾಲರು ಆ ಹುಡುಗನಿಗೆ ಕೆಲಸ ಕೊಟ್ಟರೋ ಹೇಗೆ?" ಎಂದು ಕೇಳಿದ. ಮೊದಲನೆಯ ಪ್ರಶ್ನೆಯೇ ಅದು. ನಾನೂ ನಗೆಯಾಡುತ್ತ "ಈ ಪ್ರಶ್ನೆಗೆ ಎಷ್ಟು ಅಂಕಗಳನ್ನಿಟ್ಟಿದ್ದೀ? ಇನ್ನೇನಾದರೂ ಪ್ರಶ್ನೆಗಳಿದ್ದರೆ ಕೇಳಿಬಿಡು. ಎಲ್ಲ ಪ್ರಶ್ನೆಗಳಿಂದ ಐದನ್ನು ಆಯ್ದುಕೊಂಡು ಉತ್ತರ ಹೇಳಿದರಾಯಿತಲ್ಲ? ನಾವು ಪರೀಕ್ಷೆ ಮಾಡುವುದು ಹೀಗೆಯೇ!" ಎಂದೆ.

"ಹಾಗಲ್ಲ, ನೀನು ಸಂಜೆ ಪ್ರಿನ್ಸಿಪಾಲರ ಮನೆಗೆ ಹೋಗಿರಲಿಲ್ಲವೆ?

ಏನಾದರೂ ಹೇಳಿದರೋ ಎಂದು ಕೇಳಿದೆ ಅಷ್ಟೆ."

ನನಗೆ ಆಶ್ಚರ್ಯವಾಯಿತು. ನಿಜವಾಗಿ ಸುಂದರೇಶ ತ್ರಿಕಾಲ ಜ್ಞಾನಿಯೇ ? ನಾನು ಪ್ರಿನ್ಸಿಪಾಲರ ಮನೆಗೆ ಹೋದದ್ದನ್ನು ಇವನೆಲ್ಲಿ ನೋಡಿದ? ಈ ರಣ ಹದ್ದಿನ ಕಣ್ಣನ್ನು ತಪ್ಪಿಸಿ ಏನನ್ನು ಮಾಡುವುದೂ ಸಾಧ್ಯವೇ ಇಲ್ಲವೆ? ದಾರಿ ಯಲ್ಲಿ ನಾನೆಲ್ಲಿಯೂ ಇವನನ್ನು ನೋಡಲಿಲ್ಲವಲ್ಲ! ಆದರೂ ಆಶ್ಚರ್ಯವನ್ನು ಬಚ್ಚಿಟ್ಟು, "ನಾನು ಪ್ರಿನ್ಸಿಪಾಲರ ಮನೆಗೆ ಹೋಗಿದ್ದೆನೆ?" ಎಂದು ಅವನನ್ನೇ ಕೇಳಿದೆ. ಅವನೇನು ಅಳುಕಲಿಲ್ಲ—

"ಇಲ್ಲವೆ? ನಾನು ಸಂಜೆ ಅವರ ಮನೆಗೆ ಹೋಗಿದ್ದೆ. ಏನೋ ಕೆಲಸ ವಿದ್ದಿತು. ನೀನು ಒಳಗಿದ್ದೀ ಎಂದು ಮೋಹನ ಹೇಳಿದನಲ್ಲ?"

"ಹೌದಯ್ಯ ಸಂಜೆ ಅಲ್ಲಿಗೆ ಹೋಗಿದ್ದೆ. ನಾನಾಗಿ ಹೋಗಲಿಲ್ಲ. ಅವರೇ ಕರೆದುಕೊಂಡು ಹೋದರು. ಆದರೆ, ನಿನಗೆ ಪ್ರಿನ್ಸಿಪಾಲರ ಪರಿಚಯ ಹೇಗೆ? ನಿಮ್ಮಲ್ಲಿ ಪರಿಚಯವಿದ್ದುದೇ ನನಗೆ ಗೊತ್ತಿರಲಿಲ್ಲ!"

ಸುಂದರೇಶ ಉತ್ತರ ಹೇಳಲು ಸಿಧಾನಿಸಿದ. ತಡವರಿಸಿದ ಎಂದರೂ ತಪ್ಪಲ್ಲ. ಕಡೆಗೆ, "ಹೀಗೆಯೇ ಎಲ್ಲೆಲ್ಲೋ ಕಂಡು, ಕೇಳಿ, ಪರಿಚಯ ಎಂದು ತೇಲಿಸಿದ. ನಾನು ಬಿಡಲಿಲ್ಲ. ಇರಲಿ ಹೇಳಯ್ಯ. ಹೇಗೆ? ಎಲ್ಲಿ? ಕಂಡೋ? ಕೇಳಿಯೋ?" ಎಂದು ಒತ್ತಾಯ ಮಾಡಿದೆ. ಆದರೆ ಈ ಬೇಳೆ ಅವನಲ್ಲಿ ಬೇಯಲಿಲ್ಲ. ನಾನೂ ನಿರುಪಾಯನಾಗಿ ಸುಮ್ಮನಾದೆ. ನಮಗೆ ಪರಿಚಿತರಾದವ ರೆಲ್ಲ ಹೀಗೆಯೇ ಇಂಥ ಪ್ರಸಂಗದಲ್ಲಿಯೇ ಪರಿಚಿತರಾದರೆಂದು ಹೇಳುವುದಕ್ಕಾಗು ತ್ತದೆಯೆ? ಅದೂ ಊರಿನವರೆಲ್ಲ ಪರಿಚಯವಿರುವ ಈ ಸುಂದರೇಶನಿಗೆ ಹೇಗೆ ಸಾಧ್ಯ? ಹಿಂದೆ ನಡೆದ ಸಂಗತಿಗಳನ್ನೆಲ್ಲ ನೆನಪಿಗೆ ತಂದುಕೊಂಡು ಪರಿಚಯದ ಪೂರ್ವೋತ್ತರಗಳನ್ನು ವಿವರಿಸುವಷ್ಟು ಸಹನೆ ಇವನಿಗಿದೆಯೆಂದು ಯಾರು ಹೇಳುತ್ತಾರೆ? ಮಿದುಳಿಗೆ ಆಯಾಸವಾಗುವಂಥ ಯಾವ ಯೋಚನೆಯನ್ನೂ ಅವನು ಮಾಡುವುದಿಲ್ಲವೆಂದು ಎಲ್ಲರೂ ಬಲ್ಲರು.

ಸ್ವಲ್ಪ ಹೊತ್ತು ಮೌನ. ಮೌನವನ್ನು ಮುರಿದು ಸುಂದರೇಶ, "ನಾನು ಪ್ರಿನ್ಸಿಪಾಲರ ಮನೆಗೆ ಆಗಾಗ ಹೋಗುತ್ತಿರುತ್ತೇನೆ. ಅವರು ಶ್ರೀರಾಮಪುರ ದಲ್ಲಿ ಮನೆ ಕಟ್ಟಿಸುತ್ತಿದ್ದಾರಲ್ಲ, ಅದನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ಅದರ ವಿಚಾರ ಏನೋ ಹೇಳೋಣವೆಂದೇ ಇವತ್ತು ಸಂಜೆ ಅವರ ಮನೆಗೆ

ಹೋಗಿದ್ದು ನೀನು ಒಳಗೆ ಇದ್ದು. ಏನೋ ಮಾತಾಡುತ್ತಿದ್ದಾರೆ ಎಂದು ಮೋಹನ ಹೇಳಿದ ಮೇಲೆ ಹಿಂದಿರುಗಿದೆ ಅಷ್ಟೆ" ಎಂದು ವಿವರಿಸಿದ. ಜಂಬು ನಾಥಯ್ಯರು ಶ್ರೀರಾಮಪುರದಲ್ಲಿ ಮನೆ ಕಟ್ಟಿಸುತ್ತಿರುವ ವಿಚಾರ ನನಗೆ ಗೊತ್ತಿರ ಲಿಲ್ಲ; ಅವರು ಅಷ್ಟು ಅನುಕೂಲಸ್ಥರೆಂದೂ ನಾನು ಬಗೆದಿರಲಿಲ್ಲ. ಯಾವುದೇ ಮನೆ ಕಟ್ಟುವಾಗ ಸುಂದರೇಶ ಅಲ್ಲಿರುತ್ತಾನೆಂಬುದೇನೋ ನನಗೆ ಹೊಸ ಸುದ್ದಿ ಯಲ್ಲ. ಆದರೆ ಇವರಿಗೆ ಇವನು ಗಂಟುಬಿದ್ದುದು ಹೇಗೆಂಬುದು ಬಗೆಹರಿಯ ಲಿಲ್ಲ. ಇನ್ನು ನಾನು ಪ್ರಶ್ನೆ ಕೇಳಿದರೆ ಅವನು ಮುದುರಿಕೊಳ್ಳುತ್ತಾನೆಂದು ಹೆದರಿ, ಅವನೇ ಹೇಳುವಷ್ಟು ಹೇಳಲಿ ಎಂದು ಸುಮ್ಮನಿದ್ದೆ.

"ಅದು ಪ್ರಿನ್ಸಿಪಾಲರ ಮನೆಯಲ್ಲ. ಕಟ್ಟಿಸುತ್ತಿರುವವರು ಅವರೇ ಆದರೂ ಮನೆ ಅವರ ತಂಗಿಯದು. ತಂಗಿಯ ಗಂಡ ಬದುಕಿದ್ದಾಗ ಭೂಮಿ ಕೊಡಿಸಿ ದವನು ನಾನೇ. ಅವರ ಬಳಿ ಮನೆ ಕಟ್ಟುವಷ್ಟು ಹಣವಿರಲಿಲ್ಲ. ಅವರು ಖಾಯಿಲೆ ಮನುಷ್ಯ ಬೇರೆ; ಎದ್ದು ಓಡಾಡುವ ಹಾಗಿರಲಿಲ್ಲ. ಆಗ ಪ್ರಿನ್ಸಿ ಪಾಲರು ಈ ಊರಿನಲ್ಲಿರಲಿಲ್ಲ, ಬೇರೆ ಎಲ್ಲಿಯೋ ಇದ್ದರು. ಎಲ್ಲಿದ್ದರೆಂಬುದು ನನಗೆ ತಿಳಿಯದು. ಆಗಾಗ ಇಲ್ಲಿಗೆ ಬಂದು ಹೋಗುತ್ತಿದ್ದರು. ಈ ತಂಗಿಯ ಗಂಡ ಅವರೂ ತುಂಬ ಅನ್ಯೋನ್ಯವಾಗಿದ್ದರು; ತಂಗಿಯನ್ನು ಕಂಡರೂ ತುಂಬ ವಿಶ್ವಾಸ. ಈಗ ತಮ್ಮ ಹಣದಲ್ಲಿಯೇ ಆಕೆಗೆ ಮನೆ ಕಟ್ಟಿಸಿಕೊಡುತ್ತಿದ್ದಾರೆ. ಆಕೆಯ ಮಕ್ಕಳೆಂದರೂ ಪ್ರಿನ್ಸಿಪಾಲರಿಗೆ ಪ್ರೀತಿ. ತಮ್ಮ ಮಕ್ಕಳ ಹಾಗೆಯೇ ನೋಡಿಕೊಳ್ಳುತ್ತಿದ್ದಾರೆ."

ಅನಿರೀಕ್ಷಿತವಾಗಿ ಸುಂದರೇಶ ಬಾಯಿಬೀಗವನ್ನು ಕಳಚಿಟ್ಟು ಮಾತ ನಾಡಲು ಮೊದಲಿಟ್ಟ. ನಾನು ಪ್ರಶ್ನೆಮಾಡಿದರೆ ಎಲ್ಲಿಯಾದರೂ ಮಾತು ನಿಲ್ಲಿಸಿ ಬಿಟ್ಟಾನು ಎಂದುಕೊಂಡು ಸುಮ್ಮನೆ ಕೇಳುತ್ತ ಕುಳಿತಿದ್ದೆ; ಅನಾಸಕ್ತನಂತೆ ನಟಿ ಸುತ್ತಲೂ ಇದ್ದೆನೆನ್ನಿ. ಪ್ರಿನ್ಸಿಪಾಲರು ಈ ಊರಿಗೆ ಬರುವ ಮೊದಲೇ ಅವರ ತಂಗಿಯ ಪರಿಚಯ ಸುಂದರೇಶನಿಗಿದ್ದಿತೆನ್ನುವುದು ಸ್ಪಷ್ಟವಾಯಿತು. ಇದೇನು ಸೋಜಿಗವಲ್ಲ. ಯಾರಾದರೂ ಕಷ್ಟದಲ್ಲಿದ್ದರೆ ಅವರಿಗೆ ನೆರವಾಗಲು ಇವನು ಸದಾ ಸಿದ್ಧ. ಅವರೇನು ಕೇಳಬೇಕಾಗಿಲ್ಲ; ತಾನೇ ಮುನ್ನುಗ್ಗಿ ಹೋಗಿ ಸಹಾಯ ಮಾಡಿ, ಎಂದರೆ ತನಗೆ ತೋರಿದ ಹಾಗೆ ಮಾಡಿ, ಕೈಯಾಡಿಸಿ ಕೊಂಡು ಬರುವ ಪ್ರವೃತ್ತಿ ಅವನದು. ಅವನ ಮಿತ್ರಗೋಷ್ಠಿಯಲ್ಲಿ ಬಡವರು,

ಕೆಲಸದವರು, ಕಾಮಾಟಿಗಳು, ವಿಧವೆಯರು ಇವರೇ ಹೆಚ್ಚು.

ಇವನಿಗೆ ಯಾರಲ್ಲಾಗಲೀ, ಯಾವ ಕೆಲಸದಲ್ಲಾಗಲೀ, ಅನುರಕ್ತಿ ಅಥವಾ ಆಸಕ್ತಿ ಬೆಳೆಯುವುದೇ ಇಲ್ಲ. ಈ ವಿಚಾರದಲ್ಲಿ ಅವನು ಮಗುವಿನ ಹಾಗೆ ಅಥವಾ ಮರದ ಹಾಗೆ ಎನ್ನಿ! ಇದರಿಂದಲೇ ಹೆಂಗಸರಿಗೆಲ್ಲ ಅವನ ವಿಚಾರದಲ್ಲಿ ಧೈರ್ಯ, ಸಲುಗೆ. ಅವರು ಹಾಸ್ಯ ಮಾಡಿದರೆ ಅವರೊಂದಿಗೆ ಇವನೂ ನಗುತ್ತಾನೆ! ಅವರು ಬೇಸರಪಟ್ಟುಕೊಂಡು ಬಯ್ದರೆ ತಾನೂ ಬಯ್ದುಬಿಡುತ್ತಾನೆ. ಯಾರಿಗೆ ಯಾವ ಬಗೆಯ ನೆರವಾಗಬೇಕೆಂದು ನಿರ್ಧರಿಸುವ ಅಧಿಕಾರ ಇವನದೇ. ಅವರು ತಮ್ಮ ಅಗತ್ಯವನ್ನು ಹೇಳಬೇಕಷ್ಟೆ; ಅದನ್ನು ಪೂರೈಸುವ ರೀತಿ ಇವನಿಗೆ ಸೇರಿದ ವಿಚಾರ. ಈ ತತ್ವವನ್ನು ಸುಂದರೇಶ ಡಾಕ್ಟರು ಸುಂದರರಾಯರಿಂದ ಕಲಿತಿದ್ದನೆಂದು ಕಾಣುತ್ತದೆ. ಆ ಡಾಕ್ಟರ ಹಾಗೆಯೇ ಇವನ ಮಾತೂ ಸ್ವಾರಸ್ಯವಾಗಿರುತ್ತದೆ, ಬುದ್ಧಿವಂತಿಕೆ ಯೇನೋ ಸ್ವಲ್ಪ ಕಡಮೆ ಎಂದು ಆಗಲೇ ಹೇಳಿದೆನಲ್ಲ?

ಅಂತೂ ಜಂಬುನಾಥಯ್ಯರ ತಂಗಿಗೆ ಸುಂದರೇಶ ಬಹುದಿನಗಳ ಬಂಟ ಎನ್ನುವುದು ಅರ್ಥವಾಯಿತು. ಅವರ-ಇವನ ಪರಿಚಯಕ್ಕೆ ಇದೇ ನಾಂದಿ ಇದ್ದಿರಬಹುದು. ಎಂದರೆ ಅವರ ಮನೆಯವರಿಗೆಲ್ಲ ಇವನು ಆತ್ಮೀಯನೇ. ಇಷ್ಟು ಸಂಶೋಧನೆ ನನ್ನ ಮನಸ್ಸಿಗೆ ಸ್ವಲ್ಪ ಸಮಾಧಾನವನ್ನು ತಂದಿತು. ಏನೋ ಒಂದು ಎಳೆಯನ್ನಾದರೂ ಬಿಡಿಸಿದ ಹಾಗಾಯಿತಲ್ಲ! ಆದರೆ ಜಂಬುನಾಥಯ್ಯರ ಸಂಸಾರದ ಕಥೆ ಏನು? ಅವರಿಗೆ ಮಕ್ಕಳು ಮರಿ, ಹೆಂಡತಿ, ಮನೆ, ಮಠ ಏನೂ ಇಲ್ಲವೆ? ಅವರ ವಿಚಾರ ಸುಂದರೇಶನಿಗೆ ತಿಳಿಯದೆ ಇರುವುದು ಸಾಧ್ಯವೆ? ಬಾಯಿಯೇಕೆ ಬಿಡವೊಲ್ಲ? ಈ ಸಮಸ್ಯೆ ಹಾಗೆಯೇ ಉಳಿದುಕೊಂಡಿತು.

ಸುಂದರೇಶ ಆಕಳಿಸುತ್ತ ಎದ್ದ. ನಿದ್ರೆಗಾಗಲೀ ಊಟಕ್ಕಾಗಲೀ ಅವನು ಎಂದೂ ಅಪಚಾರ ಮಾಡಿದವನಲ್ಲ. "ಇನ್ನು ಹೊರಡುತ್ತೇನೆ" ಎಂದು ಅವನು ಅಂದಾಗ "ಏನಯ್ಯ ಯಾವ ಕಡೆ ಹೊರಟಿದ್ದಿ? ಎಲ್ಲಿಂದ ಬಂದಿ? ಏನು ಸಂಗತಿ? ಏನೂ ಹೇಳದೆಯೇ ಹೊರಟುಬಿಟ್ಟೆಯಲ್ಲ! ಬಂದವನು ಹಾಗೆಯೇ ಹಿಂದಿರುಗಿದರೆ ಹೇಗೆ? ಏನು ಕಾರಣ ಬಂದಿದ್ದಿ?" ಎಂದು ದನಿ ಸೇರಿಸಿದೆ. ಸುಂದರೇಶ "ಏನಿಲ್ಲ, ನಿಮ್ಮ ಮನೆಗೇ ಬಂದೆ. ಪ್ರಿನ್ಸಿಪಾಲರ ಮನೆಯಲ್ಲಿ ನೀನಿದ್ದೆ

ಯೆಂದು ಗೊತ್ತಾದ ಮೇಲೆ ಆ ಹುಡುಗನ ವಿಚಾರ ಏನು ಎಂದು ಕೇಳೋಣ ಎನಿಸಿತು ಬಂದೆ, ಅಷ್ಟೆ" ಎಂದ. ಅದಕ್ಕೆ ನಾನು—

"ಪ್ರಿನ್ಸಿಪಾಲರು ಈ ವಿಚಾರ ಏನೂ ಹೇಳಲಿಲ್ಲ. ನನಗೂ ಆ ಕೆಲಸಕ್ಕೂ ಏನೂ ಸಂಬಂಧವಿಲ್ಲವಲ್ಲ? ಅದು ಕೆಮಿಸ್ಟ್ರಿ ವಿಭಾಗದ ಕೆಲಸ. ನನ್ನ ಮುಂದೆ ಏನು ಹೇಳುತ್ತಾರೆ?" ಎಂದು ಸುಳ್ಳೇ ಆಡಿದೆ. ಸುಂದರೇಶನಿಗೆ ನಂಬಿಕೆ ಯಾಯಿತೋ ಇಲ್ಲವೋ, ಹೊರಟುಹೋದ. ಇವನಿಗೇಕೆ ಆ ಹುಡುಗನ ಮೇಲೆ ಅಷ್ಟು ಆಸಕ್ತಿ ಎಂದು ನಾನು ಅಂದುಕೊಳ್ಳದೆ ಇರಲಿಲ್ಲ. ಆದರೆ ಸುಂದರೇಶನ ಆಸಕ್ತಿ ಅಚಿಂತ್ಯವಾದುದು, ಅವ್ಯಾಜವಾದುದು ಎಂದು ಎಲ್ಲರಿಗೂ ತಿಳಿದಿದೆ ಯಲ್ಲ. ದೇವರ ಅನುಕಂಪದಂತೆ ಇವನ ಆಸಕ್ತಿ.

೭

ಅಂತೂ ಆ ರಾತ್ರಿಯೆಲ್ಲ ನನಗೆ ನಿದ್ದೆ ಬರಲಿಲ್ಲ. ಯಾವನೋ ಎಲ್ಲಿಂದಲೋ ಬಂದ ಹುಡುಗನ ಗೀಳು ನನ್ನ ಮನಸ್ಸನ್ನೆಲ್ಲ ಒಮ್ಮುಖವಾಗಿ ಸೆಳೆ ದಿದ್ದಿತು. ಬೆಳಿಗ್ಗೆ ಕಾಲೇಜಿಗೆ ಹೋದೊಡನೆ ಪ್ರಿನ್ಸಿಪಾಲರು ಕೇಳಿಯೇ ಕೇಳು ತ್ತಾರೆ; ಏನು ಹೇಳುವುದು? ಪದ್ಮನಾಭಶೆಟ್ಟಿಯ ವಿಚಾರದಲ್ಲೇನೋ ನನಗಿದ್ದ ಸಹಾನುಭೂತಿ ನಿಸ್ಸಂದೇಹವಾದುದು; ಹುಡುಗನನ್ನು ನಾನು ಮೆಚ್ಚಿ ಕೊಂಡಿದ್ದೆ. ಅವನಿಗೆ ಕೆಲಸವಾಗುವುದೊಂದೇ ವಿಚಾರವಾಗಿದ್ದಿದ್ದರೆ ಯೋಚನೆ ಮಾಡಬೇಕಾದ ಅಗತ್ಯವೇ ಇರುತ್ತಿರಲಿಲ್ಲ. ಆದರೆ ಪ್ರಿನ್ಸಿಪಾಲರ ಅಸಮಾ ಧಾನದ ಮುಂದೆ ನನ್ನ ಸಹಾನುಭೂತಿಯನ್ನು ಸಮನ್ವಯ ಮಾಡುವುದು ಹೇಗೆ? ಪದ್ಮನಾಭನನ್ನು ಕೆಲಸಕ್ಕೆ ತೆಗೆದುಕೊಳ್ಳುವುದು ಅವರಿಗೆ ಇಷ್ಟವಿಲ್ಲ. ಅಥವಾ ಇಷ್ಟವಿಲ್ಲವೆಂದು ಖಂಡಿತ ಹೇಳುವುದೂ ಆಗದು. ಒಳಗಿನ ಇಷ್ಟ ಮೇಲೆ ಅನಿಷ್ಟದಂತೆ ಕೆಲವೊಮ್ಮೆ ಕಾಣಿಸಿಕೊಳ್ಳುವುದೂ ಉಂಟಷ್ಟೆ. ಸಾಮಾನ್ಯ ವಾಗಿ ಅಭ್ಯರ್ಥಿಗಳನ್ನು ಆಯ್ಕೆಮಾಡುವಾಗ ಅಂತಃಕರಣದ ಪ್ರಶ್ನೆ ಬರುವುದಿಲ್ಲ. ಅಂಕಗಳು, ಅನುಭವ, ವ್ಯಕ್ತಿತ್ವ, ಗುಣ ಮುಂತಾದವುಗಳನ್ನು ಪರಿಗಣಿಸು ತ್ತೇವೆ. ಆದರೆ ಇಲ್ಲಿ ಪ್ರಿನ್ಸಿಪಾಲರು ಇವುಗಳೊಂದನ್ನೂ ಪರಿಗಣಿಸದೆ ತಮ್ಮ ಪೇಚಾಟವನ್ನೇ ಪ್ರಧಾನವಾಗಿ ಪರಿಗಣಿಸುತ್ತಿದ್ದಾರಲ್ಲವೆ? ವಿಶ್ವನಾಥರಾಯರು

ಒಪ್ಪಿಕೊಂಡರೆಂಬ ಒಂದೇ ಕಾರಣವನ್ನು ಬಿಟ್ಟರೆ ಈ ಹುಡುಗನ ವಿರುದ್ಧವಾಗಿ ನಿರ್ಧರಿಸಲು ಅವರಿಗೆ ಯಾವ ಕಾರಣವೂ ಇಲ್ಲ. ಈಗ ನಾನು ಅವರಿಗೆ ಹೇಳಬೇಕಾದುದು ಏನು? ನನಗಂತೂ ಇದು ಬಗೆಹರಿಯಲಿಲ್ಲ.

ಇದೇ ಯೋಚನೆಯಲ್ಲಿಯೇ ದಿನದ ಕೆಲಸಗಳನ್ನೆಲ್ಲ ಮುಗಿಸಿ ಊಟವನ್ನೂ ತೀರಿಸಿ ಕಾಲೇಜಿಗೆ ಹೊರಟೆ. ಮನೆಯಿಂದ ಹೊರಬಿದ್ದು ನಾಲ್ಕು ಹೆಜ್ಜೆ ಇಡುವಷ್ಟರಲ್ಲಿಯೇ ಪದ್ಮನಾಭಶೆಟ್ಟಿ ಮುಂದೆ ಬರುತ್ತಿದ್ದುದು ಕಾಣಿಸಿತು. ನನಗೆ ಇನ್ನಷ್ಟು ಜಂಜಾಟಕ್ಕೆ ಕಾರಣವಾಯಿತು. ಇವನೂ ಕೆಲಸಕ್ಕೆ ಶಿಫಾರಸು ಮಾಡಿ ಎಂದು ನನ್ನನ್ನು ಕೇಳಿದರೆ ಏನುಮಾಡುವುದು? ಇವನು ನನ್ನಲ್ಲಿಗೆ ಬಂದಿದ್ದುದನ್ನು ಸುಂದರೇಶ ಪ್ರಿನ್ಸಿಪಾಲರಿಗೆ ಹೇಳದೆ ಇರುತ್ತಾನೆಯೆ? ನಾನಂತೂ ಅವರಿಗೆ ಈ ವಿಚಾರ ಹೇಳಿರಲಿಲ್ಲ. ಅವರಿಗೆ ತಿಳಿದರೆ ಏನಂದುಕೊಂಡಾರು? ನಾನು ಅವರಿಗೆ ಹೇಳಬೇಕಾದುದು ಏನು? ಹೀಗೆ ಏನೇನೋ ಮನಸ್ಸಿನಲ್ಲಿ ಚಿಂತನೆಗಳು ಏಳುತ್ತಿರುವಷ್ಟರಲ್ಲಿಯೇ ಪದ್ಮನಾಭ ಸಮೀಪಿಸಿದ.

"ನಮಸ್ಕಾರ, ಸ್ವಾಮಿ. ನೆನ್ನೆ ಇಂಟರ್‌ವ್ಯೂ ಮುಗಿಯಿತು. ಈ ವಾರದೊಳಗೆ ಫಲಿತಾಂಶವನ್ನು ನನಗೆ ತಿಳಿಸುತ್ತೇವೆ ಎಂದು ಪ್ರಿನ್ಸಿಪಾಲರು ಹೇಳಿದರು. ನಾನು ಈ ಸಂಜೆ ಮಂಗಳೂರಿಗೆ ಹಿಂತಿರುಗುತ್ತಿದ್ದೇನೆ. ಹೊರಡುವ ಮೊದಲು ನಿಮ್ಮನ್ನೊಮ್ಮೆ ಕಂಡು ನನ್ನ ನಮಸ್ಕಾರಗಳನ್ನು ತಿಳಿಸಿ ಹೋಗೋಣವೆಂದು ಬಂದೆ."

"ಒಳ್ಳೆಯದು, ಇಂಟರ್‌ವ್ಯೂನಲ್ಲಿ ಚೆನ್ನಾಗಿ ಮಾಡಿದಿರಿ ತಾನೆ? ಕೆಲಸ ಸಿಗುವ ಸಂಭವ ಉಂಟಷ್ಟೆ?"

"ನನ್ನ ಮಟ್ಟಿಗೆ ಹೇಳುವುದಾದರೆ ಚೆನ್ನಾಗಿ ಮಾಡಿದ್ದೇನೆ. ಆದರೆ ಕೆಲಸ ಸಿಗುವುದೂ ಬಿಡುವುದೂ ನನ್ನ ಕೈಯಲ್ಲಿದೆಯೆ? ಅದು ದೈವಾಧೀನ."

"ದೈವಾಧೀನ ಎಂದಿರಾ? ನಮ್ಮ ಕಡೆ ದೈವಾಧೀನರಾದರು ಎಂದರೆ ಸತ್ತುಹೋದರು ಎಂದರ್ಥ! ಎಂದರೆ, ಅದೊಂದೇ ದೈವಕ್ಕೆ ಅಧೀನವಾಗಿರುವುದು; ಉಳಿದುದೆಲ್ಲ ಪುರುಷಾಧೀನವೇ. ನಿಮ್ಮ ಕೆಲಸ ಪ್ರಿನ್ಸಿಪಾಲಾಧೀನ ಎನ್ನಿ! ಇರಲಿ ಇರಲಿ, ಹೋಗಿಬನ್ನಿ. ಕೆಲಸ ಸಿಗುವುದೆಂದೇ ಭಾವಿಸೋಣ, ಏನು ತಪ್ಪು?"

"ಕೆಲಸಕ್ಕೆ ನಾನು ಅಷ್ಟು ಕಾತರನಾಗಿಲ್ಲ ಸ್ವಾಮಿ"

"ಅದು ಏಕೆ ಪದ್ಮನಾಭಶೆಟ್ಟರೆ? ಬೆಂಗಳೂರು ವಾಸ ಕಷ್ಟವೆಂದೇ?" ಅಥವಾ ಕಾಲೇಜು ನಿಮಗೆ ಹಿಡಿಸಲಿಲ್ಲವೇ? ಅಥವಾ ಊರು ಬಿಟ್ಟು ಬರುವುದು ಕಷ್ಟವೇ?"

"ಮೂರೂ ನಿಜ ಸ್ವಾಮಿ. ನಮ್ಮ ತಾಯಿಗೆ ಬೆಂಗಳೂರೆಂದರೆ ಇಷ್ಟವಿಲ್ಲ. ಇಲ್ಲಿ ಜೀವನ ತುಂಬ ಕಷ್ಟವೆಂದು ಹೇಳುತ್ತಿರುತ್ತಾರೆ. ಸದ್ಯಕ್ಕೆ ಊರು ಬಿಟ್ಟು ಬರುವುದೂ ಕಷ್ಟವೇ. ಅಲ್ಲಿ ನೆರೆಹೊರೆ ಹೇಗೋ ಹೊಂದಿಕೊಂಡು ಬಿಟ್ಟಿದ್ದಾರೆ. ನಮಗೆ ಯಾವ ಬಗೆಯ ಆತಂಕವೂ ಇಲ್ಲ. ವಕೀಲರು ಎಂದೆನಲ್ಲ, ಅವರು ನಮಗೆ ತುಂಬ ಉಪಕಾರಿಗಳಾಗಿದ್ದಾರೆ. ಕಾಲೇಜು ಕೂಡ ನನಗೆ ಅಷ್ಟಾಗಿ ಹಿಡಿಸಲಿಲ್ಲ ಕ್ಷಮಿಸಿರಿ, ಹಾಗೆ ಹೇಳುತ್ತೇನೆಂದು ಕೋಪಗೊಳ್ಳಬಾರದು. ಇಂಟರ್‌ವ್ಯೂ ಭಾನುವಾರ ಇದ್ದುದರಿಂದ ಕಾಲೇಜಿನ ಕೆಲಸವನ್ನಾಗಲೀ ಕಟ್ಟಡವನ್ನಾಗಲೀ ನೋಡ:ವ ಅವಕಾಶವಾಗಲಿಲ್ಲ. ನಾನು ನೋಡಿದವರು ಇಬ್ಬರೇ–ಕೆಮಿಸ್ಟ್ರಿ ಪ್ರೊಫೆಸರರು, ಪ್ರಿನ್ಸಿಪಾಲರು. ಇಬ್ಬರ ಬಳಿಯೂ ಕೆಲಸಮಾಡುವ ಉತ್ಸಾಹ ನನಗುಂಟಾಗಲಿಲ್ಲ. ಒಂದು ವೇಳೆ ಕೆಲಸ ಸಿಕ್ಕರೂ ನಾನು ಬಂದೇ ಬರುತ್ತೇನೆಂಬ ನಂಬಿಕೆಯಿಲ್ಲ."

ಪ್ರಿನ್ಸಿಪಾಲರ ಪ್ರತಿಕ್ರಿಯೆ, ಹುಡುಗನ ಪ್ರತಿಕ್ರಿಯೆ ಎರಡೂ ಹೀಗೇಕೆ ಸಂದಿಗ್ಧವಾದುವು? ಇವನಿಗೆ ಪ್ರಿನ್ಸಿಪಾಲರೆಂದರೆ ಉತ್ಸಾಹವಿಲ್ಲ. ಅವರಿಗೆ ಇವನೆಂದರೆ ಅಳುಕು? ಈ ಮಧ್ಯೆ ನಾನು ಮಾಡುವುದೇನು? ಇವನ ತಂಗಿಯನ್ನು ಮಂಗಳೂರಿಗೆ ಹಿಂದಿರುಗಿಸಿ ಬಿಟ್ಟರೆ ತಂಟೆ ತಪ್ಪಿತು. ಈ ಹುಡುಗನ ಹಂಬಲವೂ ಅದೇ. ನನ್ನ ಬಳಿಗೆ ಅವನು ಬಂದುದೂ ಇದೇ ಕಾರಣ. ಇಂದು ಆಕೆಯನ್ನು ಕಂಡು ಮಾತನಾಡೋಣ ಎಂದು ನಿರ್ಧರಿಸಿಕೊಂಡೆ. ಪ್ರಿನ್ಸಿಪಾಲರಿಗೆ ಪದ್ಮನಾಭಶೆಟ್ಟಿಯನ್ನು ಕೆಲಸಕ್ಕೆ ತೆಗೆದುಕೊಳ್ಳುವುದು ಬೇಡ ಎಂದು ಹೇಳಿಬಿಡುವುದು ಎಂದುಕೊಂಡೆ. ಹೇಗೂ ಹುಡುಗನಿಗೂ ಇಷ್ಟವಿಲ್ಲವಲ್ಲ. ಪ್ರಿನ್ಸಿಪಾಲರ ಪೇಚಾಟವೂ ತಪ್ಪಿತು. ಇನ್ನು ವಿಶ್ವನಾಥರಾಯರ ಗದ್ದಲ! ಅದಕ್ಕೆ ಏನಾದರೂ ಮಾಡಿದರಾಯಿತು.

"ನಿಮ್ಮ ಇಷ್ಟ. ಬೇಕೆಂದರೆ ಪ್ರಿನ್ಸಿಪಾಲರಿಗೆ ನಾನೂ ಒಂದು ಮಾತು ಹೇಳೋಣ ಎಂದಿದ್ದೆ. ನಿಮ್ಮ ತಂಗಿಯ ವಿಚಾರ ಏನು?"

"ಅದನ್ನೆ ನಿಮಗೆ ನೆನಪು ಮಾಡೋಣವೆಂದು ಬಂದೆ ಸ್ವಾಮಿ. ತಮಗೆ

ಅನುಚಿತವೆನಿಸದಿದ್ದರೆ ಅವಳಿಗೆ ಒಂದು ಮಾತು ಹೇಳಿದರೆ ಒಳ್ಳೆಯದು. ಅವಳು ಮಂಗಳೂರಿಗೆ ಹಿಂದಕ್ಕೆ ಬಂದರೆ ನಮ್ಮ ತಾಯಿಯ ಮನಸ್ಸಿಗೆ ನೆಮ್ಮದಿ ಯಾದೀತು. ನಮ್ಮ ವಕೀಲರೂ ಅದೇ ಹೇಳುತ್ತಾರೆ."

ನನಗೆ ಈ ಮಾತು ಸೋಜಿಗವೆನಿಸಿತು. ಇವರು ಮಂಗಳೂರಿನಲ್ಲೇ ಇರ ಬೇಕೆಂದು ಆ ವಕೀಲರ ಆಗ್ರಹವೇಕೆ? ಅವರ ಶೀಲ ಎಂಥದೋ ಯಾರು ಬಲ್ಲರು? ಯಾವ ಹುತ್ತದಲ್ಲಿ ಯಾವ ಹಾವೋ ಅದರ ಗೊಡವೆ ನನಗೇಕೆ ಎನ್ನುವ ಬೇಸರವೂ ಆಯಿತು. ಊರಿನ ಚಿಂತೆಯನ್ನು ಮೇಲೇರಿಸಿಕೊಂಡು ನಾನೇನು ಮಾಡಲಿ? ಈ ಹುಡುಗನ ತಂಗಿಗೆ ಒಂದು ಮಾತು ಹೇಳಿಬಿಟ್ಟರೆ ನನ್ನ ಭಾರ ಕಳೆಯಿತು. ಹೀಗೆಂದು ನಿಶ್ಚಯ ಮಾಡಿಕೊಂಡು, "ಆಗಲಿ ಶೆಟ್ಟರೆ, ನಾನು ಇವತ್ತೇ ನಿಮ್ಮ ತಂಗಿಗೆ ನಿಮ್ಮ ಅಭಿಪ್ರಾಯವನ್ನು ತಿಳಿಸುತ್ತೇನೆ" ಎಂದೆ. ಅದಕ್ಕೆ ಆ ಹುಡುಗ, "ಅಯ್ಯೋ ಸ್ವಾಮಿ, ನಮ್ಮ ಅಭಿಪ್ರಾಯ ಅವ ಳಿಗೆ ತಿಳಿಯದೆ ಇಲ್ಲ. ನೀವು ಒತ್ತಾಯ ಮಾಡಬೇಕು. ನಿಮ್ಮನ್ನೇ ಅವಲಂಬಿ ಸಿದ ನಿರ್ಧಾರ ಇದು" ಎನ್ನಲು ನನಗೆ ಸ್ವಲ್ಪ ಸಿಟ್ಟು ಬಂದಿತು.

"ನಾನು ಒತ್ತಾಯ ಮಾಡುವುದು ಹೇಗೆ ಹೇಳಿ? ಅವಳೊಂದಿಗೆ ಮಾತ ನಾಡಿ ನಿಮ್ಮ ತಾಯಿಯ ಮನೋಗತದಂತೆ ನಡೆದುಕೊಳ್ಳಬೇಕೆಂದು ಹೇಳು ತ್ತೇನೆ. ಇಷ್ಟರ ಮೇಲೆ, ಅವಳು ಇಲ್ಲಿಯೇ ಇರಬೇಕೆಂದು ಬಲವಂತ ಮಾಡಿ ದರೆ ನಾನೇನು ಮಾಡಲಿ? ಬೇರೆಯವರ ಗುಡಾರದೊಳಗೆ ನಾನು ಹೇಗೆ ತಲೆ ಹಾಕುವುದು?"

"ಹಾಗಲ್ಲ ಸ್ವಾಮಿ, ಸಿಟ್ಟಾಗಬೇಡಿ. ಮಾತಿಗೆ ಮಾತು ಬಂದು ನೀವು ಪ್ರಾಸಂಗಿಕವಾಗಿ ಹೇಳಿದರಾಯಿತು. ನನ್ನ ತಾಯಿಯ ಬೇನೆ ಮಾನಸಿಕವಾದರೆ ಅದನ್ನು ನೀವು ಅರ್ಥ ಮಾಡಬಲ್ಲಿರಿ, ಅದರ ಸಾಧಕ ಬಾಧಕಗಳನ್ನು ತಂಗಿ ಗಷ್ಟು ತಿಳಿಯಹೇಳಿದರೆ ಅದರಿಂದ ಉಪಕಾರವಾದೀತು."

"ನಾನು ಹೇಳುತ್ತೇನೆ ಎಂದೆನಲ್ಲ! ಸಾಧ್ಯವಿದ್ದರೆ ನಿಮ್ಮ ತಾಯಿ ಯನ್ನೊಮ್ಮೆ ಕರೆದುಕೊಂಡು ಬನ್ನಿ, ಪರೀಕ್ಷೆ ಮಾಡುವಾ. ಬೇನೆಯು ಮಾನ ಸಿಕವೋ ಹೇಗೆ ಎಂದು ತಿಳಿಯಬೇಕಲ್ಲವೇ?"

"ಆಗಲಿ ಸ್ವಾಮಿ, ಇಷ್ಟರಲ್ಲೇ ಕರೆದುಕೊಂಡುಬರಲು ಯತ್ನಿಸುತ್ತೇನೆ. ಊರಿಗೆ ಹೋದೊಡನೆ ತಮಗೆ ಪತ್ರ ಬರೆಯುವೆ. ಇನ್ನು ಅಪ್ಪಣೆಯಾದರೆ...."

"ಹೋಗಿ ಬನ್ನಿ, ಹೋಗಿ ಬನ್ನಿ, ಎಲ್ಲ ಒಳ್ಳೆಯದೇ ಆಗುತ್ತದೆ. ಚಿಂತೆ ಮಾಡಬೇಡಿ."

ಪದ್ಮನಾಭಶೆಟ್ಟಿ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಹೆಂಡತಿಗೆ ತನ್ನ ನಮಸ್ಕಾರಗಳನ್ನು ತಿಳಿಸಿ ಹೊರಟುಹೋದ. ಈ ಶಿರೋಭಾರವನ್ನು ನಾನೇಕೆ ಹೊರಲಿ; ನನಗೆ ಅದರ ಅಗತ್ಯವಿಲ್ಲ; ನನ್ನಿಂದ ಅಷ್ಟಾಗಿ ನೆರವು ಇವರಿಗೆ ದೊರೆಯುವ ಸಂಭವವೂ ಇಲ್ಲ; ಪ್ರಿನ್ಸಿಪಾಲರಿಗೂ ಅಷ್ಟೆ, ಅವರೇ ಹೇಳಿ ಕಳುಹಿಸಿದರೆ ಹೋಗಿ ಹುಡುಗ ಹೇಳಿದ್ದನ್ನು ಹೇಳಿಬಿಡುತ್ತೇನೆ. ಮುಂದಿನದು ಅವರ ಪಾಡು–ಎಂದು ಮನಸ್ಸಿನಲ್ಲೇ ನಿರ್ಧರಿಸಿದೆ. ಕಾಲೇಜಿಗೆ ಹೋಗಿ ನೇರವಾಗಿ ನನ್ನ ಕೋಣೆಯನ್ನು ಹೊಕ್ಕು ಕುಳಿತುಕೊಂಡೆ. ನೋಡಲು ಬಂದ ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತ ಅರ್ಧ ಗಂಟೆ ಕಳೆದೆ. ಅನಂತರ ಒಂದು ಗಂಟೆಯವರೆಗೆ ನಿರ್ದಿಷ್ಟ ಉಪನ್ಯಾಸವೂ ನಡೆಯಿತು. ಆದರೂ ಪ್ರಿನ್ಸಿಪಾಲರಿಂದ ಕರೆ ಬರಲಿಲ್ಲ. ಮೊದಲು ಉದಾಸೀನನಾಗಿದ್ದ ನನಗೆ ಈಗ ಒಂದು ಬಗೆಯ ಉತ್ಸುಕತೆ ಮೂಡಿತು. ನೆನ್ನೆಯೆಲ್ಲ ಅಷ್ಟು ಆತಂಕದಲ್ಲಿದ್ದವರು ಇಂದೇಕೆ ತಣ್ಣಗಾದರು? ಹುಡುಗನ ನೇಮಕದ ವಿಚಾರ ಇವತ್ತು ಬೆಳಿಗ್ಗೆ ನಿರ್ಧರಿಸಬೇಕೆಂದು ಹೇಳಿದ್ದರಲ್ಲವೆ? ಮರೆತರೋ ಅಥವಾ ನಿರ್ಧರಿಸಿಯಾಯಿತೋ? ಸುಮ್ಮನಿರುವ ಸ್ವಭಾವವಲ್ಲವಾದುದರಿಂದ ನಾನೇ ಪ್ರಿನ್ಸಿಪಾಲರ ಕೋಣೆಗೆ ಹೋದೆ.

"ಬನ್ನಿ, ಬನ್ನಿ" ಎಂದು ಪ್ರಿನ್ಸಿಪಾಲರು ಹಸನ್ಮುಖದಿಂದ ಸ್ವಾಗತಿಸಿದರು. ನಾನು ಅವರ ಎದುರು ಕುಳಿತು "ಏನಾಯಿತು ಸಾರ್, ಸಮಸ್ಯೆ ಹೇಗೆ ಬಗೆಹರಿಯಿತು?" ಎಂದು ಕೇಳಲು ಅವರು "ಯಾವ ಸಮಸ್ಯೆ?" ಎಂದು ನನ್ನನ್ನೇ ಕೇಳಿದರು. ನನಗೆ ಆಶ್ಚರ್ಯವಾಯಿತು. ನೆನ್ನೆಯೆಲ್ಲ ಅಷ್ಟೊಂದು ಬವಣೆಪಟ್ಟರು, ನನ್ನನ್ನೂ ಬವಣೆಪಡಿಸಿದರು. ಈ ಹೊತ್ತು ಅದರ ನೆನಪೇ ಇಲ್ಲ ಇವರಿಗೆ! ನಾನು "ಅದೇ ಆ ಹುಡುಗನನ್ನು ಕೆಲಸಕ್ಕೆ ತೆಗೆದುಕೊಳ್ಳುವ ಸಮಸ್ಯೆ" ಎಂದಾಗ ಅವರು, "ಓ, ನಿಮ್ಮ ಮುಂದೆ ಅದನ್ನು ಪ್ರಸ್ತಾಪಿಸಿದ್ದೆ ಅಲ್ಲವೆ? ಅವನನ್ನು ಕೆಲಸಕ್ಕೆ ತೆಗೆದುಕೊಳ್ಳುವುದೆಂದು ಇತ್ಯರ್ಥವಾಯಿತು, ಅವನಿಗೆ ಕಾಗದವೂ ಹೋಗಿದೆ. ನಿಮಗೆ ಸುಮ್ಮನೆ ತೊಂದರೆ ಕೊಟ್ಟೆ. ಆದರೆ ನೀವು ಸೂಚಿಸುವುದೂ ಅದೇ ತಾನೆ? ನಿಮ್ಮ ಅಭಿಪ್ರಾಯ ಏನು? ಎಂದು ಕೇಳಿದರು. ನಾನು

"ಅದೇ ಹೇಳಲೆಂದೇ ಬಂದೆ" ಎಂದು ಹೇಳಿ ಅಲ್ಲಿಂದ ಹೊರಟೆ.

ಆದರೆ ಅವರ ವರ್ತನೆಯಿಂದ ನನ್ನ ಮನಸ್ಸು ಖತಿಗೊಂಡಿದ್ದಿತು. ಎಲ್ಲಿಯೋ ನಿಶ್ಚಿಂತೆಯಿಂದ ಹೋಗುತ್ತಿದ್ದವನನ್ನು ಸೆಳೆದುಕೊಂಡು ಹೋಗಿ ಚಿಂತೆಯನ್ನು ತಲೆಗೆ ತುಂಬಿ ಮನೆಗೆ ಕಳುಹಿಸಿದ ಪುಣ್ಯಾತ್ಮ ಎಲ್ಲವನ್ನೂ ಮರೆತನಲ್ಲ! ನಮ್ಮ ದೇಶದಲ್ಲಿ ಬಳಕೆಯಲ್ಲಿರುವ ದಾನಗಳಲ್ಲಿ ಚಿಂತಾ ದಾನವನ್ನು ನಾನು ಈವರೆವಿಗೆ ಕೇಳಿರಲಿಲ್ಲ, ಅಥವಾ ಶ್ರಮದಾನದ ಒಂದು ರೀತಿಯೋ ಏನೋ ಇದು? ತಾವು ಪಡಬೇಕಾದ ಶ್ರಮವನ್ನು ಬೇರೆಯವರಿಗೆ ಕೊಟ್ಟರೆ ಅದೇ ಶ್ರಮದಾನವಲ್ಲವೇ? ಅಂತೂ ನನ್ನ ಮೇಲೆ, ನನ್ನ ಸೈಕಾಲಜಿಯ ಮೇಲೆ ಈತನ ನಿರ್ಧಾರ ನಿಂತಿದೆ ಎಂದು ನಾನು ಭಾವಿಸಿದುದು ತಪ್ಪೇ ಆಯಿತಲ್ಲ! ನನ್ನ ಮುಂದೆ ಕಳೆದ ರಾತ್ರಿ ಅಷ್ಟೊಂದು ಒದ್ದಾಡಿ, ನನ್ನನ್ನೂ ಪೇಚಾಟಕ್ಕೆ ಸಿಕ್ಕಿಸಿ, ನನ್ನ ಮೇಲೆ ಒಂದು ಭಾರವನ್ನೂ ಹೊರಿಸಿ ಈಗ ಅವೆಲ್ಲವನ್ನೂ ಮರೆತು ನನ್ನನ್ನು ಕಾಣುವ ಮೊದಲೇ ನಿರ್ಧಾರಕ್ಕೆ ಬಂದು, ಅದನ್ನು ನನಗೆ ತಿಳಿಸದೆಯೂ ಇರುವುದು ಎಂಥ ಸೌಜನ್ಯ? ಇವರ ವಿಷಯದಲ್ಲಿ ನನಗಿದ್ದ ಸದಭಿಪ್ರಾಯ ಈಗ ಸ್ವಲ್ಪ ಮುಕ್ಕಾಯಿತು.

ಈ ಘಾಸಿಯಿಂದ ನಾನು ಬೇಗನೆ ಗುಣವಾದೆ; ನನ್ನ ಮನಸ್ಸನ್ನು ಆವರಿಸಿದ ಇನ್ನೊಂದು ಜಿಜ್ಞಾಸೆ ಇವರು ಈ ನಿರ್ಧಾರಕ್ಕೆ ಹೇಗೆ ಬಂದರು ಎನ್ನುವುದು. ಬೆಳಕು ಹರಿಯುವುದರೊಳಗೆ ಸ್ವಪ್ನವಾಯಿತೋ, ವಿಶ್ವನಾಥರಾಯರ ದಿಗಿಲು ಹೆಚ್ಚಾಯಿತೋ, ಅಥವಾ ಹುಡುಗ ಯೋಗ್ಯನೇ ಎಂಬುದು ಖಚಿತವಾಗಿ ತಮ್ಮ ವೈಯಕ್ತಿಕ ಪ್ರತಿಕ್ರಿಯೆಗಳಿಗೆ ಪ್ರಾಧಾನ್ಯ ಕೊಡಬಾರದೆಂದು ನಿರ್ಧರಿಸಿದರೋ? ನನಗೆ ಇದನ್ನು ತಿಳಿಯುವ ಕುತೂಹಲ ಹೆಚ್ಚಾಯಿತು. ಈ ಕುತೂಹಲದಲ್ಲಿ ಅವರ ಮೇಲೆ ಒದಗಿದ್ದ ಮುನಿಸು ಮರೆಯಾಯಿತು. ಈ ನಿರ್ಧಾರಕ್ಕೆ ಬಂದು ನಗುನಗುತ್ತ ಇರಬೇಕಾದರೆ ಏನೋ ಮಹತ್ವದ ಪ್ರಭಾವ ಹಿನ್ನೆಲೆಯಲ್ಲಿರಬೇಕು ಎನಿಸಿತು.

ಆದರೆ ಆ ವೇಳೆಗಾಗಲೇ ಅವರ ಕೋಣೆಯಿಂದ ಹೊರ ಬಂದಿದ್ದೆ ಮತ್ತೆ ಇದೇ ವಿಷಯವನ್ನೆತ್ತಿಕೊಂಡು ಒಳಹೋಗುವುದಕ್ಕೆ ಮನಸ್ಸು ಬರಲಿಲ್ಲ. ಇರಲಿ, ನಡೆದ ವಿಚಾರ ತಿಳಿಯದೆ ಇರುತ್ತದೆಯೇ ಎಂದುಕೊಂಡು ಸುಮ್ಮನಾದೆ. ದಿನದ ಕೆಲಸವೆಲ್ಲ ಮುಗಿದ ಮೇಲೆ ಸಂಜೆಯ ಸುಮಾರಿಗೆ ಮನೆಗೆ ಬಂದೆ. ಬಂದ

ಸ್ವಲ್ಪ ಹೊತ್ತಾದ ಮೇಲೆ ನೆನೆದವರ ಮನದಂತೆ, ಸುಂದರೇಶ ದಯಮಾಡಿದ. ಅವನನ್ನು ಕಂಡೊಡನೆ ಆದರದಿಂದ ಕರೆದು ಕೂಡಿಸಿ, "ಅಯ್ಯಾ ಮೇಧಾವಿಯೇ, ಬಹುಕಾಲದ ತಪಸ್ಸಿಗೆ ದೊರೆತ ಫಲದಂತೆ ಬಂದಿದ್ದೀಯೆ. ಈಗ ನನ್ನ ಮನೋರಥವನ್ನು ಪೂರೈಸು" ಎಂದೆ. ಕೈಗಳನ್ನೂ ಮುಗಿದಿದ್ದೆ.

ನನ್ನ ಹೆಂಡತಿಗೆ ಆಶ್ಚರ್ಯವಾಯಿತು. ಇಷ್ಟು ಹೊತ್ತೂ ಹುಷಾರಾಗಿಯೇ ಇದ್ದರಲ್ಲ ಎಂದು ನನ್ನನ್ನೇ ದಿಟ್ಟಿಸಿ ನೋಡಹತ್ತಿದಳು. ಅವಳ ಸಮಾಧಾನಕ್ಕೆಂದು ನಾನು ನಕ್ಕು "ಹೆದರಬೇಡ, ಸುಂದರೇಶನನ್ನು ಕಂಡರೆ ತಮಾಷೆ ಮಾಡೋಣ ಎನಿಸುತ್ತದೆ ಅಷ್ಟೆ" ಎಂದು ಹೇಳಿದೆ. ಆದರೆ ಆಕೆ ಅಷ್ಟಕ್ಕೇ ಬಿಡಲಿಲ್ಲ. "ಏನು ನಿಮ್ಮ ಮನೋರಥ ?" ಎಂದು ಕೇಳಿದಳು. ನಾನು ಕಾಲೇಜಿನಲ್ಲಿ ಆ ಬೆಳಿಗ್ಗೆ ನಡೆದುದನ್ನು ಹೇಳದೆ ವಿಧಿಯಿರಲಿಲ್ಲ. ನನ್ನನ್ನು ಕೇಳದೆ ಪ್ರಿನ್ಸಿಪಾಲರು ನಿರ್ಧಾರಕ್ಕೆ ಬಂದುದನ್ನು ತುಂಬ ಸಂಕಟ ಪಟ್ಟುಕೊಂಡಂತೆ ವಿವರಿಸಿದೆ. ಆದರೆ ನನ್ನ ಸಂಕಟದ ಬೂಟಾಟಿಕೆಯಲ್ಲಿ ನನ್ನ ಸಹಧರ್ಮಿಣಿ ಭಾಗಿಯಾಗಲಿಲ್ಲ. ಆಕೆ ಮೂದಲಿಸುವಂತೆ "ನಾನು ಮೊದಲೇ ಹೇಳಲಿಲ್ಲವೆ ? ವಿಶ್ವನಾಥರಾಯರು ಹೇಳಿದುದನ್ನು ಒಪ್ಪದೇ ಇರುವಷ್ಟು ಧೈರ್ಯ ಇದೆಯೇ ನಿಮ್ಮ ಪ್ರಿನ್ಸಿಪಾಲರಿಗೆ? ನನಗೆ ಇದರಲ್ಲಿ ಸಂಶಯವೇ ಇರಲಿಲ್ಲ. ನೀವು ಏನೋ ರಾತ್ರಿಯೆಲ್ಲ ನಿದ್ದೆಗೆಟ್ಟು ಕಂಗಾಲಾದಿರಿ ಅಷ್ಟೆ!" ಎಂದು ಹೇಳಿ ಒಳಗೆ ಹೊರಟಳು.

ಆದರೆ ಇದನ್ನು ಕೇಳುತ್ತ ಕುಳಿತಿದ್ದ ಸುಂದರೇಶನಿಗೆ ನಾನು ಪ್ರಿನ್ಸಿಪಾಲರ ಮನೆಯಲ್ಲಿ ಹಿಂದಿನ ರಾತ್ರಿ ನಡೆದ ಜಿಜ್ಞಾಸೆಯನ್ನು ತಿಳಿಸಿರಲಿಲ್ಲ. ಹುಡುಗನ ಕೆಲಸದ ಪ್ರಸ್ತಾಪವೇ ಬರಲಿಲ್ಲವೆಂದೂ ಸುಳ್ಳಾಡಿದ್ದೆ. ಈಗ ಇಂಗ್ಲೀಷರು ಹೇಳುವಂತೆ, ಬೆಕ್ಕು ಚೀಲದಿಂದ ಹಾರಿತು. ಸುಂದರೇಶ ನಕ್ಕಾಗ ವಿಜಯದ ಧ್ವನಿಯಿದ್ದಿತೆಂದು ನನ್ನ ಭಾವನೆ. "ನೀನು ಹೇಳದಿದ್ದರೂ ನನಗೆ ತಿಳಿಯದೆ ಇರಲಿಲ್ಲ!" ಎಂದು ಅವನು ಎಂದಾಗಲಂತೂ ನನಗಾದ ಮುಖಭಂಗ ಹೇಳತೀರದು. ನನ್ನ ಪೇಚಾಟವನ್ನು ನಗುವಿನಿಂದ ಮುಚ್ಚಿ, ಸರಿಯಯ್ಯ ನಿನಗೆ ತಿಳಿಯದೆ ಯಾವುದು ತಾನೆ ನಡೆಯುತ್ತದೆ ಹೇಳು. ಅದಿರಲಿ, ಜಂಬುನಾಥಯ್ಯರು ಈ ಬೆಳಿಗ್ಗೆ ನಿರ್ಧಾರಕ್ಕೆ ಬಂದಿದ್ದರಲ್ಲ, ಅದು ಯಾರ ಒತ್ತಾಯದ ಮೇಲೆ ಹೇಳಬಲ್ಲೆಯಾ ?" ಎಂದು ನೇರವಾಗಿಯೇ ಕೇಳಿದೆ.

ಅವನು "ಯಾರ ಒತ್ತಾಯವೇನು ? ಅವರ ತಂಗಿಯದೇ" ಎಂದಾಗ ನಾನು ಅರಿಯದೆಯೇ ಕಣ್ಣುಗಳನ್ನು ಊರಗಲ ಅರಳಿಸಿದ್ದೆ. ಪ್ರಿನ್ಸಿಪಾಲರ ಕಾಲೇಜು ನಿರ್ಧಾರಗಳಲ್ಲಿ ತಂಗಿಯ ಪಾತ್ರ ಇದ್ದೀತೆಂದು ನಾನು ಭಾವಿಸಿರಲಿಲ್ಲ. ಅವರ ತಂಗಿಗೆ ಪದ್ಮನಾಭ ಶೆಟ್ಟಿಯಲ್ಲಿ ಏನು ಆಸಕ್ತಿ ? ಅಣ್ಣನಿಗೆ ಆದ ಅಳುಕು ಅವರಿಗೂ ತಿಳಿಯದೆ ಇರುತ್ತದೆಯೆ ? ಹಾಗಿದ್ದರೂ ಅವನನ್ನೇ ಕೆಲಸಕ್ಕೆ ತೆಗೆದು ಕೊಳ್ಳಲು ಒತ್ತಾಯವೇಕೆ ಮಾಡುತ್ತಾರೆ ? ಅಥವಾ ಒತ್ತಾಯ ಮಾಡ ಬೇಕಾದ ಅಗತ್ಯವಾದರೂ ಏನು ? ಬಹುಶಃ ಪದ್ಮನಾಭ ಶೆಟ್ಟಿಯೇ ಈ ತಂಗಿ ಯನ್ನು ಕಂಡು ಮಾತನಾಡಿರಬಹುದೇ ? ಇರಲಾರದು, ಏಕೆಂದರೆ ಆ ಹುಡುಗ ಹೀಗೆ ಸೂತ್ರಗಳನ್ನು ಎಳೆದಾಡುವ ಸ್ವಭಾವದವನಲ್ಲ ಎಂದು ನನ್ನ ಎಣಿಕೆ. ಅಷ್ಟಲ್ಲದೆ, ಈ ಕೆಲಸವೆಂದರೆ ಅವನಿಗೆ ಅಷ್ಟು ಮಮತೆಯೂ ಇರದು. ಎದುರಿಗೆ ಸರ್ವಜ್ಞಮೂರ್ತಿಯೇ ಇರುವಾಗ ನಾನೇಕೆ ಚಿಂತಿಸಿ ತಲೆ ಕೆಡಿಸಿಕೊಳ್ಳಬೇಕು ? ಸುಂದರೇಶನನ್ನೇ ಕೇಳಿದೆ—"ಸ್ವಾರಸ್ಯವಾಗಿದೆಯಲ್ಲ ! ಪ್ರಿನ್ಸಿಪಾಲರ ತಂಗಿಗೆ ಈ ಹುಡುಗನಲ್ಲೇನು ಅಂಥ ಆಸಕ್ತಿ ?" ಎಲ್ಲ ಜ್ಞಾನದ ಏಕೈಕ ನಿಧಿಯಂತೆ ಸುಂದರೇಶ ನಿರ್ವಿಣ್ಣನಾಗಿ "ಅವರಿಗೆ ಮದುವೆಗೆ ನಿಂತಿರುವ ಮಗಳೊಬ್ಬಳಿ ದ್ದಾಳೆ ?" ಎಂದುತ್ತರವಿತ್ತ.

ನನಗೆ ಇದನ್ನು ಕೇಳಿ ಗಾಬರಿಯೇ ಆಯಿತು. "ಅಲ್ಲವಯ್ಯ, ಇವರು ಅಯ್ಯರು, ಅವನು ಶೆಟ್ಟಿ ; ಇವರು ಇಲ್ಲಿಯವರು, ಅವನು ಅಲ್ಲಿಯವನು ; ಗೋತ್ರವೇನೋ, ಪ್ರವರವೇನೋ ? ಹುಡುಗ ಎಂಥವನೋ ? ತಂದೆ ತಾಯಿ ಯರು ಒಪ್ಪಿಯಾರೋ ಇಲ್ಲವೋ ? ಯಾವುದನ್ನೂ ತಿಳಿಯದೆ, ತಮ್ಮ ಮಗ ಳಿಗೆ ತಕ್ಕ ವರ ಎಂದು ನಿರ್ಧರಿಸಿಬಿಟ್ಟಿದ್ದಾರೋ ?"

"ಹೆಣ್ಣಿಗೊಂದು ಗಂಡಾದರೆ ಸಾಕು ! ಅವನು ವಕೀಲರ ಕಾಗದ ತೆಗೆದು ಕೊಂಡು ಪ್ರಿನ್ಸಿಪಾಲರ ಮನೆಗೆ ಬಂದಾಗ ಆ ಹುಡುಗಿ ನೋಡಿದಳಂತೆ. ತಾಯಿಗೆ ಹೇಳಿದಳು, ತಾಯಿ ಅಣ್ಣನಿಗೆ ಹೇಳಿದಳು ಅಷ್ಟೆ !"

"ಹುಡುಗನಿಗೆ ಮದುವೆಯಾಗಿದೆಯೋ ಇಲ್ಲವೋ ಎಂದು ಕೂಡ ವಿಚಾ ರಿಸಲಿಲ್ಲವೆ ? ಮೊದಲ ನೋಟದಲ್ಲಿ ಮೆಚ್ಚುಗೆಯಾಗುವುದೇನೋ ಒಳ್ಳೆಯದೇ ; ಆದರೆ ಮೆಚ್ಚಿಕೊಂಡವನು ವರನಾಗಿಯೇ ಇದ್ದಾನೋ ಎಂದು ವಿಚಾರಮಾಡ ಬೇಡವೆ ?"

"ವಿಚಾರಿಸದೆ ಇರುತ್ತಾರೆಯೇ ?"

"ಯಾರನ್ನು ವಿಚಾರಿಸಿದರು ?"

"ನನ್ನನ್ನೇ, ಇನ್ನು ಯಾರನ್ನು ?"

"ನಿನಗೆ ಈ ಹುಡುಗನ ವಿಚಾರ ಏನು ಗೊತ್ತು ?"

"ಗೊತ್ತಿಲ್ಲದೆ ಏನು ? ಪ್ರಿನ್ಸಿಪಾಲರ ಮನೆಗೆ ಅವನನ್ನು ಕರೆದುಕೊಂಡು ಹೋದವನು ನಾನೇ ಅಲ್ಲವೇ ? ಒಟ್ಟಿಗೆ ನಡೆದುಹೋಗುತ್ತಿದ್ದಾಗ ಸುಮ್ಮನೆ ಗೊಂಬೆಯ ಹಾಗೆ ಹೋಗುತ್ತೇನೆಯೆ ? ಅವನ ವಿವರಗಳನ್ನೆಲ್ಲ ವಿಚಾರಿಸಿ ಕೊಂಡೆ."

"ಇರಬಹುದು ಆದರೆ ಆ ಹುಡುಗಿ ಈ ಹುಡುಗನನ್ನು ಮೆಚ್ಚಿಕೊಂಡಳು ಎಂದು ನಿನಗೆ ಹೇಳಿದವರು ಯಾರು ?"

"ಯಾರೇನು ಹೇಳುವುದು ? ನನಗೆ ಕಣ್ಣಿಲ್ಲವೆ ? ಬುದ್ಧಿಯಿಲ್ಲವೆ ? ಪ್ರಪಂಚವನ್ನು ನೋಡಿಲ್ಲವೆ ? ಹುಡುಗಿ ಹುಡುಗನನ್ನು ಮೆಚ್ಚಿಕೊಂಡೆ ಎಂದು ಡಂಗುರ ಹೊಡೆಯುತ್ತಾಳೋ, ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುತ್ತಾಳೋ ?"

"ಈ ಜಾಣತನಕ್ಕೆ ಸಂಸ್ಕೃತದಲ್ಲಿ ಅರ್ಥಾಪತ್ತಿ ಎನ್ನುತ್ತಾರಯ್ಯ, ಬುದ್ಧಿ ವಂತ. ಅದು ಹೋಗಲಿ, ಮುಂದಿನ ಪ್ರಸಂಗ ಹೇಗೆ ? ಹುಡುಗಿಯೂ ಅವ ರಮ್ಮನೂ ಒಪ್ಪಿಕೊಂಡ ಮೇಲೆ ಮದುವೆ ಯಾವಾಗ ? ಹುಡುಗನಿಗಂತೂ ಕೆಲಸ ಸಿಕ್ಕಿತು ; ಪ್ರಿನ್ಸಿಪಾಲರಿಗಂತೂ ತಂಗಿಯ ಮಗಳಿಗೆ ವರ ಹುಡುಕುವ ತಾಪತ್ರಯ ತಪ್ಪಿತು. ರೊಟ್ಟಿ ತಾನಾಗಿ ತುಪ್ಪವಿದ್ದ ಕಡೆ ಬಿದ್ದಿತಲ್ಲವೆ ? 'ಜಾರಿ' ಎಂದು ಸೇರಿಸಲೋ ?"

"ಹುಡುಗಿಯ ಅಮ್ಮ ಒಪ್ಪಿಕೊಂಡಿದ್ದಾಳೆ ಎಂದು ನಾನು ಹೇಳಿದೆನೆ ? ವಿಷಯ ತಿಳಿದರೆ ಒಪ್ಪಿಕೊಳ್ಳಬಹುದು ಅಷ್ಟೆ."

"ಹಾಗಿದ್ದರೆ, ಆಕೆಗೆ ಈ ಉದ್ದೇಶವಿಲ್ಲದೆ ಅಣ್ಣನನ್ನು ಒತ್ತಾಯ ಮಾಡಿ ದಳೆ ? ಆ ಹುಡುಗನಿಗೆ ಕೆಲಸ ಸಿಕ್ಕರೆಷ್ಟು, ಬಿಟ್ಟರೆಷ್ಟು ? ಈಕೆಗೇನು ?"

"ಇಲ್ಲ ಇಲ್ಲ, ಆಕೆಗೆ ಮೊದಲೇ ಪರಿಚಯವಂತೆ ಈ ಹುಡುಗ. ಪ್ರಿನ್ಸಿ ಪಾಲರು ಇವರ ಅಣ್ಣ ಎನ್ನುವುದು ಮಾತ್ರ ಹುಡುಗನಿಗೆ ಗೊತ್ತಿರಲಿಲ್ಲ."

ನನಗೆ ಈ ಎಳೆಗಳನ್ನು ಬಿಡಿಸುವುದು ತೀರ ಕಷ್ಟವಾಯಿತು. ಪತ್ತೇದಾರಿ ನಡೆಸುವವರಿಗೆ ಮರದ ಮಿದುಳಿರಬೇಕು ; ನನ್ನ ಮಿದುಳಂತೂ ಇಷ್ಟು ವೇಳೆ

ಗಾಗಲೇ ಗೊಂದಲದ ಸುಳಿಯಲ್ಲಿ ಸಿಕ್ಕಿ ಸೊರಗುತ್ತಿತ್ತು. ಸುಂದರೇಶ ಏನು ತಿಳಿದುಕೊಂಡಾನೆಂಬ ಯೋಚನೆಯನ್ನೂ ಮಾಡದೆ "ಅಯ್ಯಾ, ನಿದ್ರಾ ದೇವಿಯ ಆಗ್ರಹ ಬಲವಾಗುತ್ತಿದೆ. ಅಪ್ಪಣೆ ಕೊಡು" ಎನ್ನುತ್ತಾ ಎದ್ದೆ. ನಗುತ್ತ ಸುಂದರೇಶನೂ ಎದ್ದು "ನಾನೂ ಹೊರಡುತ್ತೇನೆ" ಎಂದು ಹೊರಟ.

ಪ್ರಿನ್ಸಿಪಾಲರ ತಂಗಿಗೆ ಪದ್ಮನಾಭ ಶೆಟ್ಟಿ ಪೂರ್ವದ ಪರಿಚಯುವಾಗುವುದು ಹೇಗೆ? ಮಗಳನ್ನು ಕೊಡಲು ಆಕೆ ಒಪ್ಪದಿದ್ದರೂ ಕೆಲಸಕ್ಕೆ ಶಿಫಾರಸು ಮಾಡಿದಳು, ಅಥವಾ ಒಪ್ಪಲಿಲ್ಲ ಎಂದು ಸುಂದರೇಶ ಸ್ಪಷ್ಟವಾಗಿ ಹೇಳಲಿಲ್ಲವಲ್ಲ. ಈ ಸುಂದರೇಶ ಹೀಗೆಯೇ, ಬಳಸಿ ಬಳಸಿ ಮಾತನಾಡಿ ಕುತೂಹಲದ ಕಿಚ್ಚನ್ನು ಕೆರಳಿಸಿ ತಾನು ಮರೆಯಾಗಿ ಹೋಗುತ್ತಾನೆ. ಉಳಿದವರಿಗೆ ಯೋಚನೆಯನ್ನು ಹಚ್ಚಿಸಿ ತಾನು ನಿರ್ಯೋಚನೆಯಿಂದಿರುತ್ತಾನೆ. ಅದು ಒಂದು ಯುಕ್ತಿಯೋ, ಯೋಗವೋ ತಿಳಿಯದು. ಅಂತೂ ಅವನು ಹೊರಟು ಹೋದ ಮೇಲೆ ನಾನು ಈ ವಿಚಾರವನ್ನು ಮನಸ್ಸಿನಿಂದ ಹೊರಗೆ ನೂಕಲು ಪ್ರಯತ್ನಿಸಿ ವಿಫಲನಾದೆ.

೮

'ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ' ಎಂದು ಕವಿಯೇನೋ ಆಶ್ವಾಸನೆ ಕೊಟ್ಟಿದ್ದಾನೆ. ಆದರೆ ಚಿಂತಾತುರರಾದವರಿಗೆ ನಿದ್ರೆಯಿಲ್ಲವೆಂದು ಅವನಿಗೆ ತಿಳಿಯಲಿಲ್ಲವೆ? ನಿದ್ರೆ ಬಾರದವರಿಗೆ ರಾತ್ರಿ ಮುಗಿಯುವುದೇ ಇಲ್ಲ! ಕ್ಷಣವೊಂದು ಯುಗವಾಗಿ ಪರಿಣಮಿಸುತ್ತದೆ. ಕಗ್ಗತ್ತಲೆಯ ಮುಸುಕಿನಲ್ಲಿ ಮಿದುಳು ಮಲಗದಿದ್ದರೆ ಅದರೊಳಗಿಂದ ಭೂತ ಭೇತಾಳಗಳು ಹೊರಗೆ ಹಾರಿ ಬಂದು ಕುಣಿದು ಕುಪ್ಪಳಿಸಿ, ಅಬ್ಬರಿಸಿ ಬೊಬ್ಬೆ ಹೊಡೆಯುತ್ತವೆ. ಅವುಗಳ ಮೇಲಾಟ ಬೆಳಕು ಹರಿಯುವವರೆಗೆ ನಿಲ್ಲುವುದೇ ಇಲ್ಲ. ಮಲಗಿ ನಿದ್ರೆ ಮಾಡುವಾಗ ದುಃಸ್ವಪ್ನವಾದರೆ ಒಡನೆಯೇ ಎಚ್ಚರವಾಗಿ ಸ್ವಪ್ನವೂ ಮರೆಯಾಗುತ್ತದೆ, ಮನಸ್ಸಿಗೆ ನೆಮ್ಮದಿಯೂ ಒದಗುತ್ತದೆ. ಆದರೆ ಎಚ್ಚರವಾಗಿಯೇ ಇರುವಾಗ ದುಃಸ್ವಪ್ನಗಳು ಕಾಣಿಸಿಕೊಂಡರೆ ಏನು ಮಾಡುವುದು?

ಅಂತೂ ಚಿಂತೆಯ ಅಬ್ಬರದ ಅಲೆಗಳಿಗೆ ನನ್ನ ಮನಸ್ಸನ್ನು ಬಲಿಕೊಟ್ಟು ನಾನು ನಿದ್ರೆ ಮಾಡುವುದು ಸಾಧ್ಯವಿರಲಿಲ್ಲ. ಆದರೆ ಈ ನಡುರಾತ್ರಿಯಲ್ಲಿ ಮಾಡು

ವುದಾದರೂ ಏನು ? ಎಲ್ಲಿಯದೋ ನೆನಪುಗಳನ್ನು ಮೆಲುಕು ಹಾಕುವುದೊಂದೇ ಕೆಲಸವಾಯಿತು. ಬೇಕೆಂದು ಯಾರೂ ಹುದುಗಿ ಹೋದ ನೆನಪುಗಳನ್ನು ಹೊರತೆಗೆಯುವುದಿಲ್ಲ. ಅದು ತಾನಾಗಿಯೇ ನಡೆಯುವ ಕೆಲಸ; ನಾವು ನಿಲ್ಲಬೇಕೆಂದರೂ ಅದು ನಿಲ್ಲುವುದಿಲ್ಲ. ಗೋರಿಯಿಂದ ಎದ್ದ ಪ್ರೇತವನ್ನು ಬೇಕಾದರೆ ಮಂತ್ರದಿಂದ ಕಟ್ಟಬಹುದಂತೆ (ಇದು ಕೆಲವರ ನಂಬಿಕೆ ಎನ್ನಿ), ಆದರೆ ಸಮಾಧಿಯಿಂದ ಮೇಲೆ ಬಂದ ನೆನಪನ್ನು ನಿಲ್ಲಿಸುವುದು ಕಷ್ಟ. ಜಂಬುನಾಥಯ್ಯರು, ಅವರ ತಂಗಿ, ತಂಗಿಯ ಮಕ್ಕಳು, ಪದ್ಮನಾಭಶೆಟ್ಟಿ, ಅವನ ತಂಗಿ, ಅವಳ ಕಥೆ, ಸುಂದರೇಶ, ಅವನ ಸಾಹಸ ಹೀಗೆ ಏನೇನೋ ವಿವರಗಳೆಲ್ಲ ಕಲಸು ಮೇಲೋಗರವಾಗಿ ಅಲ್ಲಿನ ಇಲ್ಲಿನ ಎಳೆಗಳೆಲ್ಲ ಬೇರೆ ಬೇರೆ ಬಂದುವು.

ಜಂಬುನಾಥಯ್ಯರ ತಂಗಿಯ ಮಗ ಮೋಹನ ಮತ್ತು ಪದ್ಮನಾಭ ಶೆಟ್ಟಿಯ ತಂಗಿ ಪದ್ಮಾವತಿ ಇಬ್ಬರೂ ಒಟ್ಟಿಗಿರುತ್ತಿದ್ದುದನ್ನು ಕಾಲೇಜಿನಲ್ಲಿ ಹಲವು ಬಾರಿ ನೋಡಿದ್ದೆ. ಅಂಗನಾಮಾಧವ ರಾಸ ಮಂಡಲ ಕಾಲೇಜುಗಳಲ್ಲಿ ಸಾಮಾನ್ಯವಾದ ಪದ್ಧತಿಯಾದುದರಿಂದ ಅದನ್ನು ಕುರಿತು ಅಷ್ಟಾಗಿ ನಾನು ಆಲೋಚಿಸಲಿಲ್ಲ. ಮೋಹನ ಮತ್ತು ಪದ್ಮಾವತಿ ಇಬ್ಬರೂ ಸೈಕಾಲಜಿಯನ್ನು ಓದುತ್ತಿದ್ದರು. ನನ್ನ ಬಳಿಯೇ ಇಬ್ಬರೂ ಶಿಷ್ಯವೃತ್ತಿ ಮಾಡುತ್ತಿದ್ದರು. ಪದ್ಮಾವತಿಯ ಪೂರ್ವ ನನಗೆ ಈ ಮುಂಚೆ ತಿಳಿದಿರಲಿಲ್ಲ. ಮಂಗಳೂರಿನಿಂದ ಬಂದ ಹುಡುಗಿಯೆಂದಷ್ಟೇ ನನಗೆ ತಿಳಿದಿದ್ದುದು. ಈಗ ಪದ್ಮನಾಭ ಶೆಟ್ಟಿಯ ಎಂದರೆ ಅವಳ ಅಣ್ಣನ, ಪರಿಚಯವಾಗಿದ್ದಿತು. ಆ ಮೂಲಕ ಈ ಹುಡುಗಿಯ ವಿಚಾರ ಇನ್ನಷ್ಟು ವಿವರಗಳು ಸ್ಪಷ್ಟವಾದುವು ಅಷ್ಟೆ. ಮೋಹನ–ಪದ್ಮಾವತಿಯರು ಸಹಪಾಠಿಗಳು ಮಾತ್ರವಲ್ಲ, ಪರಿಚಿತರು ಮಾತ್ರವಲ್ಲ, ಪರಸ್ಪರ ಅನುರಕ್ತರಿದ್ದರೂ ಇರಬಹುದು ಎಂಬುದು ಈಗಷ್ಟೇ ನನ್ನ ಮಂದ ಬುದ್ಧಿಗೆ ಹೊಳೆದದ್ದು. ಪದ್ಮನಾಭಶೆಟ್ಟಿಗೆ ಉದ್ಯೋಗ ದೊರಕಿಸುವುದರಲ್ಲಿ ಈ ಮೋಹನನ ಪಾತ್ರ ಇದ್ದರೂ ಇದ್ದೀತು ಎನಿಸಿತು.

ಹಾಗೂ ಹೀಗೂ ಬೆಳಕೇನೋ ಹರಿಯಿತು. ಏಳುವುದೂ ಆಯಿತು: ನಿತ್ಯೋತ್ಸವಗಳೂ ಮುಗಿದವು. ಆ ದಿನ ಕಾಲೇಜಿಗೆ ಹೋದಾಗ ಪದ್ಮಾವತಿಯೊಂದಿಗೆ ಈ ವಿಚಾರ ಪ್ರಸ್ತಾಪ ಮಾಡುವುದೆಂದು ನಿಶ್ಚಯಿಸಿಕೊಂಡೆ. ಹೊರ

ಡುವ ಸಿದ್ಧತೆ ಮುಗಿಯುವಷ್ಟರಲ್ಲಿ, ರಸ್ತೆಯ ಅಂಚಿನಲ್ಲಿ ಸುಂದರೇಶ ಹೋಗು ತ್ತಿದ್ದುದನ್ನು ಕಂಡೆ. ಹೊರಗೆ ಹೋಗಿ ಅವನನ್ನು ಕೂಗಿ ಕರೆದೆ. ಪದ್ಮನಾಭ ಶೆಟ್ಟಿಯ ಸಮಸ್ಯೆ ನನ್ನ ತಲೆಗೆ ಮುತ್ತಿಗೆ ಹಾಕಿದಾಗಿನಿಂದ ಸುಂದರೇಶ ಒಂದು ಬಗೆಯ ಆತ್ಮೀಯನಾಗಿದ್ದ; ಅವನಿಂದ ವಿವರಗಳನ್ನು ಸಂಗ್ರಹಿಸಬೇಕೆಂಬ ಕುತೂಹಲ ನನ್ನಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತಿತ್ತು. ಕಳೆದ ತಲೆಮಾರಿನಲ್ಲಿ ಮೈಸೂರಿನ ಜನ ಬ್ರಜೇಂದ್ರನಾಥಶೀಲರನ್ನು 'ಜಂಗಮ ವಿಶ್ವಕೋಶ'ವೆಂದು ಬಣ್ಣಿಸುತ್ತಿದ್ದರಂತೆ. ಅವರನ್ನು ನಾನು ಕಂಡುದಿಲ್ಲ. ನಿತ್ಯವ್ಯವಹಾರದಲ್ಲಿ ಬಳಕೆಗೆ ಬಾರದ ಶಾಸ್ತ್ರ ವಿಚಾರಗಳನ್ನು ಇವರು ಬೇಕು-ಬೇಡೆಂಬ ವಿವೇಕವಿಲ್ಲದೆ ತಲೆಗೆ ತುರುಕಿಕೊಳ್ಳುತ್ತಿದ್ದರೆಂದು ತೋರುತ್ತದೆ. ಅವರಿಂದ ನೆರೆಹೊರೆಯ ಹೆಂಗಸರು-ಮಕ್ಕಳಿಗೆ ಪಾಪಿ-ಪಾಮರರಿಗೆ ಎಷ್ಟು ಪ್ರಯೋಜನವಾಯಿತೋ ನಾನರಿಯೆ. ಆದರೆ ನಮ್ಮ ಸುಂದರೇಶನ ಜ್ಞಾನ ಭಾಂಡಾರವಷ್ಟೂ ಜನತಾ ಜನಾರ್ಧನನ ಸೇವೆಗಾಗಿಯೇ ಮೀಸಲು; ಅವನ ಕೋಶದಲ್ಲಿ ಸೇರುವ ವಿವರಗಳೆಲ್ಲವೂ ನನ್ನಂಥ ಪಾಮರನಿಗೆ ಉಪಯುಕ್ತವಾದುವೇ? ಊರವರೆಲ್ಲರ ಸಂಸಾರದ ಗುಟ್ಟೂ ಇವನ ತಿಳಿವಿನ ಒಳಗೆ ನಿಂತುದೇ; ರಟ್ಟೇ ಇವನ ಪಾಲಿಗೆ. ಉದ್ಯೋಗವೇ, ಪ್ರಣಯವೇ, ತಾಪತ್ರಯವೇ, ರೋಗವೇ, ಸಂತರ್ಪಣೆಯೇ, ಜನನವೇ, ಮರಣವೇ ಯಾವುದು ಕೇಳುತ್ತೀರಿ, ಅವೆಲ್ಲವೂ ಅವನ ಪೆಟ್ಟಿಗೆಯಲ್ಲಿರುವ ಸರಕುಗಳೇ. ಸಮಯವರಿತು ಅವನು ಒಂದೊಂದನ್ನೂ ಮಿತವಾಗಿ ತೆಗೆದು ತೋರಿಸಿ, ಮತ್ತೆ ಒಳಗೆ ಸೇರಿಸಿಬಿಡುತ್ತಾನೆ. ಇಷ್ಟರ ಮೇಲೆ ಅವನು ನಿರ್ವಿಕಾರ. ಯಾರ ಹಂಗೂ ಇಲ್ಲ, ಎಲ್ಲರ ಗೊಡವೆಯೂ ಬೇಕು. "ಇರಬೇಕು, ಇರದಿರಬೇಕು" ಎಂದು ಯಾರೋ ದಾಸರು ಹೇಳಲಿಲ್ಲವೆ, ಹಾಗೆ.

ಸುಂದರೇಶನ ಜ್ಞಾನ ಪ್ರದರ್ಶನ ವೈಖರಿಯೂ ಸ್ತುತ್ಯವಾದುದು. ಎಲ್ಲರಂತೆ ತಮಗೆ ತಿಳಿದುದೆಲ್ಲವನ್ನೂ ಒಮ್ಮೆಲೆ ಇತರರ ಮುಂದೆ ಕಾರಿಬಿಡಬೇಕೆಂಬ ಕಾತರ ಅವನಿಗಿಲ್ಲ. ನೀವು ಕೈಯನ್ನು ತೋರಿಸು ಎಂದರೆ ಅವನು ತೋರಿಸುವುದು ಬೆರಳನ್ನಷ್ಟೆ. ಇಷ್ಟು ದೊರಕಿದರೆ ಮತ್ತಷ್ಟರಾಶೆ ನಿಮ್ಮಲ್ಲಿ ಹುಟ್ಟಿದರೆ ಅದು ಅವನ ತಪ್ಪಲ್ಲ; ಅವನು ನಿಮ್ಮ ಮುಂದೆ ಇಡುವುದು ಅಷ್ಟನ್ನೇ! ವಿವರಗಳನ್ನು ಹೊರಗೆಳೆದುಕೊಳ್ಳುವ ಕಾತರ ನಿಮ್ಮಲ್ಲಿ ಉಂಟಾಯಿತೆಂದರೆ ಅವನು ಜಾಗವನ್ನೇ ಬಿಟ್ಟು ಜಾರಿಬಿಡುತ್ತಾನೆ. ತಾನು ಎಷ್ಟು ಹೇಳಬೇಕು ಹೇಗೆ

ಹೇಳಬೇಕು ಎಂಬುದನ್ನು ಅವನು ವಿಚಾರಮಾಡಿ, ನಿರ್ಧರಿಸಿಕೊಂಡಂತೆ ಭಾಸ ವಾಗುತ್ತದೆ. ನಿಮಗೆ ಬೇಕಾದಂತೆ ಬೇಕಾದ ವಿವರಗಳನ್ನು ಹೇಳುವ ಪದ್ಧತಿ ಅವನಲ್ಲಿಲ್ಲ. ಅವನ ಮಾತು ತನ್ನ ಸಮಾಧಾನಕ್ಕೆ ವಿನಾ ನಿಮ್ಮ ಸಮಾಧಾನಕ್ಕೆ ಅಲ್ಲ. ಈ ವಿವೇಕ ಔಚಿತ್ಯ ಜ್ಞಾನ ಇರುವಷ್ಟು ಜ್ಞಾನಿಯೇನಲ್ಲ ಸುಂದರೇಶ; ಅವನೂ ಅದನ್ನು ಒಪ್ಪಿಕೊಳ್ಳುತ್ತಾನೆ. ಆದರೆ ಅವನಿಗೆ ಕಪಿಮುಷ್ಟಿ ಇದೆ ಯೆಂದು ನೀವೂ ಒಪ್ಪಿಕೊಳ್ಳಬೇಕು.

ಇಂಥವನಿಂದ ನನ್ನ ಜ್ಞಾನಪಿಪಾಸೆ ಇಂಗೀತೆಂದು ಈ ಬೆಳಿಗ್ಗೆ ನಾನು ಅವ ನನ್ನು ಕರೆದೆನೆಂದು ಭಾವಿಸಬೇಡಿ. ನನ್ನ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಅವನಿಂದ ದೊರಕೀತೆಂದು ನಾನು ಅವನನ್ನು ಕೂಗಿ ಕರೆಯಲಿಲ್ಲ. ಅವನನ್ನು ಕರೆದಾಗ ಈ ಯಾವ ಯೋಚನೆಯೂ ಮನಸ್ಸಿಗೆ ಬರಲಿಲ್ಲ; ಸಹಜವಾದ ಪ್ರವೃತ್ತಿಯೊಂದರ ನಿರ್ಬಂಧ ಅವನನ್ನು ಕರೆದುದರ ಕಾರಣ.

ಇದು ಹೇಗೂ ಇರಲಿ, ಸುಂದರೇಶನೇನೋ ನನ್ನ ಕರೆಗೆ ಓಗೊಟ್ಟು ದಯ ಮಾಡಿದ. ನಾನು ಕರೆಯದೇ ಇದ್ದರೂ ಬರುತ್ತಿದ್ದನೋ ಏನೋ! ಬಂದ ವನೇ ಮಂದಹಾಸವನ್ನು ಬೀರಿ "ಏನು ಸಮಾಚಾರ?" ಎನ್ನುವ ಪ್ರಶ್ನೆಯನ್ನು ನನ್ನೆಡೆಗೆ ಎಸೆದ. ಆದರೆ ಅವನನ್ನು ಕರೆದಾಗ ಯಾವ ಉದ್ದೇಶವೂ ಇಲ್ಲದುದ ರಿಂದ ನಾನು—"ನೀನೇ ಹೇಳಬೇಕಯ್ಯಾ, ಸಮಾಚಾರಗಳ ಸಾಗರವಲ್ಲವೆ ನೀನು? ಏನು, ಸಂಚಾರ ಎಲ್ಲಿಗೆ? ಅಥವಾ ಎಲ್ಲಿಂದ? ಈ ದಿನದ ಭವಿಷ್ಯ ಏನು?" ಎಂದು ಮಾತುಕತೆ ಮೊದಲು ಮಾಡಿದೆ. ಸುಂದರೇಶ ಸುಖಾಸೀನ ನಾದ. ನಂತರ—"ಇಲ್ಲೇ ನಿಮ್ಮ ಪ್ರಿನ್ಸಿಪಾಲರ ಮನೆಗೆ ಹೋಗಿದ್ದೆ. ಲೈಟ್ ಬಿಲ್ ಕಟ್ಟಬೇಕಾಗಿದ್ದಿತು" ಎಂದ. ಇಂಥ ಕೆಲಸಗಳನ್ನೆಲ್ಲ ಸಂತೋಷದಿಂದ, ಶ್ರದ್ಧೆಯಿಂದ ಮಾಡುತ್ತಾನೆ ಸುಂದರೇಶ. ಅಲ್ಲಿಗೆ ಇಲ್ಲಿಗೆ ಹೋಗಿಬರುವುದು, ಹಣಕಾಸಿನ ವ್ಯವಹಾರ, ಮದುವೆ ವ್ಯವಸ್ಥೆ, ಊಟದ ಏರ್ಪಾಟು, ವಕೀಲರ ಬಳಿ ಅಲೆದಾಟ, ವೈದ್ಯರಿಗಾಗಿ ಉಪಾಸನೆ ಇಂಥವೆಲ್ಲ ಸುಂದರೇಶನಿಗೆ ಅಚ್ಚು ಮೆಚ್ಚಿನ ಕೆಲಸ. ಯಾವ ಬಗೆಯ ಸ್ವಾರ್ಥವೂ ಇಲ್ಲದೆ, ಕೆಲಸಮಾಡಿದ ಸಂತೋಷಕ್ಕಾಗಿಯೇ ಕೆಲಸ ಮಾಡುವ ಈ ಉತ್ಸಾಹ ಸಾಮಾನ್ಯವಾಗಿ ಬುದ್ಧಿ ವಂತರಿಗೆ ಇರದು. ಅದೂ ಓದಿ ನಾಗರಿಕತೆಯನ್ನು ಅರಗಿಸಿಕೊಂಡವರಿಗಂತೂ ಇದು ಸಾಧ್ಯವೇ ಇಲ್ಲ. ಸುಂದರೇಶನಿಗೆ ಬುದ್ಧಿಯೂ ಇಲ್ಲ, ಓದೂ ಇಲ್ಲ,

ನಾಗರಿಕತೆಯೂ ಇಲ್ಲ. ಹೀಗಾಗಿ ನಿಸ್ವಾರ್ಥ ಕರ್ಮ ಇವನಲ್ಲಿ ಒದಗಿ ಬಂದಿದ್ದಿತು. ಯಾವ ಪ್ರತಿಫಲ ಕಾಮನೆಯೂ ಇಲ್ಲವಾದರೂ, ಕೆಲಸ ಮುಗಿಸಿ ಬಂದಾಗ ಕಾಫಿಯೋ ತಿಂಡಿಯೋ ದೊರೆತರೆ ಅವನಿಗೆ ಸಂತೋಷವೇ ಎನ್ನಿ! ಇದಕ್ಕಾಗಿ ತನ್ನ ಕಾರ್ಯಭಾರವನ್ನೆಲ್ಲ ಮುಂಜಾನೆ ಅಥವಾ ಸಂಜೆ ಉಪಾಹಾರದ ವೇಳೆಗೆ ಅಳವಡಿಸಿಕೊಳ್ಳುವ ಪದ್ಧತಿ ಅವನ ಅರಿವಿಲ್ಲದೆಯೇ ಸಿದ್ಧವಾಗಿಬಿಟ್ಟಿದೆ. ಈ ದಿನ ಜಂಬುನಾಥಯ್ಯರ ಮನೆಯ ಆರೋಗಣೆ ಇವನ ಪಾಲಿಗೆ, ಬಂದಿದ್ದಿತು ಎಂದು ಕಾಣುತ್ತದೆ.

ನನ್ನ ಮನಸ್ಸನ್ನು ಆಕ್ರಮಿಸಿದ್ದ ಸಮಸ್ಯೆಗೆ ಸಂಬಂಧಪಟ್ಟಂತೆಯೇ ಸುಂದರೇಶ ದೊರೆತುದು ಒಂದು ಬಗೆಯ ಸಮಾಧಾನ; ಅದೂ ಜಂಬುನಾಥಯ್ಯರ ಮನೆಯಿಂದಲೇ ಅವನು ಬರುತ್ತಿದ್ದುದು ಉತ್ಸಾಹದ ಸಮಾಚಾರ. ಕಾಲೇಜಿಗೆ ತಡವಾದರೆ ಚಿಂತೆಯಿಲ್ಲ, ಸಂಶೋಧನೆ ಮುಖ್ಯ ಎಂದುಕೊಂಡು ನಾನೂ ಕುಳಿತು "ಏನು, ಪ್ರಿನ್ಸಿಪಾಲರ ಮನೆಯ ಸಮಾಚಾರ? ಮದುವೆಗೆ ಸಿದ್ಧಮಾಡಿಕೊಳ್ಳುತ್ತಿದ್ದಾರೋ?" ಎಂದು ಕೇಳಿದೆ.

"ಯಾರ ಮದುವೆ?"

"ಅದೇ ಅವರ ತಂಗಿಯ ಮಗಳದ್ದು. ಪದ್ಮನಾಭಶೆಟ್ಟಿ...."

"ಓಹೋ, ಅದು ನಿನ್ನ ಮನಸ್ಸಿನಲ್ಲಿ ಇನ್ನೂ ಬುಸುಗುಟ್ಟುತ್ತಿದೆಯೋ! ಇದೇ ಪ್ರಪಂಚ; ಮದುವೆ ಮಾಡಿಕೊಳ್ಳುವವರಿಗೂ ಮಾಡುವವರಿಗೂ ಇರದಷ್ಟು ಯೋಚನೆ ನೋಡುವವರಿಗೆ ಇರುತ್ತದೆ! ನೆರೆಯುವರು ಹಾರಾಡಿದಾಗ ನನ್ನ ಮನಸ್ಸಿಗೆ ನೆಮ್ಮದಿ! ಇನ್ನೂ ಹುಡುಗನಿಗೆ ಕೆಲಸದ ಕಾಗದ ಹೋಗಿಲ್ಲ, ಅವನು ಕೆಲಸಕ್ಕೆ ಬರಲು ಒಪ್ಪಿಲ್ಲ, ಈಗಾಗಲೇ ಮದುವೆಗೆ ಸಿದ್ಧಮಾಡುತ್ತಾರೋ? ನಿಮಗೆಲ್ಲ ಕುಚೋದ್ಯ! ನಿನಗೂ ಮದುವೆಗೆ ನಿಂತ ಮಗಳೊಬ್ಬಳು ಇದ್ದಿದ್ದರೆ ತಿಳಿಯುತ್ತಿತ್ತು!"

ಸುಂದರೇಶ ಹೇಳಿದುದು ದಿಟವೇ; ನನ್ನ ಮುಖ ಸಣ್ಣದಾಯಿತು. ಆದರೂ ಜಟ್ಟಿಯ ಪಟ್ಟು ಬೀಳಬಾರದೆಂದು, "ನಾನೇನು ಕುಚೋದ್ಯ ಮಾಡಿದೆನೇನಯ್ಯ? ನಿನ್ನಷ್ಟೇ ಅನುಕಂಪ ನನಗೂ ಉಂಟು. ನನ್ನಿಂದೇನಾದರೂ ನೆರವಾಗುವುದಿದ್ದರೆ ಮಾಡೋಣ!" ಎಂದೆ. ಈ ಬಾಯಿಮಾತಿಗೆ ಮನಸ್ಸಿನ ಉದ್ದೇಶವಿರಲಿಲ್ಲವೆಂದು ಬೇರೆ ಹೇಳಬೇಕೆ? ಆದರೆ ನನ್ನದೇನು ನಿರರ್ಥಕವಾದ

ಕುತೂಹಲ, ಸೋಮಾರಿ ಜಿಜ್ಞಾಸೆ ಎಂದುಕೊಳ್ಳಬೇಡಿ. ಪದ್ಮನಾಭಶೆಟ್ಟಿಯನ್ನು ನೋಡಿದ ಮೇಲೆ ಅವನಿಗೆ ಸಹಾಯ ಮಾಡುವ ಮನಸ್ಸಾಗಿದ್ದಿತು. ಜಂಬುನಾಥಯ್ಯರ ವರ್ತನೆಯಿಂದ ಮನಸ್ಸು ಸ್ವಲ್ಪ ಕಹಿಯಾಯಿತು ಅಷ್ಟೆ. ಈ ಕಹಿಯಿಂದಲೇ ಸುಂದರೇಶನಿಗೆ ಕುಚೋದ್ಯವೆಂದು ಕಾಣಿಸಿದ ಮಾತು ಹೊರಬಿದ್ದುದು. ಸುಂದರೇಶನಿಗೆ ಬಂದ ಆಗ್ರಹ ಬಹಳ ಹೊತ್ತು ನಿಲ್ಲುವುದಿಲ್ಲ. ಪ್ರಬುದ್ಧರಾದವರ ಕೋಪ ಬಹಳಕಾಲ ನಿಲ್ಲದೆಂದು ಎಲ್ಲಿಯೋ ಓದಿದ್ದೆ. 'ಉತ್ತಮೇ ತುಕ್ಷಣಂ ಕೋಪಃ' ಎನ್ನುವ ಮಾತೂ ನೆನಪಿದೆ, ಅದು ಎಲ್ಲಿ ಬರುತ್ತದೆ ಎನ್ನುವುದು ನೆನಪಿಲ್ಲ. ಸುಂದರೇಶನ ಸಿಟ್ಟನ್ನು ನೋಡಿದರೆ ಈ ಮಾತು ದಿಟ ಎನಿಸುತ್ತದೆ. ನಾನು ಸಮಾಧಾನಕ್ಕೆಂದು ಹೇಳಿದ ಮಾತಿಗೆ ಸುಂದರೇಶ—

"ಹಾಗಿದ್ದರೆ ಒಂದು ಕೆಲಸವಾಗಬೇಕು ಮಾಡುವಿಯೋ ?"

"ಹೇಳುವ ಮುಂಚೆಯೇ ಮಾಡುವುದು ಹೇಗಯ್ಯ ?"

"ಅದು ನಿನ್ನಿಂದ ಆಗಬಹುದಾದ ಕೆಲಸ. ನಿನಗೆ ಹೇಳುವುದಕ್ಕೆ ಜಂಬುನಾಥಯ್ಯರೂ ಅವರ ತಂಗಿಯೂ ಹೇಳಿದರು ಎನ್ನು."

ನನ್ನ ಉತ್ಸಾಹ, ಉದ್ವೇಗ, ಕಾತುರ, ಕುತೂಹಲ ಎಲ್ಲವೂ ಎದ್ದು ನಿಂತವು. ಸುಂದರೇಶ ಇವುಗಳ ಅಭಿವ್ಯಕ್ತಿಗೆ ಕಾಯದೆ,

"ನಿನ್ನ ಬಳಿ ಓದುತ್ತಿರುವ ಹುಡುಗಿ ಪದ್ಮಾವತಿ ಪದ್ಮನಾಭಶೆಟ್ಟಿಯ ತಂಗಿಯೆನ್ನುವುದು ನಿನಗೆ ತಿಳಿದಿರಬೇಕಲ್ಲವೆ ? ಸರಿ, ಮೋಹನ ಪ್ರಿನ್ಸಿಪಾಲರ ತಂಗಿಯ ಮಗನೆನ್ನುವುದೂ ಗೊತ್ತಷ್ಟೆ ? ಅವನೂ ಸೈಕಾಲಜಿಯನ್ನೇ ಓದುತ್ತಿದ್ದಾನೆ. ಇಬ್ಬರೂ ಸಹಪಾಠಿಗಳು. ಮೋಹನ ಆ ಹುಡುಗಿಯನ್ನು ಮದುವೆಯಾಗಬೇಕೆಂದಿದ್ದಾನೆ. ಈ ಸಂಬಂಧ ಪ್ರಿನ್ಸಿಪಾಲರಿಗಾಗಲೀ ಅವರ ತಂಗಿಗಾಗಲೀ ಇಷ್ಟವಿಲ್ಲ. ಆದರೆ ಮೋಹನ ಅಷ್ಟಕ್ಕೇ ಬಿಡುವ ಹಾಗಿಲ್ಲ. ಅವರಿಬ್ಬರೂ ನಿನ್ನ ಬಳಿಯೇ ಓದುತ್ತಿದ್ದಾರೆ, ನೀನು ಹೇಳಿದರೆ ನಿನ್ನ ಮಾತು ನಡೆಯುತ್ತದೆ. ನೀನು ಇವರಿಬ್ಬರ ಮದುವೆಯ ಪ್ರಯತ್ನವನ್ನು ನಿಲ್ಲಿಸಬೇಕು. ಇದನ್ನು ನಿನಗೆ ಹೇಳೆಂದು ಪ್ರಿನ್ಸಿಪಾಲರೂ ಈ ಬೆಳಿಗ್ಗೆ ಹೇಳಿದರು."

"ಅಲ್ಲವಯ್ಯ ಸುಂದರೇಶ, ನೀನೂ ಜ್ಞಾನಿಯೇ, ನಿಮ್ಮ ಪ್ರಿನ್ಸಿಪಾಲರೂ ಜ್ಞಾನಿಯೇ ! ಆದರೆ ಇವರಿಬ್ಬರ ಪ್ರಣಯವನ್ನು ನಿಲ್ಲಿಸುವ ಕರಡಿ ನಾನಾಗಬೇಕೆ ? ಊಟ ಹಾಕಿ ಸಾಕುತ್ತಿರುವ ಪ್ರಿನ್ಸಿಪಾಲರ ಮಾತು ನಡೆಯದೆ, ಹೆತ್ತ

ತಾಯಿಯ ಮಾತು ನಡೆಯದೆ ಇರುವಾಗ, ಉಪಯೋಗವಿಲ್ಲದ ಸೈಕಾಲಜಿಯನ್ನು ಹೇಳಿಕೊಟ್ಟನೆಂಬ ಕಾರಣದಿಂದ ನನ್ನ ಮಾತು ನಡೆಯುತ್ತದೆಯೆ? ಇವರಿಬ್ಬರ ನಡುವೆ ನಿಂತು ಅವರನ್ನು ದೂರ, ದೂರ ಸರಿಸುವುದು ನನ್ನ ಕೆಲಸವೆ? ಇದಕ್ಕಾಗಿ ಕಾಲೇಜಿನವರು ನನಗೆ ಸಂಬಳ ಕೊಡುತ್ತಾರೆಯೆ? ಅಥವಾ ನಾನು ಇದನ್ನು ಮಾಡುವುದಾದರೂ ಏನು ಚೆನ್ನು? ಅವರಿಬ್ಬರೂ ಪ್ರೀತಿಸಿ ಮದುವೆಯಾಗಿ ಸುಖಪಟ್ಟರೆ ನಾನೇಕೆ ಕರುಬಬೇಕು? ನನಗೆ ಅದರಿಂದ ಸಂತೋಷವೇ? ಪ್ರಿನ್ಸಿಪಾಲರಲ್ಲ, ಯಾರ ದಾಕ್ಷಿಣ್ಯಕ್ಕೂ ನಾನು ಈ ಕೆಲಸ ಮಾಡಲಾರೆ!"

"ಪ್ರಣಯ ಕುರುಡು ಎನ್ನುತ್ತಾರಲ್ಲ, ನಿನಗೆ ಗೊತ್ತೆ? ತರುಣರಾದವರಿಗೆ ಹೊಸ ಹುರುಪು. ಯಾವುದು ಸರಿ, ಯಾವುದು ಪಥ್ಯ ಎನ್ನುವ ಜ್ಞಾನ ಅವರಿಗಿರುತ್ತದೆಯೆ? ಇವರ ಜಾತಿ ಬೇರೆ, ಕುಲ ಬೇರೆ. ಊರು ಬೇರೆ; ಈ ಹುಡುಗಿಗೆ ತಂದೆಯಿಲ್ಲ; ಅನುಕೂಲಸ್ಥರಲ್ಲ. ಹುಡುಗಿ ಮಂಗಳೂರಿನವಳು: ಈ ಕಡೆಯ ಆಚಾರ ವ್ಯವಹಾರ ತಿಳಿಯದು. ಮೇಲಾಗಿ ಓದಿದ ಹುಡುಗಿಯೆಂದರೆ ಮೋಹನನ ತಾಯಿಗೆ ಇಷ್ಟವಿಲ್ಲ."

"ಹೋಗಯ್ಯ, ಅಡುಗೂಲಜ್ಜಿಯೇ ನೀನು, ಹೀಗೆಲ್ಲ ಮೂಗೆಳೆಯುವುದಕ್ಕೆ? ಅವರಿಬ್ಬರೂ ಮಕ್ಕಳೇನಲ್ಲ, ವಯಸ್ಸಿಗೆ ಬಂದವರು; ಸಾಧಕ–ಬಾಧಕಗಳು ಅವರಿಗೆ ತಿಳಿಯದೆ ಇರುತ್ತದೆಯೆ? ಅದಲ್ಲದೆ, ಪ್ರೀತಿಯೆನ್ನುವುದು ಯಾರನ್ನಾದರೂ ಕೇಳಿ ಬರುತ್ತದೆಯೇನಯ್ಯ? ನೀನು ಯಾವ ಹುಡುಗಿಯ ಬಲೆಗಾದರೂ ಬಿದ್ದಿದ್ದರೆ ಗೊತ್ತಿರುತ್ತಿತ್ತು."

"ಎಲ್ಲಿಯೋ ಇಂಗ್ಲೆಂಡ್, ಅಮೆರಿಕಾಗಳಲ್ಲಿ ಇಂಥದು ನಡೆಯಲಿ! ನಮ್ಮ ದೇಶದಲ್ಲಿ ಇದು ಆಗಬಾರದು. ನಮಗೆ ಗೊತ್ತು ಗುರಿಗಳು ಹೆಚ್ಚು. ಅದು ಹೋಗಲಿ, ಮಗಳು ಮದುವೆಗೆ ಇರುವಾಗ ಮಗನಿಗೆ ಮದುವೆ ಮಾಡುತ್ತಾರೇನಯ್ಯ? ತಂಗಿಯ ಮದುವೆಗೆ ಮೊದಲು ಪ್ರಯತ್ನ ಪಡಬೇಕು ಎನ್ನುವ ಪರಿಜ್ಞಾನ ಮೋಹನನಿಗೆ ಇರಬೇಡವೆ? ಅವಳಿಗೆ ಮದುವೆಯಾಗುವುದು ಕಷ್ಟ."

"ಅದು ಏಕೋ?"

"ಹುಡುಗಿ ಓದಿದವಳಲ್ಲ, ಬಣ್ಣ ಸ್ವಲ್ಪ ಗಟ್ಟಿ."

"ಓದಿದ ಹುಡುಗಿಯೆಂದರೆ ತಾಯಿಗೆ ಇಷ್ಟವಿಲ್ಲವೆಂದು ಈಗ ತಾನೇ ಹೇಳಿದೆಯಲ್ಲ?"

"ತಾಯಿಗೆ ಇಷ್ಟವಿಲ್ಲ, ಮಾಡಿಕೊಳ್ಳುವ ಗಂಡನಿಗೆ ಇಷ್ಟವಿದ್ದರೆ...."

"ಇದ್ದರೆ ಏನು ಬಂತು, ಇದ್ದೇ ಇರುತ್ತದೆ!"

"ಅಂತೂ ಮೊದಲು ಆ ಹುಡುಗಿಗೆ ಮದುವೆಯಾಗಬೇಕೆಂದು ಪ್ರಿನ್ಸಿಪಾಲರ ಇಷ್ಟ. ಈ ಹುಡುಗಿಗೂ ತಂದೆಯಿಲ್ಲ, ಪ್ರಿನ್ಸಿಪಾಲರ ಆಸರೆಯಿಲ್ಲದಿದ್ದರೆ ಇವರೂ ತೀರ ಬಡವರೇ. ವರದಕ್ಷಿಣೆ ಕೊಟ್ಟು ನಿಭಾಯಿಸುವ ಶಕ್ತಿಯಿಲ್ಲ. ದೊಡ್ಡ ದೊಡ್ಡ ಕಡೆ ನೋಡುವುದಾಗದು. ತಾಯಿಗೆ ಮಂಗಳೂರಿನ ಹುಡುಗ ಆದರೆ ಒಳ್ಳೆಯದು ಎನ್ನುವ ಚಪಲ...."

"ಪದ್ಮಾವತಿ ಮಂಗಳೂರಿನ ಹುಡುಗಿ, ಈ ಕಡೆಯ ಆಚಾರ ವಿಚಾರ ವ್ಯವಹಾರ ತಿಳಿಯದು ಎಂದೆಯಲ್ಲ!"

"ಹುಡುಗಿ ಹೇಗೂ ಹೊರಗೆ ಹೋಗುವವಳು ತಾನೆ? ಮೋಹನನ ಹೆಂಡತಿಯಾದರೆ ಮನೆಗೇ ಬರುವವಳು."

"ಹೀಗಾಗಿಯೇ, ನಮ್ಮ ಆಚಾರದಲ್ಲಿ ನಮಗೆಲ್ಲ ಅಶ್ರದ್ಧೆ ಬಂದಿರುವುದು! ಹುಡುಗನಿಗೇ ಒಂದು ನ್ಯಾಯ, ಹುಡುಗಿಗೆ ಇನ್ನೊಂದು ನ್ಯಾಯ! ಮಗಳಿಗೆ ಎಂಥ ಗಂಡನಾದರೂ ಪರವಾಗಿಲ್ಲ, ಮಗನಿಗೆ ಮಾತ್ರ ಅನುಕೂಲವಾದ ಹೆಂಡತಿ ಸಿಗಬೇಕು! ಅದಿರಲಿ, ಮಂಗಳೂರಿನ ಹುಡುಗನನ್ನು ಪ್ರಿನ್ಸಿಪಾಲರ ತಂಗಿ ಒಪ್ಪಿಕೊಂಡಿದ್ದಾರೋ?"

"ಒಪ್ಪಿಕೊಂಡಿಲ್ಲ, ನಾನು ಪ್ರಿನ್ಸಿಪಾಲರಿಗೆ ಹೇಳಿದ್ದೇನೆ, ಅವರು ಒಪ್ಪಿದ್ದಾರೆ. ತಂಗಿಗೂ ಹೇಳಿದರೆ ಬೇಡವೆನ್ನುವುದಿಲ್ಲ. ಆದರೆ ಮೋಹನ ಈ ಹುಡುಗಿಯನ್ನೇ ಮದುವೆಯಾಗುತ್ತೇನೆಂದು ಹಠ ಹಿಡಿದರೆ ಈ ಸಂಬಂಧ ಬೆಳೆಸಲು ಆಗುವುದಿಲ್ಲ."

ಸುಂದರೇಶನ ಆಸಕ್ತಿಯಾಗಲೀ ಆತಂಕವಾಗಲಿ ನನಗೆ ಆಶ್ಚರ್ಯವನ್ನುಂಟು ಮಾಡಲಿಲ್ಲ. ಯಾವ ಸ್ವಾರ್ಥವೂ ಇಲ್ಲದೆ ಇಂಥ ಉದ್ಯಮಗಳಲ್ಲಿ ಕೈಹಾಕುವುದು ಅವನ ಸ್ವಭಾವ. ಸಾಮಾನ್ಯವಾಗಿ ಅವನು ಇತರರ ನೆರವನ್ನು ಬಯಸುವುದಿಲ್ಲ; ಈಗ ನನ್ನಲ್ಲಿ ಇವನು ನೆರವನ್ನು ಕೇಳಿದುದು ನನಗೆ ಹೆಮ್ಮೆಯನ್ನೇ ಉಂಟುಮಾಡಿತು. ಆದರೆ ಪರಿಸ್ಥಿತಿ ಇಷ್ಟು ಜಟಿಲವಾಗಿದ್ದೀತೆಂದು ನಾನು ನಿರೀಕ್ಷಿಸಿರಲಿಲ್ಲ. ಪದ್ಮನಾಭಶೆಟ್ಟಿ ಇಲ್ಲಿಗೆ ಕೆಲಸಕ್ಕಾಗಿ ಬರುವುದರಲ್ಲಿ ಏನಾದರೂ ಹೆಚ್ಚಿನ ಅರ್ಥವಿದ್ದೀತೋ? ಪದ್ಮಾವತಿಯು ಇಲ್ಲೇ ಇರಬೇಕೆಂದು ಹಠ ಮಾಡು

ವುದೇನೋ ಈಗ ಅರ್ಥವಾಯಿತು. ಮೋಹನನಿಗಾಗಿ ಇದ್ದರೂ ಇರಬಹುದು ; ತಾಯಿಯ ಬೇನೆಗೆ ಸೈಕಾಲಜಿಯ ನೆರವನ್ನು ಒದಗಿಸಬೇಕೆಂಬುದು ಬರಿಯ ನೆಪವೇ ಇರಬಹುದು ; ಅಥವಾ ಆ ಉದ್ದೇಶ ಮೊದಲಿದ್ದರೂ ಈಗ ಅದು ಗೌಣ ವಾಗಿದ್ದೀತು. ಆಕೆಯ ತಾಯಿ ಮಗಳನ್ನು ಮಂಗಳೂರಿಗೇ ಕರೆಸಿಕೊಳ್ಳಬೇಕೆಂದು ಕಾತರಳಾಗಿದ್ದರೆ, ಆಕೆಗೆ ಈ ಪದ್ಮಾವತೀ ಪ್ರಣಯ ಪ್ರಸಂಗ ತಿಳಿದಿದೆಯೇ ? ಹಾಗಿದ್ದರೆ, ಅವರಿಗೆ ಈ ಸಂಬಂಧ ಇಷ್ಟವಿರದೆ ? ಕಪಟನಾಟಕ ಸೂತ್ರಧಾರಿ ಯಾದ ಸುಂದರೇಶನಿಗೆ ಇವೆಲ್ಲವೂ ತಿಳಿದಿದೆಯೆನ್ನುವುದು ನನ್ನ ಊಹೆ ; ಆದರೆ ಅವನಿಂದ ವಿವರಗಳನ್ನು ಹೊರಡಿಸುವುದು ಸುಲಭವಲ್ಲ. ಪ್ರಿನ್ಸಿಪಾಲರು ನನ್ನ ಸಹಾಯವನ್ನು ಕೇಳಿದರೆಂದು ನನಗೆ ಸಂತೋಷವಾಗಲಿಲ್ಲ ; ಮೊನ್ನೆ ಜರುಗಿದ ಪ್ರಸಂಗದಿಂದ, ಇದು ಮತ್ತೊಂದು ನಿರರ್ಥಕವಾದ ಚಿಂತೆ, ನನಗೆ, ಎನಿಸಿತು.

ಮೋಹನ ಪದ್ಮಾವತಿಯರ ನಡುವೆ ನಾನು ಎಷ್ಟಕ್ಕೂ ತಡೆಯಿಡ ಬಾರದು ಎಂದೇನೋ ನಿಶ್ಚಯ ಮಾಡಿದೆ. ಯುವಜನರ ಸುಖಕ್ಕೆ ಅಡ್ಡಿ ಬಾರದೆಂದೇ ನನ್ನ ನಂಬಿಕೆ. ಅದಲ್ಲದೆ, ಈ ಸಂಬಂಧದಲ್ಲಿ ನನಗೆ ದೋಷ ವೇನೂ ಕಾಣಿಸಲಿಲ್ಲ. ಮೋಹನ ತುಂಬ ಒಳ್ಳೆಯ ಹುಡುಗ ; ಪದ್ಮಾವತಿಯ ವಿಚಾರ ನನಗೆ ಹೆಚ್ಚು ತಿಳಿಯದಾದರೂ ವಿನಯಶಾಲಿನಿ, ಗಂಭೀರೆ, ಮಿತ ಭಾಷಿಣಿ, ಬುದ್ಧಿವಂತೆ ಎಂದೇನೋ ಹೇಳಬಲ್ಲೆ. ಈಗ ಪದ್ಮನಾಭಶೆಟ್ಟಿಯನ್ನು ಕಂಡಿದ್ದೇನಷ್ಟೆ ; ಅವನು ಒಳ್ಳೆಯ ಹುಡುಗನೆಂದೇ ನನ್ನ ಕಲ್ಪನೆ. ಅವನ ಅಭ್ಯುದಯದಲ್ಲಿ ನನಗೆ ಆಸಕ್ತಿ ಇಲ್ಲದೆ ಇರಲಿಲ್ಲ. ಆದರೆ ಪ್ರಿನ್ಸಿಪಾಲರ ತಂಗಿಯ ಮಗಳ ವಿಚಾರ ನನಗೆ ತಿಳಿಯದು. ಅವಳ ಹೆಸರೂ ನನಗೆ ಗೊತ್ತಿರಲಿಲ್ಲ. ಅದಕ್ಕಾಗಿ ಸುಂದರೇಶನನ್ನು ಕೇಳಿದೆ—

"ಏನಯ್ಯ, ಮೋಹನನ ತಂಗಿ ಹೇಗೆ ?"

"ಹೇಗೆ ಎಂದರೆ ?"

"ಸ್ವಭಾವ ಹೇಗೆ ?"

"ಒಳ್ಳೆಯ ಹುಡುಗಿಯೇ ! ಮೋಹನನಿಗಿಂತ ಒಳ್ಳೆಯವಳು. ಬಾಯಿ ತುಂಬ ಮಾತನಾಡುತ್ತಾಳೆ, ಹೊಟ್ಟೆ ತುಂಬ ಊಟ ಮಾಡುತ್ತಾಳೆ, ಮನೆ ಗೆಲಸವೆಲ್ಲ ಮಾಡುತ್ತಾಳೆ, ಓರಣವಂತೆ, ಓದು ಬರಹ ಎಂದು ಕಾಲ ಕಳೆಯು ವುದಿಲ್ಲ. ಸ್ವಲ್ಪ ಸಿಡುಕು, ತಾಯಿಯ ಹಾಗೆ. ಆದರೆ ಅದೇನು ಅಂಥ ಪ್ರಮಾದ

ವಲ್ಲ. ಈಗಿನ ಕಾಲದ ಹುಡುಗಿಯರಂತೆ ಬಣ್ಣದ ಬೀಸಣಿಗೆಯಲ್ಲ. ಬಣ್ಣ ಗಟ್ಟಿಯೆಂದೆನಲ್ಲವೆ ? ಗುಣ ಮುಖ್ಯವೋ ಬಣ್ಣ ಮುಖ್ಯವೋ ? ಆಕಾರ ಸ್ವಲ್ಪ ಕುರೂಪ ಎನಿಸಬಹುದು, ಆದರೆ ಮದುವೆ ಮಾಡಿಕೊಂಡು ಸಂಸಾರ ಮಾಡುವಾಗ ಆಕಾರ ಹೇಗಿದ್ದರೇನು ?"

"ಸರಿಯೆ, ಆದರೆ ಇಲ್ಲಿಯವರೆಗೆ ಮದುವೆ ಆಗದೆ ಇದ್ದುದು ಏಕೆ ?"

"ವರ ನೋಡುವವರು ಯಾರೂ ಇಲ್ಲ ! ಪ್ರಿನ್ಸಿಪಾಲರಿಗೆ ಕೆಲಸ ಹೆಚ್ಚು ; ಇದನ್ನೆಲ್ಲ ತಲೆಗೆ ಹಚ್ಚಿಕೊಳ್ಳುವುದಿಲ್ಲ. ಆದರೆ ಅವರಿಗೆ ಆಸಕ್ತಿಯಿಲ್ಲವೆಂದಲ್ಲ ! ಆಗಾಗ ಇದೊಂದು ಯೋಚನೆಯೆಂದು ಹೇಳುತ್ತಿರುತ್ತಾರೆ. ಏನೋ ನಾಲ್ಕು ಜನರನ್ನು ನೋಡಿ, ಕೇಳಿ, ಪ್ರಸ್ತಾಪ ಮಾಡುವುದು ಅವರ ಸ್ವಭಾವದಲ್ಲಿಲ್ಲ. ಇನ್ನು ಹುಡುಗಿಯ ತಾಯಿ ; ಆಕೆ ಹೆಂಗಸು, ಏನು ಮಾಡುತ್ತಾರೆ ? ತಂದೆ ಇಲ್ಲ. ಮೋಹನ ಇನ್ನೂ ಹುಡುಗ, ಜವಾಬ್ದಾರಿ ತೆಗೆದುಕೊಳ್ಳುವವರು ಯಾರು ? ಅದಕ್ಕಾಗಿಯೇ ತಾಯಿ ನನ್ನನ್ನು ಮುಂದೆ ಬಿಡುತ್ತಾರೆ."

ಸುಂದರೇಶನೇನೋ ಅನಾಥ ಬಂಧು, ಕಾರುಣ್ಯ ಸಿಂಧು. ಆದರೆ ಅವನಿಗೆ ಜವಾಬ್ದಾರಿ ವಹಿಸುವಷ್ಟು ವಿವೇಕ ಇಲ್ಲವೆಂದು ಎಲ್ಲರೂ ಬಲ್ಲರು. ಅವನ ಮಾತು ಎಂದರೆ ಜನಕ್ಕೆ ಹಾಸ್ಯವಷ್ಟೇ ವಿನಾ ಶ್ರದ್ಧೆಯಿಲ್ಲ. ಅಂಥವನು ವರಾನ್ವೇಷಣೆ ಮಾಡುತ್ತ ಹೊರಟರೆ ಹೇಗೆ ? ಮಾತಿನಲ್ಲಾದರೂ ನಾಜೂಕಿದೆಯೇ ? ಎಡ್ಡಾದಿಡ್ಡಿ ಮಾತೇ ! ಸುಂದರೇಶ ಹಲವಾರು ವರ್ಷಗಳಿಂದ ವರ ಹುಡುಕುತ್ತಿದ್ದಾನಂತೆ ; ಅವನ ಹುಡುಕಾಟ ಹಣ್ಣಾಗದಿರುವುದು ಹೇಗೆಂದು ಕೇಳಬೇಕಾಗಿಲ್ಲವಷ್ಟೆ ! ಅದು ಹೋಗಲಿ, ಈ ಹುಡುಕಾಟದಿಂದ ಹುಡುಗಿಗೆ ಅಪಕೀರ್ತಿ ಬರದಿದ್ದರೆ ಅದೇ ದೊಡ್ಡ ಮಾತು !"

"ಎಂದರೆ ಪದ್ಮನಾಭಶೆಟ್ಟಿ ನಿನ್ನ ಗಿರಾಕಿಯೋ ?"

"ಹೌದು, ದಾರಿಯಲ್ಲಿ ನೋಡಿದೆ. ಅವನು ತಂದ ಪತ್ರ ನನಗೆ ತಿಳಿದಿದ್ದ ವಕೀಲರದೇ. ಪ್ರಿನ್ಸಿಪಾಲರ ಮನೆಗೆ ಅವನನ್ನು ನಾನೇ ಕರೆದುಕೊಂಡು ಹೋದೆ. ಅವನನ್ನು ಅವರಿಗೆ ಪರಿಚಯ ಮಾಡಿಸಿದವನೂ ನಾನೇ. ಅವರೇ ಈ ಪ್ರಸಂಗವನ್ನು ಎತ್ತಿ ಮಾತು ಬೆಳೆಸುತ್ತಾರೋ ಎಂದು ನೋಡಿದೆ. ಅವರಿಗೆ ಅದರಲ್ಲಿ ಆಸಕ್ತಿ ಇದ್ದಂತೆ ಕಾಣಲಿಲ್ಲ. ದಮಯಂತಿಯನ್ನು ಕೇಳಿದೆ ; ದಮಯಂತಿ ಎಂದರೆ ಮೋಹನನ ತಂಗಿ. ಆಗಬಹುದು ನೋಡಿ ಎಂದಳು. ಮತ್ತೆ,

ನೀನು ಪ್ರಿನ್ಸಿಪಾಲರ ಮನೆಯಲ್ಲಿದ್ದಾಗ ನಾನು ಬಂದಿದ್ದೆನಲ್ಲ; ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೇ. ಪದ್ಮನಾಭಶೆಟ್ಟಿ ಬಂದಾಗ ಪ್ರಿನ್ಸಿಪಾಲರ ತಂಗಿ ಅವನನ್ನು ನೋಡಿದರಂತೆ; ಎಲ್ಲೋ ನೋಡಿದ ಹಾಗೆಯೇ ಇದೆ ಎಂದು ಕೊಂಡರಂತೆ. ನಾನು ಆಕೆಯನ್ನು ನೋಡಿ "ಈ ಹುಡುಗನಿಗೆ ಕೆಲಸ ಕೊಡಿಸು ವಂತೆ ನಿಮ್ಮ ಅಣ್ಣನಿಗೆ ಹೇಳಿ. ಒಳ್ಳೆಯ ಹುಡುಗ, ಮಗಳಿಗೆ ವರವಾಗ ಬಹುದು" ಎಂದೆ. ಆಗ ಪ್ರಿನ್ಸಿಪಾಲರನ್ನು ಕಾಣಲಾಗಲಿಲ್ಲ, ಬಂದುಬಿಟ್ಟೆ. ಮತ್ತೆ ಮರುದಿನ ಬೆಳಿಗ್ಗೆ ಅವರನ್ನು ಕಂಡು ಈ ವಿಚಾರ ಹೇಳಿದೆ; ಆ ವೇಳೆ ಗಾಗಲೇ ತಂಗಿ ಅವರಿಗೆ ಹೇಳಿದ್ದಳು. ವರ ಸುಲಭವಾಗಿ ಸಿಕ್ಕನೆಂದು ಅವರಿಗೂ ಸಂತೋಷವಾಯಿತು."

ಈಗ ಪ್ರಿನ್ಸಿಪಾಲರ ಪ್ರಶ್ನೆಯು ಒಗಟು ಬಿಟ್ಟಿತು. ನನ್ನ ಸಲಹೆಯನ್ನು ಕೇಳಿದ್ದುದನ್ನೇ ಮರೆತಂತೆ ಅವರೂ ನಟಿಸಿದರು ಎಂದು ಕಾಣುತ್ತದೆ. ಹುಡುಗವರ ನಾದಾನೆಂಬ ನಿರೀಕ್ಷೆಯಲ್ಲಿ ವಿಶ್ವನಾಥರಾಯರ ಸಮ್ಮತಿಯನ್ನೂ ಮರೆತಿದ್ದರು! ಆದರೆ ಕೆಲಸಕ್ಕೂ ಇದಕ್ಕೂ ಗಂಟುಹಾಕುವುದು ತಪ್ಪಲ್ಲವೆ? ಕೆಲಸಕ್ಕೆ ಸೇರಿದ ಮೇಲೆ ಹುಡುಗ ಮದುವೆಯಾಗುವುದಿಲ್ಲ ಎಂದರೆ ಏನು ಮಾಡುತ್ತಾರೆ? ಇವ ರಿಗೆ ನಿರಾಶೆ, ಅವನಿಗೆ ಕಿರಿ ಕಿರಿ! ಈ ಸುಂದರೇಶನೇನೋ ತಾನು ಒಪ್ಪಿಸು ತ್ತೇನೆಂದು ಪ್ರಿನ್ಸಿಪಾಲರಿಗೆ ಭರವಸೆ ಕೊಟ್ಟಿರಬಹುದು, ಆದರೆ ಅವನ ಮಾತು ನಡೆಯುವುದು ಯಾವ ನಂಬಿಕೆ? ನಾನು "ಹಾಗಿದ್ದರೆ, ಆ ಹುಡುಗನಿಗೆ ಕೆಲ ಸದ ಕಾಗದವನ್ನು ಕಳುಹಿಸಿದ್ದಾರೋ?" ಎಂದು ಕೇಳಿದೆ. ಸುಂದರೇಶ—

"ಹುಡುಗನಿಗೆ ನೇರವಾಗಿ ಈ ವಿಚಾರ ಬರೆದಿಲ್ಲ. ಆದರೆ ಆ ವಕೀಲರಿಗೆ ಪ್ರಿನ್ಸಿಪಾಲರು ಬರೆದಿದ್ದಾರೆ, ಅವರಿಂದ ಅಲ್ಲಿ ಪ್ರಸ್ತಾಪ ನಡೆದು ಇಷ್ಟರಲ್ಲಿಯೇ ಕಾಗದ ಬರುತ್ತದೆ."

"ಹುಡುಗನಿಗೆ ಕೆಲಸದಲ್ಲಿ ಇಷ್ಟವಿಲ್ಲದಿದ್ದರೆ?"

"ಇಷ್ಟವಿಲ್ಲದೆ ಏನು? ಇಷ್ಟವಿಲ್ಲದೆ ಇಲ್ಲಿಯವರೆಗೆ ಇಂಟರ್‌ವ್ಯೂಗೆ ಬರುತ್ತಾನೆಯೆ?"

"ಅವನು ಇಲ್ಲಿಗೆ ಬಂದದ್ದು ತನ್ನ ತಂಗಿಯನ್ನು ಮಂಗಳೂರಿಗೆ ಕರೆ ದೊಯ್ಯಲು. ಕೆಲಸದಲ್ಲಿ ಅವನಿಗೆ ಅಷ್ಟಾಗಿ ಇಷ್ಟವಿಲ್ಲ."

"ತಂಗಿಯ ವಿಚಾರ ಅವನಾಗಿ ನನಗೇನೂ ಹೇಳಲಿಲ್ಲ. ನಾನೇ ಅವನಿಗೆ

ಮೋಹನ–ಪದ್ಮಾವತಿಯರು ಒಟ್ಟಿಗೆ ಕಾಲ ಕಳೆಯುತ್ತಿರುವ ಸುದ್ದಿ ಹೇಳಿದೆ. ಪದ್ಮಾವತಿ ಇಲ್ಲಿದ್ದು ಕೆಟ್ಟ ಹೆಸರನ್ನು ಪಡೆಯುತ್ತಿದ್ದಾಳೆಂದು ತಿಳಿಸಿದೆ. ಅದರಿಂದ ಅವನು ಚಿಂತೆಗೊಳಗಾದ. ಪದ್ಮಾವತಿಯನ್ನು ಮಂಗಳೂರಿಗೇ ಕರೆದೊಯ್ಯುವುದು ಒಳ್ಳೆಯದೆಂದು ನಾನು ಹೇಳಿದಾಗ, ಅವನು ಸೈಕಾಲಜಿಯನ್ನೇ ಓದಬೇಕೆಂದು ಆಕೆ ಹಠ ಹಿಡಿದಿದ್ದಾಳೆಂದು ತಿಳಿಸಿದ. ನಿನ್ನನ್ನು ಕಂಡು ಆಕೆಯನ್ನು ಹಿಂದಕ್ಕೆ ಕಳುಹಿಸಬೇಕೆಂದು ಕೇಳು ಎಂದು ನಾನೇ ತಿಳಿಸಿದೆ!"

ಈ ಹಿನ್ನೆಲೆ ನನ್ನ ಊಹೆಗೂ ಸಿಲುಕಿರಲಿಲ್ಲ. ಪದ್ಮನಾಭಶೆಟ್ಟಿ ನನ್ನನ್ನೇ ಅರಸಿಕೊಂಡು ಬಂದುದು ಏಕೆಂದು ಕೆಲವು ಸಾರಿ ತಲೆ ಕೆಡಿಸಿಕೊಂಡಿದ್ದೆ. ಅದರಲ್ಲಿ ಸುಂದರೇಶನ ಪಾತ್ರವಿದ್ದುದೂ ತಿಳಿಯಿತಷ್ಟೆ, ಆದರೆ ಅವನ ಪ್ರೇರಕ ಪಾತ್ರ ಈಗಲೇ ತಿಳಿದದ್ದು! ತನ್ನ ಯೋಚನೆಗೆ ಅನುವಾಗಬೇಕೆಂದು ಸುಂದರೇಶ ಪದ್ಮಾವತಿಯ ಬಗ್ಗೆ ಅಪವಾದವನ್ನು ಹೊರಿಸಿದ್ದು ತಪ್ಪಲ್ಲವೇ?

"ಏನಯ್ಯ ನೀನು ಗೌರವಸ್ಥನೆಂದುಕೊಂಡಿದ್ದೆ. ಸುಳ್ಳುಸುಳ್ಳೇ ಆ ಹುಡುಗಿಗೆ ಆ ಕೆಟ್ಟ ಹೆಸರನ್ನು ಕಟ್ಟಬಹುದೇ ಅದೂ ಅಣ್ಣನ ಮುಂದೆ ತಂಗಿಯ ಬಗ್ಗೆ ಹೀಗೆ ಹೇಳಬಹುದೆ? ಅವರೆಲ್ಲ ಏನೆಂದುಕೊಂಡಾರು, ಮನಸ್ಸಿಗೆ ಎಷ್ಟು ವ್ಯಥೆಯಾದೀತು? ಅದನ್ನೇನಾದರೂ ಗಮನಿಸಿದೆಯಾ?"

"ಹುಡುಗಿಯದು ತಪ್ಪಲ್ಲವೆ? ತನ್ನ ಮನೆಯವರಿಗೂ ತಿಳಿಸದೆ, ಹುಡುಗನ ಮನೆಯವರಿಗೂ ತಿಳಿಸದೆ, ಅವನನ್ನು ತನ್ನ ಬಲೆಗೆ ಸೆಳೆದುಕೊಂಡುದು ಅವಳ ತಪ್ಪಲ್ಲವೇ?"

"ಹುಡುಗನ ತಪ್ಪೇ ಯಾಕಿರಬಾರದು? ನಿನಗೆ ತಿಳಿಯದು ಸುಂದರೇಶ, ಇಂಥ ವಿಚಾರಗಳಲ್ಲಿ ಇಬ್ಬರ ಹೊಣೆಯೂ ಸಮನಾಗಿರುತ್ತದೆ. ಆದರೆ ನೀನು ಕೆಟ್ಟ ಹೆಸರನ್ನು ಕಟ್ಟಬೇಕೆಂದರೆ ಮೋಹನನಿಗೇ ಕಟ್ಟಬೇಕು. ನಮ್ಮ ದೇಶದಲ್ಲಿ ಹುಡುಗಿಯರು ಸಾಮಾನ್ಯವಾಗಿ ಹಿಂದೆಗೆಯುತ್ತಾರೆ; ತಾವಾಗಿ ಮುಂದೆ ಬರುವುದಿಲ್ಲ. ಆ ಧೈರ್ಯ ಗಂಡಸಿಗೇ ಮೀಸಲು!

"ಅದು ಹೇಗಾದರೂ ಇರಲಿ, ನೀನು ಪ್ರಿನ್ಸಿಪಾಲರು ತಿಳಿಸಿದುದನ್ನು ವಿಚಾರ ಮಾಡುತ್ತೀಯೋ ಹೇಗೆ?"

"ಇಲ್ಲವಯ್ಯ ನನ್ನಿಂದ ಸಾಧ್ಯವಿಲ್ಲ. ಮೊದಲಾಗಿ, ನನಗೂ ಈ ವಿಚಾರಕ್ಕೂ ಏನೂ ಸಂಬಂಧವಿಲ್ಲ. ಎರಡನೆಯದಾಗಿ, ಹೀಗೆ ಪ್ರಣಯಕ್ಕೆ ಅಡ್ಡ

ಬರಲೆತ್ನಿಸುವುದು ತಪ್ಪು. ಕಡೆಯದಾಗಿ ಒಂದು ವೇಳೆ ಪ್ರಯತ್ನಪಟ್ಟರೂ ಅದು ಸಫಲವಾದೀತೆಂಬ ನಂಬಿಕೆಯಿಲ್ಲ. ನನಗೂ ಪಶ್ಚಾತ್ತಾಪ, ಪ್ರಿನ್ಸಿಪಾಲರಿಗೂ ಪ್ರಯೋಜನವಿಲ್ಲ!"

ಸುಂದರೇಶ ಏನನ್ನೂ ಹೇಳದೆ ಹೊರಟುಹೋದ. ಅವನಿಗೆ ನಿರಾಶೆಯಾಗಿರಬಹುದು, ಅಸಮಾಧಾನವಾಗಿರಬಹುದು. ಆದರೆ ಈ ನಾಟಕದಲ್ಲಿ ಅವನೇ ನಿರ್ದೇಶಕ, ನಿರ್ಮಾಪಕ, ಕಥೆಗಾರ, ಸೂತ್ರಧಾರ, ವಿಮರ್ಶಕ ಆಗಿರುವುದರಿಂದ ಈ ನಿರಾಶೆ ಅಸಮಾಧಾನಗಳಿಗೆ ಅಂಜಲಾರ; ತನ್ನ ಉದ್ಯಮವನ್ನು ಕೈಬಿಡಲಾರ.

೬

ಆ ದಿನ ಕಾಲೇಜಿಗೆ ಹೋದವನು ಏನೋ ನೆಪಮಾಡಿಕೊಂಡು ಮೋಹನನಿಗೆ ಹೇಳಿಕಳುಹಿಸಿದೆ. ಅವನು ಬಂದ. ಕೋಣೆಯಲ್ಲಿ ನಾವಿಬ್ಬರೇ ಇದ್ದುದರಿಂದ "ಮೋಹನ, ನಿನ್ನ ಬಳಿ ಒಂದು ವಿಚಾರ ಮಾತನಾಡಬೇಕಾಗಿದೆ. ಅದನ್ನು ನಿನ್ನಲ್ಲಿ ಪ್ರಸ್ತಾಪ ಮಾಡುವ ಅಧಿಕಾರ ನನಗೇನೂ ಇಲ್ಲ. ನಾನು ಅಧಿಕ ಪ್ರಸಂಗಿಯೋ. ಆದರೂ ಈ ವಿಚಾರ ಬಹಳ ಕಾಲದವರೆವಿಗೆ ನನ್ನ ಮನಸ್ಸನ್ನು ಆಕ್ರಮಿಸಿದೆಯಾಗಿ ನಿನ್ನಲ್ಲಿ ಪ್ರಸ್ತಾಪಿಸಬೇಕೆಂದಿದ್ದೇನೆ. ತಪ್ಪು ತಿಳಿದುಕೊಳ್ಳಬೇಡ. ಇದನ್ನು ಕೇಳಿದ ಮೇಲೆ ಚರ್ಚೆ ಮಾಡುವುದು ನಿನಗಿಷ್ಟವಿಲ್ಲದಿದ್ದರೆ ಹೇಳಿಬಿಡು; ನಾನೇನೂ ತಪ್ಪಾಗಿ ತಿಳಿದುಕೊಳ್ಳುವುದಿಲ್ಲ. ನನ್ನ ಸ್ವಭಾವ ನಿನಗೆ ಗೊತ್ತಷ್ಟೆ!" ಎಂದೆ. ಮೋಹನ—

"ಅಷ್ಟೆಲ್ಲ ಪ್ರಸ್ತಾವನೆ ಯಾಕೆ, ಸಾರ್? ನನ್ನ ಮೇಲೆ ನೀವು ತುಂಬ ವಿಶ್ವಾಸವಿಟ್ಟಿದ್ದೀರಿ; ನನ್ನ ವಿಚಾರ ಯಾವುದೇ ಆದರೂ ಅದನ್ನು ನನ್ನೊಂದಿಗೆ ಹೇಳಿ ನನಗೆ ಮಾರ್ಗದರ್ಶನ ಮಾಡುವ ಅಧಿಕಾರ ನಿಮಗಿಲ್ಲವೆ? ನಿಮ್ಮೊಡನೆ ಎಂದಾದರೂ ನನ್ನ ಅಸಮಾಧಾನವನ್ನು ಸೂಚಿಸಿದ್ದೇನೆಯೇ?"

"ನಿನ್ನೊಡನೆ ಈವರೆಗೆ ಎಂದೂ ಇಂಥ ವಿಚಾರ ಮಾತನಾಡಿರಲಿಲ್ಲವಲ್ಲ? ಇರಲಿ, ನಿನಗೆ ಸುಂದರೇಶ ಗೊತ್ತೋ?"

"ಯಾರು, ಆಚೆ ಬೀದಿಯ ವಿಶ್ವಬಂಧುವೇ ಸಾರ್? ಹೌದು, ಅವರು

ನಮ್ಮ ಮನೆಗೆ ಬರುತ್ತಿರುತ್ತಾರೆ. ನಮ್ಮ ತಾಯಿಗೂ ಸೋದರಮಾವನಿಗೂ ತುಂಬ ಹಿತಚಿಂತಕರು.

"ಸರಿಯೆ, ಅವನು ಇವತ್ತು ಬೆಳಿಗ್ಗೆ ಇಲ್ಲಿಗೆ ಬಂದಿದ್ದ"

"ನನ್ನ ವಿಷಯ ಮಾತನಾಡುವುದಕ್ಕೇ ಸಾರ್?"

"ಹೌದು, ನಿನಗೇನಾದರೂ ಹೇಳಿದನೇನು?"

"ಹೌದು ಸಾರ್, ಈ ಬೆಳಿಗ್ಗೆಯೇ ನಮ್ಮ ಮನೆಗೆ ಬಂದಿದ್ದರು. ನನ್ನ ಶೀಲದ ಬಗ್ಗೆ ನಿಮಗೆ ತುಂಬ ಅಸಮಾಧಾನವಾಗಿದೆಯೆಂದು ತಿಳಿಸಿದರು."

ನನಗೆ ಆಶ್ಚರ್ಯವಾಯಿತು. ಸುಂದರೇಶನ ಆಳ—ಅಗಲ ನನಗೆ ತಿಳಿದಿರ ಲಿಲ್ಲವೆಂದಲ್ಲ. ಆದರೆ ಹೀಗೆ ಎಡೆತಡೆಯಿಲ್ಲದೆ ಸುಳ್ಳು ಹೇಳಿ ತನ್ನ ಕೆಲಸ ಸಾಧಿಸಿಕೊಳ್ಳಲು ಯತ್ನಿಸುತ್ತಾನೆಂದು ಭಾವಿಸಿರಲಿಲ್ಲ. ಪದ್ಮನಾಭಶೆಟ್ಟಿಯ ಮುಂದೆ ಇಷ್ಟು ಅಳುಕದೆ ಅವನ ತಂಗಿಯ ಶೀಲದ ಬಗ್ಗೆ ಎತ್ತಿ ಆಡಿದ; ಈಗ ಮೋಹನನ ಮುಂದೆ ನನ್ನ ಆಕ್ಷೇಪವನ್ನು ಆಡಿ ತೋರಿಸಿದನಲ್ಲ! ಎಷ್ಟು ಧೈರ್ಯ ಇವನಿಗೆ! ಎನಿಸಿತು.

"ಮೋಹನ, ಅವನ ಮಾತನ್ನು ನಂಬಬೇಡ. ನಿನ್ನ ಶೀಲದ ಬಗ್ಗೆ ನಾನು ಅಸಮಾಧಾನ ಪಡುವುದಕ್ಕೆ ಯಾವ ಕಾರಣವೂ ಇಲ್ಲ, ಅಥವಾ ಅದರ ಗೋಜಿಗೆ ನಾನು ಹೋಗುವವನೂ ಅಲ್ಲ! ಊರವರ ಶೀಲಗಳಿಗೆ ನಾನು ಹೊಣೆಯಲ್ಲ. ನಾನು ಅದರ ಬಗ್ಗೆ ಯೋಚನೆಯನ್ನೂ ಮಾಡುವವನಲ್ಲ. ಈ ದಿನ ಬೆಳಿಗ್ಗೆ ಸುಂದರೇಶ ನಮ್ಮ ಮನೆಗೆ ಬಂದಿದ್ದವನು ಕೆಲವು ವಿವರಗಳನ್ನು ಹೇಳಿದ. ನಾನು ನಿಮ್ಮ ಸೋದರಮಾವನಿಗೆ ನೆರವಾಗಬೇಕೆಂದು ಕೇಳಿದ. ಈ ವಿಚಾರವನ್ನು ನಿನಗೆ ತಿಳಿಸಿಬಿಟ್ಟರೆ ನನ್ನ ಕೆಲಸ ಮುಗಿಯಿತು. ನೀನು ಏನು ಮಾಡಬೇಕೆಂದು ಹೇಳುವುದು ನನ್ನ ಕೆಲಸವಲ್ಲ. ಅದರಲ್ಲಿ ನನಗೆ ಆಸಕ್ತಿಯೂ ಇಲ್ಲ. ನೀನು ಏನು ಮಾಡಿದರೂ ನನಗೆ ನಿನ್ನ ಬಗ್ಗೆ ಇರುವ ಅಭಿಪ್ರಾಯವೇನೂ ಬದಲಾಗುವುದಿಲ್ಲ. ನೀನು ಮತ್ತು ಪದ್ಮಾವತಿ ಮದುವೆಯಾಗಬೇಕೆಂದಿದ್ದೀರಂತೆ. ಇದು ಸುಂದ ರೇಶನ ಸುದ್ದಿ. ಅದು ನಿಮ್ಮ ತಾಯಿಗೂ ಪ್ರಿನ್ಸಿಪಾಲರಿಗೂ ಇಷ್ಟವಿಲ್ಲವಂತೆ, ಇದೂ ಅವನದೇ ಸುದ್ದಿ. ಮೊದಲು ನಿನ್ನ ತಂಗಿಯ ಮದುವೆ ಮಾಡಬೇಕೆಂದಿ ದ್ದಾರಂತೆ, ಪದ್ಮಾವತಿಯ ಅಣ್ಣ ಪದ್ಮನಾಭಶೆಟ್ಟಿಯೆನ್ನುವ ಹುಡುಗನ ಮೇಲೆ ಪ್ರಿನ್ಸಿಪಾಲರು ಮನಸ್ಸಿಟ್ಟಿದ್ದಾರಂತೆ. ನೀನು ಪದ್ಮಾವತಿಯನ್ನು ಮದುವೆಯಾಗ ದಿದ್ದರೆ ಮಾತ್ರ ಈ ಪ್ರಸ್ತಾಪ ಸಾಧ್ಯವಂತೆ. ಇದೂ ಸುಂದರೇಶನ ಸುದ್ದಿಯೇ.

ನಿಜವೆಷ್ಟೋ ಸುಳ್ಳೆಷ್ಟೋ ತಿಳಿಯದು !

ಮೋಹನ ಸುಮ್ಮನೆ ಕೇಳುತ್ತ ಕುಳಿತಿದ್ದ ; ಮಾತನಾಡಲಿಲ್ಲ. ನಾನೇ ಮುಂದುವರೆಸಿದೆ. "ಅದಕ್ಕೆ ನಿನಗೆ ಹೇಳೆಂದು ಪ್ರಿನ್ಸಿಪಾಲರು ಹೇಳಿದ್ದಾರಂತೆ. ಈ ಸುದ್ಧಿಯನ್ನೂ ಸುಂದರೇಶನೇ ತಂದದ್ದು. ನಾನು ಹೇಳುವುದಿಲ್ಲವೆಂದು ಹೇಳಿ ಕಳುಹಿಸಿದ್ದೇನೆ. ಆದರೂ ನಿನ್ನ ಕಿವಿಯಲ್ಲೂ ಒಂದು ಮಾತು ಹಾಕಿಬಿಡುವ ಎಂದುಕೊಂಡೆ."

"ಪದ್ಮನಾಭಶೆಟ್ಟಿ ನಿಮಗೆ ಗೊತ್ತೇ ಸಾರ್ ?"

"ಗೊತ್ತು. ಗೊತ್ತು ಎಂದರೆ ನಮ್ಮ ಕಾಲೇಜಿಗೆ ಇಂಟರ್‌ವ್ಯೂಗೆ ಬಂದಿದ್ದಾಗ ನನ್ನನ್ನೂ ಕಂಡಿದ್ದ. ಅದಕ್ಕೆ ಮೊದಲು ಅವನನ್ನು ಕಂಡಿರಲಿಲ್ಲ. ನೀನು ಅವನನ್ನು ನೋಡಿದೆಯಾ, ಹೇಗೆ ?"

"ನೋಡಿದ್ದೇನೆ ಸಾರ್. ಪದ್ಮಾವತಿಯ ಜೊತೆಗೇ ಕಾಲೇಜಿಗೆ ಬಂದಿದ್ದರು. ಅವರು ಕೆಲಸಕ್ಕೆ ಇಂಟರ್‌ವ್ಯೂಗೆ ಬಂದಿರುವುದಾಗಿಯೂ ತಿಳಿಯಿತು."

"ನಿನ್ನ ತಂಗಿಗೆ ಒಳ್ಳೆಯ ಜೋಡಿಯೆಂದು ಕಂಡುಬಂದಿತೆ ?"

"ಅದರ ಆಲೋಚನೆ ನಾನು ಮಾಡಲಿಲ್ಲ ಸಾರ್. ಅವರಿಗೆ ಸದ್ಯಕ್ಕೆ ಮದುವೆಯಾಗುವ ಯೋಚನೆ ಇಲ್ಲವೆಂದು ಪದ್ಮಾವತಿಯಿಂದ ತಿಳಿಯಿತು. ಈ ಮಾತು ಬಂದಿದ್ದು ಅವರ ತಾಯಿಯ ಬೇನೆ ವಿಚಾರ ಮಾತಿಗೆ ಬಂದಾಗ."

"ಅವರ ತಾಯಿಗೆ ಏನು ಬೇನೆಯಂತೆ ?"

"ಸೈಕೋಸೊಮ್ಯಾಟಿಕ್ ಎಂದು ಈಗ ಅಲ್ಲಿನ ವೈದ್ಯರು ನಿರ್ಧರಿಸಿದ್ದಾರಂತೆ. ಮಂಗಳೂರಿನಲ್ಲಿ ಇದಕ್ಕೆ ಅನುಕೂಲವಾದ ವೈದ್ಯ ದೊರೆಯುವುದಿಲ್ಲವಂತೆ. ಆದರೆ ಬೆಂಗಳೂರಿಗೆ ಬರುವುದಕ್ಕೆ ಅವರಿಗೆ ಇಷ್ಟವಿಲ್ಲವಂತೆ."

"ಪದ್ಮಾವತಿ ಸೈಕಾಲಜಿ ಓದಿ ಚಿಕಿತ್ಸೆ ಮಾಡಬೇಕೊ ?" ಎಂದು ನಾನು ನಗುತ್ತ ಕೇಳಿದೆ. ಮೋಹನ ಏನೂ ಉತ್ತರ ಕೊಡಲಿಲ್ಲ. ಅವರ ಮನೆಯಲ್ಲಿ ಪದ್ಮನಾಭಶೆಟ್ಟಿಯ ವಿಚಾರ ಬಂದಿತೋ ಎಂದು ಮೋಹನನನ್ನು ಕೇಳುವ ಮನಸ್ಸಾಯಿತು. ಆದರೆ ನಾನಾಗಿ ಅವರ ಮನೆಯ ವಿವರಗಳನ್ನೆಲ್ಲ ಕೆದಕುವುದು ಸಭ್ಯತೆಯಲ್ಲವೆಂದುಕೊಂಡು ಸುಮ್ಮನಾದೆ. ಸ್ವಲ್ಪ ಹೊತ್ತು ಮೌನ. ಅನಂತರ ನಾನೇ "ಅಷ್ಟೇ ಮೋಹನ, ನಿನಗೆ ಈ ವಿಚಾರ ತಿಳಿದಿರಬೇಕೆಂದು ನಿನ್ನಲ್ಲಿ ಪ್ರಸ್ತಾಪಿಸಿದೆ, ಅಷ್ಟೆ. ಈ ಪ್ರಸಂಗ ನನಗೂ ಗೊತ್ತಿದೆಯೆಂದು ನಿನಗೆ ತಿಳಿದಿರ

ಬೇಕು ಎನಿಸಿತು. ಆದರೆ ಇದರಲ್ಲಿ ನನ್ನ ಅಭಿಪ್ರಾಯಗಳು ಯಾವುದೂ ಇಲ್ಲ. ನಿನಗೆ ಸರಿತೋರಿದಂತೆ ನೀನು ಮಾಡುತ್ತೀಯೆ. ನಿನಗೇನು ಪ್ರಪಂಚ ತಿಳಿಯದೆ? ಆದರೆ ಒಂದು ಮಾತು, ಸುಂದರೇಶನ ಉದ್ದೇಶ ನಿನಗೆ ತಿಳಿದಿದೆಯಲ್ಲ?"

"ಏನು ಸಾರ್?"

"ಪದ್ಮನಾಭಶೆಟ್ಟಿಯನ್ನು ನಿನ್ನ ತಂಗಿಗೆ ಗಂಟುಹಾಕಬೇಕೆನ್ನುವುದು. ತನ್ನ ಉದ್ದೇಶ ಕೈಗೂಡಲು ಸುಂದರೇಶ ಏನನ್ನು ಬೇಕಾದರೂ ಮಾಡುತ್ತಾನೆ, ಯಾರ ಮುಂದೆ ಏನನ್ನಾದರೂ ಹೇಳುತ್ತಾನೆ. ಗುರಿ ಮುಟ್ಟಿದರೆ ಆಯಿತು; ದಾರಿ ಯಾವುದಾದರೂ ಚಿಂತೆಯಿಲ್ಲ. ಅವನ ಬಾಯಿ ಒಡಕು ಬಾಯಿ; ಮಾತನಾಡಿ ಜಗಳ ತರುವುದೂ ಉಂಟು. ಅದನ್ನು ತಿಳಿದಿರಬೇಕು. ಅವನ ಮಾತನ್ನು ನಂಬಿ ಯಾರೊಂದಿಗಾದರೂ ವೈಮನಸ್ಯ ಬೆಳೆಸಿಕೊಂಡೀಯೆ!"

"ಸರಿ ಸಾರ್. ಆದರೆ ನೀವು ನನ್ನ ವಿಚಾರದಲ್ಲಿ ತಪ್ಪಾಗಿ ತಿಳಿದುಕೊಳ್ಳಬಾರದು. ಪದ್ಮಾವತಿಯ ಬಗ್ಗೆ ನಮ್ಮ ತಾಯಿಗೇನೋ ಯಾವ ಬಗೆಯ ಸ್ಪಷ್ಟ ಅಭಿಪ್ರಾಯವೂ ಇದ್ದ ಹಾಗೆ ಇಲ್ಲ. ನಾನಿನ್ನೂ ಅವರಿಗೆ ಹೇಳಿಲ್ಲ; ಆದರೆ ಹೇಳಿದರೆ ಒಪ್ಪಿಯಾರು ಎನ್ನುವ ವಿಶ್ವಾಸ ನನಗುಂಟು. ನಮ್ಮ ಸೋದರಮಾವನೇನೋ ಈ ವಿಚಾರದಲ್ಲಿ ಯಾವ ಆಸಕ್ತಿಯನ್ನೂ ತೋರಿಸುವುದಿಲ್ಲ. ಮಧ್ಯೆ ಈ ಸುಂದರೇಶ ಅವರು ಏನು ಪಾತ್ರ ವಹಿಸುತ್ತಾರೋ ತಿಳಿಯದು!"

"ಅವನಿಗೂ ನಿಮ್ಮ ಗೃಹಕೃತ್ಯಕ್ಕೂ ಏನು ಸಂಬಂಧ? ಅವನು ತಲೆ ಹಾಕಬಾರದು. ಆದರೆ ಅವನದ್ದು ವಿಚಿತ್ರ ಸ್ವಭಾವ. ನಿಷ್ಠೂರವಾಗಿ ಮಾತನಾಡಿದರೂ ಪ್ರಯೋಜನವಿಲ್ಲ; ಬಯ್ದರೂ ಮತ್ತೆ ಬರುತ್ತಾನೆ. ನಾಜೂಕಾಗಿ ನೋಡಿಕೊಳ್ಳಬೇಕು ಅಷ್ಟೆ!"

"ಸರಿ, ಸಾರ್ ಬರುತ್ತೇನೆ" ಎಂದು ಮೋಹನ ನಮಸ್ಕಾರ ಮಾಡಿ ಹೊರಟು ಹೋದ. ಕಾಲೇಜಿನಲ್ಲಿ ನನ್ನ ದಿನದ ಕೆಲಸದ ಮಧ್ಯೆ ಈ ವಿಚಾರ ಮಧ್ಯಾಹ್ನದವರೆಗೆ ನೆನಪಿಗೆ ಬರಲಿಲ್ಲ. ಮಧ್ಯಾಹ್ನ ಮೂರೂವರೆ ಸುಮಾರಿಗೆ ಪ್ರಿನ್ಸಿಪಾಲರಿಂದ ಕರೆಬಂದಿತು. ಅವರ ಕೋಣೆಗೆ ಹೋದೊಡನೆಯೇ ಅವರು ಹಸನ್ಮುಖದಿಂದ ಸ್ವಾಗತಿಸಿ, "ಬನ್ನಿ, ನಿಮ್ಮಿಂದ ಒಂದು ಉಪಕಾರವಾಗಬೇಕಾಗಿದೆ" ಎಂದರು. ನಾನು ಅವರ ಎದುರೇ ಕುಳಿತು "ದೊಡ್ಡ ಮಾತು ಸ್ವಾಮಿ, ಏನು

ವಿಷಯ ಹೇಳಿ" ಎಂದೆ. ಅವರು—

"ಸುಂದರೇಶ ನಿಮ್ಮನ್ನು ಕಂಡಿದ್ದರೋ?"

"ಅವರನ್ನು ಈ ದಿನ ಬೆಳಿಗ್ಗೆ ಕಂಡಿದ್ದೆ ಸ್ವಾಮಿ. ವಿಷಯ ಹೇಳಿದರು"

"ಯಾವ ವಿಷಯ?"

"ಅದೇ, ಮೋಹನ ಪದ್ಮಾವತಿಯನ್ನು ಮದುವೆಯಾಗಬೇಕೆಂದಿರುವುದು. ತಾವು ಈ ಸಂಬಂಧವನ್ನು ಒಪ್ಪಿಲ್ಲವಂತೆ?"

"ಇದು ನನಗೆ ಹೊಸ ಸಮಾಚಾರ! ನನಗೆ ಇದೊಂದೂ ತಿಳಿಯದು, ಪದ್ಮಾವತಿ ಯಾರು? ಮೋಹನ ಅವಳನ್ನು ಮದುವೆಯಾಗುತ್ತಾನೆಂದು ಯಾರು ಹೇಳಿದರು?

ನನಗೆ ಸುಂದರೇಶನ ವ್ಯವಹಾರ ಸೋಜಿಗವೆನಿಸಿತು; ಅವನ ಅಡಿ-ಮುಡಿಗಳನ್ನು ತಿಳಿಯುವುದೇ ಅಸಾಧ್ಯವೆನಿಸಿತು. ಹೀಗೆ ಅವರಿವರನ್ನು ಪೇಚಾಟಕ್ಕೆ ಸಿಕ್ಕಿಸಿದರೆ ಅವನಿಗಾಗುವ ಲಾಭವಾದರೂ ಏನು? ಅವನ ಮಾತನ್ನು ನಂಬಿಕೊಂಡು ಕೆಲಸಮಾಡಿದರೆ ಪರದಾಟ ಖಂಡಿತ. ನನ್ನ ಮುಖವನ್ನು ಒಪ್ಪಮಾಡಿಕೊಳ್ಳುವ ಅಗತ್ಯ ಈಗ ಉಂಟಾಯಿತಲ್ಲವೆ? ಇವರ ಗೃಹಕೃತ್ಯದಲ್ಲಿ ನಾನು ತಲೆ ಹಾಕಿ ಅಧಿಕಪ್ರಸಂಗಿಯಾಗುವುದಿಲ್ಲವೆ?

"ಇದನ್ನು ಹೇಳಿದವನು ಸುಂದರೇಶ ಸ್ವಾಮಿ, ಅಷ್ಟಲ್ಲದೆ ಹೀಗೆ ಮದುವೆ ಮಾಡಿಕೊಳ್ಳಬಾರದೆಂದು ನಾನು ಮೋಹನನ ಮೇಲೆ ಒತ್ತಾಯತರಬೇಕೆಂಬುದು ನಿಮ್ಮ ಉದ್ದೇಶವೆಂದೂ ಅವನೇ ಹೇಳಿದ. ಅವನಾಡಿದ್ದು ಬರಿಯ ಸುಳ್ಳೆಂದು ಈಗ ಸ್ಪಷ್ಟವಾಯಿತು. ನೀವು ಕರೆ ಕಳುಹಿಸಿದ ಉದ್ದೇಶವೇನು ತಿಳಿಸಿ!"

"ಇರಲಿ, ಹೇಳುತ್ತೇನೆ. ಆದರೆ ಈ ಹುಡುಗಿ ಪದ್ಮಾವತಿ ಯಾರು?"

"ನಮ್ಮ ಕಾಲೇಜಿನಲ್ಲೇ ಓದುತ್ತಿದ್ದಾಳಲ್ಲ, ಸೈಕಾಲಜಿ ವಿಭಾಗದಲ್ಲಿ. ಮೋಹನನ ಸಹಪಾಠಿ. ಈ ಹುಡುಗಿ ಪದ್ಮನಾಭಶೆಟ್ಟಿಯ ತಂಗಿಯಂತೆ. ಈ ವಿಚಾರವೂ ನನಗೆ ಪದ್ಮನಾಭಶೆಟ್ಟಿಯಿಂದಲೇ ತಿಳಿದದ್ದು."

"ಓಹೋ, ಅದು ನನಗೆ ತಿಳಿಯದು. ಇದನ್ನು ಸುಂದರೇಶ ನನಗೆ ಹೇಳಲೇ ಇಲ್ಲವಲ್ಲ? ನನ್ನ ಮುಂದೆ ಅವನು ಪ್ರಸ್ತಾಪಿಸಿದ ವಿಚಾರ ಪದ್ಮನಾಭಶೆಟ್ಟಿ ನನ್ನ ತಂಗಿಯ ಮಗಳಿಗೆ ವರನಾಗಬಹುದೆಂಬುದು. ನನಗೂ ಅದು ಆದೀತೆನಿಸಿತು. ನನಗೆ ಹುಡುಗನನ್ನು ಇಂಟರ್‌ವ್ಯೂನಲ್ಲಿ ನೋಡಿದಾಗ

ಏನೋ ಅಳುಕಿತು, ನನ್ನ ಮನಸ್ಸಿಗೆ ಸಮಾಧಾನವಾಗಲಿಲ್ಲ. ನಿಮ್ಮನ್ನೂ ಆ ವಿಚಾರವಾಗಿ ತೊಂದರೆಗೆ ಈಡುಮಾಡಲಿಲ್ಲವೆ? ಆದರೆ ಆ ರಾತ್ರಿ ಸುಂದರೇಶ ಮನೆಗೆ ಬಂದಿದ್ದನಂತೆ. ಮತ್ತೆ ಮರುದಿನ ಮುಂಜಾನೆ ಬಂದು ಪದ್ಮನಾಭಶೆಟ್ಟಿ ಯೋಗ್ಯನಾದ ವರನೆಂದೂ ಈ ವಿಚಾರ ಅವನಲ್ಲಿ ಪ್ರಸ್ತಾಪಿಸಿದನೆಂದೂ, ಅವನು ಒಪ್ಪಿದ್ದಾನೆಂದೂ ತಿಳಿಸಿದ. ನನಗೂ ಒಂದು ಸಮಸ್ಯೆ ಬಗೆಹರಿಯುವ ಸೂಚನೆ ಕಂಡಿತು. ಎಷ್ಟಿದ್ದರೂ ಇದು ನನ್ನ ಹೊಣೆಯೇ ಅಲ್ಲವೆ? ಎಂದಾದರೂ ಮದುವೆ ಮಾಡಬೇಕಲ್ಲವೆ? ಆದರೆ ಪದ್ಮನಾಭಶೆಟ್ಟಿಯ ತಾಯಿಗೆ ಮೈ ಚೆನ್ನಾಗಿಲ್ಲವಂತೆ. ಗಂಡ ತೀರಿಕೊಂಡಾಗಿನಿಂದ ಏನೋ ಮನೋರೋಗ ಆಕೆಯನ್ನು ಕಾಡುತ್ತಿದೆಯಂತೆ. ಊರು ಬಿಟ್ಟು ಬರಲು ಆಕೆಗೆ ಇಷ್ಟವಿಲ್ಲ; ಅಲ್ಲಿ ವೈದ್ಯಕ್ಕೆ ಅನುಕೂಲವಿಲ್ಲ ಎಂದು ಪದ್ಮನಾಭಶೆಟ್ಟಿ ಸುಂದರೇಶನಿಗೆ ಹೇಳಿದನಂತೆ. ನಿಮ್ಮಿಂದ ಏನಾದರೂ ಆಶ್ವಾಸನೆ ದೊರೆತರೆ ಆಕೆಯನ್ನು ಇಲ್ಲಿಗೇ ಕರೆತರುತ್ತಾನಂತೆ. ಆಕೆಯು ಬಂದಾಗ ಮದುವೆಯ ಪ್ರಸ್ತಾಪವನ್ನು ಮಾಡಬಹುದು. ಆಕೆಯ ಮನೋರೋಗದ ಪರೀಕ್ಷೆಗೆ ವ್ಯವಸ್ಥೆ ಮಾಡಲು ಸಾಧ್ಯವೆ?"

"ಪರೀಕ್ಷೆಗೆ ವ್ಯವಸ್ಥೆ ಮಾಡುವುದೇನೂ ಕಷ್ಟವಿಲ್ಲ ಸ್ವಾಮಿ. ಆದರೆ ಅದೇನು ಬೇನೆಯೋ, ಎಷ್ಟು ದಿನದ್ದೋ! ಈ ರೋಗಗಳ ಗುಣ ಅಷ್ಟೇನೂ ಖಚಿತವಲ್ಲ. ನಿಮಗೆ ತಿಳಿದೇ ಇದೆಯಲ್ಲ. ಪ್ರಯತ್ನ ಪಡಬಹುದು, ಪಡಬೇಕು."

"ಹಾಗಿದ್ದರೆ ಪದ್ಮನಾಭಶೆಟ್ಟಿಗೆ ಪತ್ರ ಬರೆಯಲೊ?"

"ಏನು ಬರೆಯುತ್ತೀರಿ?"

"ಅವನ ತಾಯಿಯನ್ನು ಇಲ್ಲಿಗೆ ಕರೆತರಲು. ನೀವು ಪರೀಕ್ಷೆಗೆ, ಚಿಕಿತ್ಸೆಗೆ ವ್ಯವಸ್ಥೆ ಮಾಡುತ್ತೀರೆಂದೂ ಬರೆಯುತ್ತೇನೆ."

"ಆಗಬಹುದು. ಅವನು ಕೆಲಸಕ್ಕೆ ಸೇರಲು ಒಪ್ಪಿಕೊಂಡಿದ್ದಾನೆಯೆ?"

"ತಿಳಿಯದು ನಾನು ಮಂಗಳೂರಿನಲ್ಲಿರುವ ನನ್ನ ಮಿತ್ರ ವಕೀಲರಿಗೂ ಪತ್ರ ಬರೆದಿದ್ದೇನೆ. ಅವರಿಂದಲೂ ಉತ್ತರವಿಲ್ಲ."

"ಎಂದರೆ, ಹುಡುಗನ ಕೆಲಸಕ್ಕೂ ತಾಯಿಯ ಚಿಕಿತ್ಸೆಗೂ ಏನೂ ಸಂಬಂಧವಿಲ್ಲವಷ್ಟೆ?"

"ಸಂಬಂಧವೇನಿಲ್ಲ. ಆದರೆ ಹುಡುಗನಿಗೆ ಕೆಲಸ ಕೊಡಲು ನಾನೊಪ್ಪಿದ್ದ

ಈ ಸಂಬಂಧದ ದೃಷ್ಟಿಯಿಂದಲೇ. ಈಗೀಗ ನನ್ನ ತಂಗಿಗೂ ಒಂದು ವಿಧವಾದ ಮನೋರೋಗ ಶುರುವಾಗುತ್ತಿದೆ. ಮಗಳಿಗೆ ಮದುವೆಯಾಗಲಿಲ್ಲವೆಂಬ ಯೋಚನೆ ಆಕೆಗೆ ತುಂಬ. ಅದಕ್ಕಾಗಿ ಈ ವಿಚಾರವೇನಾದರೂ ಫಲಕಾರಿಯಾದೀತೋ ಏನೋ, ನೋಡೋಣ."

"ತಾಯಿಯ ಚಿಕಿತ್ಸೆಗಂತೂ ವ್ಯವಸ್ಥೆ ಮಾಡುತ್ತೇನೆ ಸ್ವಾಮಿ. ಉಳಿದ ವಿಚಾರಗಳಿಗೆ ನಾನು ತಲೆ ಹಾಕಬಾರದು."

ಎಂದಷ್ಟು ಹೇಳಿ ಅಲ್ಲಿಂದ ಹೊರಬಿದ್ದೆ.

೧೦

ಆ ಸಂಜೆ ಮನೆಗೆ ಬರುವಾಗ ಈ ವಿಚಾರವನ್ನೇ ಮತ್ತೆ ಮೆಲುಕು ಹಾಕುತ್ತಿದ್ದೆ. ಪದ್ಮನಾಭಶೆಟ್ಟಿಯನ್ನು ವರನೆಂದು ಪತ್ತೆ ಹಚ್ಚಿದವನು ಸುಂದರೇಶನೇ; ಅದನ್ನು ಕಾರ್ಯರೂಪಕ್ಕೆ ತರಲು ಹಂಚಿಕೆಯನ್ನು ಹಾಕುತ್ತಿರುವವನೂ ಅವನೇ. ಪ್ರಿನ್ಸಿಪಾಲರು ಇವನ ಸೂಚನೆಗೆ ಹೂಂಗುಟ್ಟಿದ್ದಾರೆ ಅಷ್ಟೆ. ನಿರ್ಣಯಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನೂ, ವ್ಯವಸ್ಥೆಗಳನ್ನೂ ಇವನೇ ನಡೆಸುತ್ತಿದ್ದಾನೆ. ಇದರಲ್ಲಿ ಸುಂದರೇಶನದು ಸ್ವಾರ್ಥವೇನೂ ಇಲ್ಲವೆಂಬುದು ಸ್ಪಷ್ಟ; ಮದುವೆಯ ಸಮಾರಂಭದಲ್ಲಿ ಊಟ ಗಿಟ್ಟಿಸುವುದಷ್ಟೇ ಅವನ ಸಮಾಧಾನ. ಪ್ರಿನ್ಸಿಪಾಲರ ತಂಗಿಯಾದವಳು ಮಗಳ ಮದುವೆಯ ವಿಚಾರವಾಗಿ ಎಲ್ಲೋ ಇವನ ಮುಂದೆ ಹೇಳಿಕೊಂಡು ಅತ್ತಿರಬೇಕು; ಇದನ್ನು ಇವನು ತನ್ನದೇ ಹೊಣೆಯೆಂದು ಹೊತ್ತಿರಬೇಕು. ಇವನಲ್ಲಿ ಇದು ಸಾಧ್ಯವೇ; ಅಂಥ ಮನುಷ್ಯನೇ ಅವನು. ಇದರಲ್ಲೇನೂ ಸಂಶಯವಿಲ್ಲ. ಆದರೆ ಅವನ ತಲೆಗೆ ಹೊಕ್ಕಿರುವ ಹುಳು ಏನನ್ನೂ ಮಾಡಿಸುತ್ತದೆ ಎಂದು ನನಗೆ ತಿಳಿದಿರಲಿಲ್ಲ. ಅಡ್ಡಿ—ಆತಂಕವಿಲ್ಲದೆ, ಹಿಂದೆ ಮುಂದೆ ನೋಡದೆ ಎಲ್ಲರ ಎದುರೂ ಸುಳ್ಳನ್ನೇ ಆಡಿಕೊಂಡು ತನ್ನ ಉದ್ದೇಶ ಸಾಧನೆ ನಡೆಯಿಸಿಕೊಳ್ಳುತ್ತಾನೆ ಎಂದು ನಾನು ಬಗೆದಿರಲಿಲ್ಲ. ಪದ್ಮನಾಭಶೆಟ್ಟಿಯ ಮುಂದೆ ಸುಳ್ಳಾಡಿದ. ಮೋಹನನಿಗೆ ದೊರೆತದ್ದೂ ಸುಳ್ಳೆ; ಪ್ರಿನ್ಸಿಪಾಲರಿಗೂ ಸುಳ್ಳೇ ಹೇಳಿದ್ದಾನೆ; ನನ್ನ ಮುಂದಂತೂ

ಅವನು ಹೇಳಿದುದೆಲ್ಲಾ ಸುಳ್ಳೇ. ಇಷ್ಟಾದರೂ ಸ್ವಾರ್ಥವಿಲ್ಲವೆಂಬುದು ನನಗೆ ಆಶ್ಚರ್ಯ. ಸುಳ್ಳಾಡುವವರು, ಕಳ್ಳತನ ಮಾಡುವವರು ತಮ್ಮ ಪ್ರಯೋಜನದ ಕಡೆ ದೃಷ್ಟಿಯಿಟ್ಟೇ ಇರುತ್ತಾರಲ್ಲವೇ? ತಮಗೆ ಅನುಕೂಲವಾಗುವುದಿಲ್ಲದಿದ್ದರೆ ಸುಳ್ಳೇಕೆ, ಕಳ್ಳತನವೇಕೆ? ಆದರೆ ಈ ಸುಂದರೇಶನಿಗೆ ಈ ಮದುವೆಯಿಂದ ಆಗಬೇಕಾದುದು ಏನು? ನನಗೆ ತಿಳಿದಂತೆ ಏನೂ ಇರದು. ಸ್ವಾರ್ಥವಿಲ್ಲದೆ ಇಷ್ಟು ಶ್ರಮವೇಕೆ ವಹಿಸುತ್ತಾನೆ? ಇಷ್ಟು ಸುಳ್ಳು—ತಟವಟಕ್ಕೇಕೆ ಕೈಹಾಕುತ್ತಾನೆ? ಇದೆಂಥ ವ್ಯಕ್ತಿತ್ವ? ಮಾನಸ ಬೇನೆಗಳಲ್ಲಿ ಕೊಪ್ರೋಮೇನಿಯ, ಪೈರೋಮೇನಿಯ ಮುಂತಾದ ವಿಚಿತ್ರ ಬಗೆಗಳುಂಟು. ಪ್ರಯೋಜನವಿಲ್ಲದೆ ಕಳ್ಳತನ ಮಾಡುವವರುಂಟು: ಆದರೆ ಅಲ್ಲಿ ನಿಗೂಢವಾದ ಪ್ರಯೋಜನವಿರುತ್ತದೆ; ಸುಪ್ತ ಚೇತನಕ್ಕೆ ಸಂಬಂಧಿಸಿದ ಕಾಮನೆಗಳಿರುತ್ತವೆ. ಈ ಸುಂದರೇಶನಿಗೆ ಸುಪ್ತ ಚೇತನವೆಲ್ಲಿ ಬಂದೀತು? ಅವನಿಗೆ ಯಾವ ಬೇನೆಯೂ ಇರದು. ಕಾಮನೆಗಳಿದ್ದರಲ್ಲವೆ ಬೇನೆ? ನನಗೆ ಸುಂದರೇಶನ ವ್ಯಕ್ತಿತ್ವ ಬಗೆಹರಿಯದ ಸಮಸ್ಯೆಯಾಯಿತು. ಯಾವ ಉದ್ದೇಶದಿಂದ ನಾಲ್ಕು ಜನರನ್ನು ಗೊಂದಲಕ್ಕೀಡುಮಾಡಿ ಪರದಾಡಿಸುತ್ತಾನೆ? ಪದ್ಮಾವತಿ ಪದ್ಮನಾಭಶೆಟ್ಟಿಯ ತಂಗಿಯೆನ್ನುವುದು ಅವರ ಮುಂದೆ ಏಕೆ ಮರೆಮಾಚಿದ್ದಾನೆ? ಅದಲ್ಲದೆ ಪದ್ಮಾವತಿ ಮೋಹನ ಇವರ ಆಲೋಚನೆಯನ್ನು ಪ್ರಿನ್ಸಿಪಾಲರ ಮುಂದೆ ಹೇಳಿಯೋ ಇಲ್ಲವೆ? ಅಥವಾ ಪ್ರಿನ್ಸಿಪಾಲರೇ ಸುಳ್ಳಾಡುತ್ತಿದ್ದಾರೆಯೇ? ಅವರ ತಂಗಿಗೂ ಈ ವಿಚಾರ ತಿಳಿದಿಲ್ಲವೆ? ಸುಂದರೇಶನ ಅಂತರಾಳ ಏನಿದ್ದೀತು?

ಹೀಗೆಲ್ಲ ಮನಸ್ಸಿನಲ್ಲಿ ತುಮುಲ ನಡೆಯುತ್ತಿದ್ದಾಗ, ಮನೆಯನ್ನು ಮುಟ್ಟುವ ಮೊದಲೇ ಸುಂದರೇಶ ಎದುರಿಗೆ ಬರುತ್ತಿದ್ದುದನ್ನು ಕಂಡೆ. ಅವನನ್ನು ಇನ್ನು ನೋಡಲೇಬಾರದು, ಯೋಗ್ಯ ಸಹವಾಸವಲ್ಲ ಎಂದುಕೊಂಡು ನನ್ನ ಪಾಡಿಗೆ ನಾನು ತಲೆ ತಗ್ಗಿಸಿಕೊಂಡು ನಡೆಯಹತ್ತಿದೆ. ಆದರೆ ಬೇತಾಳ ಬಿಡಬೇಕಲ್ಲ! "ಏನಯ್ಯ ಕಾಲೇಜು ಮುಗಿಯಿತೆ?" ಎಂದು ಅವನೇ ಆರಂಭಿಸಿದ. ನಾನೂ ಮಾತಿನಲ್ಲಿ ಉತ್ಸಾಹ ತೋರಿಸದೆ "ಆಯಿತು, ಮನೆಗೆ ಹೋಗುತ್ತಿದ್ದೇನೆ" ಎಂದೆ. ನಿಲ್ಲದೆ ಮುಂದೆ ಸಾಗುತ್ತಿದ್ದ ನನ್ನನ್ನು ಹಿಡಿದೆಳೆಯುವಂತೆ "ನಿಲ್ಲಯ್ಯ, ಏನು ಅಷ್ಟು ಅವಸರ? ಮಾತನಾಡಬೇಕು ಸ್ವಲ್ಪ" ಎಂದ. ನಾನು ವಿಧಿಯಿಲ್ಲದೆ ನಿಂತು "ಮಾತನಾಡು. ಆದರೆ ಪ್ರಿನ್ಸಿಪಾಲರು, ಪದ್ಮನಾಭ

ಶೆಟ್ಟಿ, ಪದ್ಮಾವತಿ, ಮೋಹನ ಇವರ ವಿಚಾರ ಬಿಟ್ಟು ಇನ್ನು ಏನನ್ನಾದರೂ ಹೇಳು" ಎಂದು ಕಟುವಾಗಿಯೇ ನುಡಿದೆ. ಸುಂದರೇಶ ನಗುತ್ತ "ಸದ್ಯಕ್ಕೆ ಅದೇ ಮುಖ್ಯ ವಿಚಾರ. ಅದನ್ನು ಬಿಟ್ಟು ಇನ್ನು ಏನು ಮಾತನಾಡುವುದು?" ಎಂದು ಕೇಳಿದ. ನಾನು "ನನಗೆ ಸಂಬಂಧವಿಲ್ಲದ ವಿಚಾರ ಅದು. ಅದನ್ನು ಕುರಿತು ಈಗಾಗಲೇ ಬುದ್ಧಿಯಿಲ್ಲದೆ ಸಾಕಷ್ಟು ತಲೆ ಕೆಡಿಸಿಕೊಂಡಿದ್ದೇನೆ. ಇನ್ನಾದರೂ ಅನಾಸಕ್ತಿಯಿಂದ ನೆಮ್ಮದಿಯಿಂದಿರುತ್ತೇನೆ" ಎನ್ನಲು ಸುಂದರೇಶ "ಒಮ್ಮೆ ತಲೆ ಕೆಡಿಸಿಕೊಳ್ಳಲು ಆರಂಭ ಮಾಡಿದರೆ ಅದನ್ನು ಕಡೆ ಕಾಣಿಸ ಬೇಡವೇ? ಯಾವುದೋ ವಿಚಾರ ಮಾಡಿದರೆ ತಲೆ ಏಕೆ ಕೆಡುತ್ತದೆ? ಒಳ್ಳೆಯ ಗೃಹಸ್ಥನಯ್ಯ ನೀನು! ನಿನ್ನ ಮಗಳ ಮದುವೆಯಾದರೆ, ನಿನ್ನ ಮಗನ ಪ್ರಣಯದ ಪ್ರಸಂಗವಾದರೆ ನೀನು ತಲೆಗೆ ಹಚ್ಚಿಕೊಂಡು ಒದ್ದಾಡಬೇಕು. ಹೆರವರ ತಾಪತ್ರಯವನ್ನು ಆತ್ಮೀಯತೆಯಿಂದ ಕಾಣಬೇಕೆಂದು ಯಾರು ಹೇಳಿ ದರು? ಅನಾಸಕ್ತಿಯಿಂದಲೇ ವ್ಯವಹರಿಸಬೇಕಯ್ಯ!" ಎಂದು ಹೇಳಿದ.

ಇದು ನನಗೆ ಹೊಸ ಬೆಳಕನ್ನು ಕಾಣಿಸಿತು. ಸುಂದರೇಶನ ವ್ಯಾಪಾರ ವ್ಯವಹಾರದಲ್ಲಿ ಅಭಿನಿವೇಶವಿಲ್ಲದೆ ಇರುವುದು ಈಗ ಸ್ಪಷ್ಟವಾಯಿತು. ಅವನು ಕೇವಲ ಬುದ್ಧಿಜೀವಿ. ಅವನು ಸಮಸ್ಯೆಗಳನ್ನು ಎದುರಿಸುವಾಗ, ಅಥವಾ ಪರಿಹರಿಸಲೆತ್ನಿಸುವಾಗ ಸ್ವಾಭಿಮಾನ, ಬೇರೆಯವರು ಏನೆಂದುಕೊಂಡಾರು ಎನ್ನುವ ಗಣನೆ ಅವನಿಗಿಲ್ಲ. ತನಗೆ ಸರಿಯೆಂದು ತೋರಿದ ದಾರಿಯಲ್ಲೇ ನುಗ್ಗುವವನು ಅವನು; ಅಡ್ಡಿಗೆ, ಆತಂಕಕ್ಕೆ ಹೆದರುವವನು ಅವನಲ್ಲ. ಇದೂ ಒಂದು ಯೋಗವೇ ಎನ್ನಿ! ಮನಸ್ಸಿನಲ್ಲಿ ಉದ್ವೇಗ ಇರುವುದಾದರೆ ಕೆಲಸ ನೇರ ವಾಗಿ ನಡೆಯುವುದು ಹೇಗೆ? ಸ್ವಾರ್ಥ ಸೇರಿಕೊಂಡರೆ ಕೆಲಸ ಸಾರ್ಥಕವಾಗು ತ್ತದೆಯೇ? ನಮ್ಮ ಕೆಲಸದಲ್ಲಂತೂ ಸ್ವಾರ್ಥವಿರುವುದು ಸಹಜ. ಹೆರವರ ಕೆಲಸ ಮಾಡುವಾಗಲೂ ಸ್ವಾರ್ಥವೇ ಇದ್ದರೆ ಹೇಗೆ? ಉದ್ವೇಗ ಇದ್ದರೆ ಹೇಗೆ? ಅಲ್ಲಿಯೂ ತಮ್ಮ ಅನುರಾಗ–ಅಸಮಾಧಾನ–ಆತಂಕಗಳನ್ನು ಅಧ್ಯಾರೋಪ ಮಾಡಿಕೊಳ್ಳಬೇಕೆ?

ಸುಂದರೇಶನಿಗೆ ತನ್ನದೆನ್ನುವ ಸಮಸ್ಯೆಯಿಲ್ಲ. ಆದಕಾರಣ ಸ್ವಾರ್ಥ ವೆನ್ನುವುದು ಅವನಿಗಿಲ್ಲ. ಇತರರ ಕೆಲಸದಲ್ಲಿಯೇ ಕಾಲವನ್ನು ಕಳೆಯು ತ್ತಾನೆ; ಇತರರ ಸಮಸ್ಯೆಗಳು ತಮ್ಮವು ಎಂದುಕೊಳ್ಳುವಾಗ ಉದ್ವಿಗ್ನನಾಗದೆ, ಅಭಿನಿವೇಶ ತಳೆಯದೆ ಕೆಲಸಮಾಡುತ್ತಾನೆ, ಇದು ಎಲ್ಲರಿಗೂ ಸಾಧ್ಯವೇ?

ನನಗಂತೂ ಸಾಧ್ಯವಿಲ್ಲ. ಸುಂದರೇಶನಿಗೆ ತನ್ನದೇ ಕುಟುಂಬವಿಲ್ಲ, ಹಾಗಾಗಿ ಅವನು 'ವಸುದೈವ ಕುಟುಂಬಕ' ಅನಾಸಕ್ತನಾದವನು ಉದಾರ ಚರಿತ ಎಂದರೆ ಏನಾಶ್ಚರ್ಯ?

ಇದು ದೊಡ್ಡ ಗುಣವೇ ಎಂದು ಒಪ್ಪಿಕೊಳ್ಳೋಣ. ಆದರೆ ಹೀಗೆ ಸುಳ್ಳಾಡುವುದು ಸರಿಯೆ? ನಿಜಕ್ಕಿಂತ ಹೆಚ್ಚು ಅವನ ಸುಳ್ಳೇ ಆರ್ಭಟಿಸುತ್ತದೆ! ಇದರಿಂದ ಅವನಿಗೂ ಪ್ರಯೋಜನವಿಲ್ಲ. ನಾಲ್ಕು ಮಂದಿಗೂ ಘಾಸಿಯಾಗುತ್ತದೆ. ಅವನ ಉದ್ದೇಶವೇ ನಿಷ್ಫಲವಾಗಬಹುದಲ್ಲ? "ನೂರು ಸುಳ್ಳು ಹೇಳಿ ಒಂದು ಮದುವೆ ಮಾಡಿಸು" ಎನ್ನುವ ಗಾದೆಯಿನೋ ಇದೆ. ಅದನ್ನೇ ಇವನು ಪ್ರಮಾಣವೆಂದು ನಂಬಿ ಹೀಗೆ ಮಾಡುತ್ತಿದ್ದಾನೋ? ಅಥವಾ ನಾನು ಸುಳ್ಳೆಂದು ಕರೆಯುವುದು ಅವನ ಪಾಲಿಗೆ ಸುಳ್ಳಲ್ಲವೋ ಏನೋ! ಜಗತ್ತೇ ಸಾಪೇಕ್ಷವಾದುದು ಎಂದಲ್ಲವೇ ಈಗಿನ ಸಿದ್ಧಾಂತ!? ಸುಳ್ಳೂ ಸಾಪೇಕ್ಷವಾದುದೇ ಇದ್ದೀತು; ನಿಜವೂ ಸಾಪೇಕ್ಷವೇ. ಸಂದರ್ಭ ಶುದ್ಧಿ ಮುಖ್ಯವಾದುದು. ಆದರೆ ಸುಳ್ಳಿಗೂ ಪ್ರಯೋಜನವಿರಬೇಕಷ್ಟೆ? ಸುಂದರೇಶನ ಸುಳ್ಳಿಗೆ ಮದುವೆಯನ್ನು ಬಿಟ್ಟು ಬೇರೆ ಏನಾದರೂ ಪ್ರಯೋಜನವಿದ್ದೀತೆ? ಕೇವಲ ಅನಾಸಕ್ತಿಯಿಂದಲೇ ಅಸತ್ಯ ಸಿದ್ಧವಾಗುತ್ತದೆಯೇ? ನಾನು ಹೀಗೆಲ್ಲ ಒಳಗೇ ಬವಣೆ ಪಡುತ್ತಿದ್ದಾಗ ಸುಂದರೇಶನೇ ಬಾಯಿ ತೆಗೆದ—

"ನನಗಂತೂ ಇದರಲ್ಲಿ ಪ್ರಯೋಜವೇನೂ ಇರದು. ಆ ಹುಡುಗಿಗೆ ಮದುವೆಯಾದರೆಷ್ಟು ಬಿಟ್ಟರೆಷ್ಟು, ನನಗೇನು? ಅವರಿಗೆ ನೆರವಾಗುವವರು ಯಾರೂ ಇಲ್ಲವಲ್ಲಾ ಎಂದು ಸ್ವಲ್ಪ ಆಸಕ್ತಿಯನ್ನು ವಹಿಸಿದ್ದೇನೆ. ನಾನು ಸ್ವಾರ್ಥವಿಲ್ಲದೆ ಇಷ್ಟು ಶ್ರಮವಹಿಸಿರುವಾಗ ಸಂಬಂಧಪಟ್ಟವರು ನನ್ನ ಸುಳ್ಳಿನಿಂದ ಸ್ವಲ್ಪ ಪೇಚಾಡಿದರೆ ನಷ್ಟವೇನು? ನೀನು ಹೇಳದೇ ಇದ್ದುದನ್ನು ನೀನು ಹೇಳಿದೆ ಎಂದು ಮೋಹನನ ಮುಂದೆ ನಾನು ಹೇಳಿದೆ; ಪ್ರಿನ್ಸಿಪಾಲರು ನಿನಗೆ ಹೇಳದೆ ಇದ್ದುದನ್ನು ಹೇಳಿದರೆಂದು ನಾನು ನಿನಗೆ ಹೇಳಿದೆ— ಅದರಿಂದ ಯಾರಿಗೇನು ತೊಂದರೆ? ನನ್ನ ಉದ್ದೇಶ ಸರಿಯಾದುದೋ ಅಲ್ಲವೋ? ಅದಕ್ಕೆ ನೀವೂ ಸಹಾಯ ಮಾಡಬೇಕು ತಾನೆ. ನೀವಾಗಿ ಏನೂ ಮಾಡುವುದಿಲ್ಲ; ಹೀಗೆ ನಿಮ್ಮನ್ನು ಸಿಕ್ಕಿಸಿದರೆ ಮಾಡುತ್ತೀರಿ!" ಎಂದ.

ನನಗೆ ಈ ತತ್ತ್ವಜಿಜ್ಞಾಸೆ ಹಿಡಿಸಲಿಲ್ಲ; ಅದು ತೀರ ಹೆಚ್ಚು ಎನಿಸಿತು.

ನನ್ನ ಮಂದ ಬುದ್ಧಿಗಂತೂ ಅದು ಅಗಮ್ಯವಾಯಿತು ! ಸುಂದರೇಶನಿಗೆ ಇಷ್ಟೆಲ್ಲ ತರ್ಕಪ್ರತಿಭೆ ಇದ್ದೀತೆಂದು ನಾನೆಣಿಸಿರಲಿಲ್ಲ. ಕೆಲಸಮಾಡುವ ಮುಂಚೆ ಹೀಗೆಲ್ಲ ಆಲೋಚನೆ ಮಾಡುವಷ್ಟು ತಾಳ್ಮೆ ಅವನಿಗಿದೆಯೆಂದು ನನಗೆ ಈಗಲೇ ತಿಳಿದದ್ದು. ಸುಂದರೇಶ ನನ್ನ ಮಿದುಳಿನ ಶ್ರಮವನ್ನು ಕಮ್ಮಿ ಮಾಡಲು ಒಡನೆಯೇ ಕೇಳಿದ—

"ಪ್ರಿನ್ಸಿಪಾಲರು ಏನು ಹೇಳಿದರು ?"

"ನಿನ್ನ ಸಿದ್ಧಾಂತದ ಪ್ರಕಾರ ನಾನು ನಿನಗೆ ನಿಜವನ್ನು ಹೇಳಬಾರದು ! ಪದ್ಮನಾಭಶೆಟ್ಟಿಯನ್ನು ತಮ್ಮ ತಂಗಿಯ ಮಗಳಿಗೆ ತಂದುಕೊಳ್ಳುವುದು ಅವರಿಗೆ ಇಷ್ಟವಿಲ್ಲ."

"ಕಾರಣ ಏನು ಹೇಳಿದರು ?"

"ಸುಳ್ಳಿಗೆ ಕಾರಣವಾಗಿ ಇನ್ನೊಂದು ಸುಳ್ಳನ್ನು ಹೇಳಬೇಕಲ್ಲಯ್ಯ ? ಈ ಪರಂಪರೆ ನನ್ನಿಂದ ನಿಭಾಯಿಸುವುದಾಗದು. ಪ್ರಿನ್ಸಿಪಾಲರಿಗೆ ಮೋಹನ ಪದ್ಮಾವತಿಯರ ಸಂಕಲ್ಪದ ವಿಚಾರ ಏನೂ ತಿಳಿದೇ ಇಲ್ಲವಲ್ಲಯ್ಯ ; ನೀನು ಅದನ್ನು ಅವರಿಗೇಕೆ ಹೇಳಿರಲಿಲ್ಲ ?"

"ನೀನು ಹೇಳಿದೆಯೋ ಇಲ್ಲವೋ ? ಎಲ್ಲ ನನ್ನಿಂದಲೇ ನಡೆಯಬೇಕೆ ? ಅದರಲ್ಲಿ ನಿನಗೂ ಸ್ವಲ್ಪ ಪುಣ್ಯ ಬರಲಿ ಎಂದು ನಾನು ಹೇಳಲಿಲ್ಲ. ಅಷ್ಟಲ್ಲದೆ, ನಾನು ಹೇಳುವುದಕ್ಕೂ ನೀನು ಹೇಳುವುದಕ್ಕೂ ವ್ಯತ್ಯಾಸವಿಲ್ಲವೆ ? ನಿನ್ನ ಮಾತನ್ನು ಬೇಗ ನಂಬುತ್ತಾರೆ; ನೀನು ಅದಕ್ಕೆ ಅನುಮತಿ ತೋರಿಸುವ ಹಾಗಿದ್ದರೆ ಅವರೂ ಒಪ್ಪಿಬಿಡುತ್ತಾರೆ. ನಾನಾದರೆ ದ್ರವಿಡ ಪ್ರಾಣಾಯಾಮ ಮಾಡಬೇಕು !"

ಈ ವಾದಕ್ಕೆ ಎನನ್ನುತ್ತೀರಿ ? ನನ್ನಿಂದ ಈ ವಿಚಾರ ಹೊರಹೊರಡಲಿ ಎಂದುಕೊಂಡು, ಹೊರಡುತ್ತದೆ ಎಂದು ನಿಶ್ಚಯಿಸಿಕೊಂಡು ಈ ದೀರ್ಘಸೂತ್ರಿ ಕುತಂತ್ರ ನಡೆಸಿದ್ದಾನೆ. ನಾನು ಪದ್ಮಾವತಿ—ಮೋಹನ ಇವರ ಪ್ರಣಯದ ವಿಚಾರವನ್ನು ಪ್ರಿನ್ಸಿಪಾಲರಿಗೆ ಈ ಸಂದರ್ಭವಿಲ್ಲದಿದ್ದರೆ ಹೇಳುತ್ತಲೇ ಇರಲಿಲ್ಲವೆನ್ನುವುದು ನಿಜ. ಆದರೆ ಈ ವಿಚಾರವನ್ನು ಹೇಳುವಾಗ ಸುಂದರೇಶನೇ ಹೇಳಿದನೆಂದು ಹೇಳಿದಂತೆ ನೆನಪು. ಅದಕ್ಕಾಗಿಯೇ ಪ್ರಿನ್ಸಿಪಾಲರು ಅದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲವೆಂದು ತೋರುತ್ತದೆ. ಆದರೂ ಸುಂದ

ರೇಶನ ಹಂಚಿಕೆಯೇನು ವ್ಯರ್ಥವಾಗುವುದಿಲ್ಲ. ಮನೆಯಲ್ಲಿ ಮೋಹನನ ಮುಂದೆ ಈ ಪ್ರಸ್ತಾಪ ಮಾಡಿಯೇ ಮಾಡುತ್ತಾರೆ. ಇದನ್ನು ಹೇಳಲು ಮೋಹನನಿಗೂ ಒಂದು ಅವಕಾಶವಾದ ಹಾಗಾಯಿತು. ಅವನಾಗಿಯೇ ಹೇಳಲು ಅಳುಕುತ್ತಿದ್ದ. ಆದರೆ ಇದೇ ಸುಂದರೇಶನ ಉದ್ದೇಶವೆಂದು ನಂಬುವುದು ಹೇಗೆ ? ಅವನ ಮನಸ್ಸೆಲ್ಲ ಪದ್ಮನಾಭಶೆಟ್ಟಿ ಆ ಹುಡುಗಿಯನ್ನು ಮದುವೆ ಮಾಡಿಕೊಳ್ಳುವುದರ ಮೇಲಿದೆ. ಇದನ್ನು ಮತ್ತೆ ಮತ್ತೆ ಹೇಳಿದ್ದಾನೆ. ಅದೂ ಇದೂ ಒಟ್ಟಿಗೆ ನಡೆಯುವ ಹಾಗಿಲ್ಲ. ಮತ್ತೆ, ಸುಂದರೇಶನ ವರ್ತನೆಯಿಂದ ನನ್ನ ಮನಸ್ಸು ಡೋಲಾಯಮಾನವಾಯಿತು.

"ಅಷ್ಟೊಂದು ಚಿಂತೆ ಮಾಡಬೇಡ. ಮೋಹನ ಪದ್ಮಾವತಿಯನ್ನು ಮದುವೆಮಾಡಿಕೊಳ್ಳುವ ವಿಚಾರವಂತೂ ನಿಜವೇ ; ಅದರಲ್ಲಿ ಏನೂ ಸುಳ್ಳಿಲ್ಲ. ಮೋಹನನೇ ನನ್ನ ಮುಂದೆ ಇದನ್ನು ಹೇಳಿ ಪ್ರಿನ್ಸಿಪಾಲರನ್ನು ಒಪ್ಪಿಸುವ ಹಾಗೆ ಕೇಳಿದ. ನಾನೂ ಆಗಲೆಂದು ಹೇಳಿದ್ದೆ. ನೇರವಾಗಿ ನಾನೇ ಅವರ ಮುಂದೆ ಹೇಳಿದ್ದರೆ ಅವರು ಒಪ್ಪುತ್ತಿದ್ದರೋ ಇಲ್ಲವೋ — ನಿನ್ನ ಮೂಲಕ ಹೇಳಿಸಿದೆ. ನಿನ್ನನ್ನು ನಾನು ನೇರವಾಗಿ ಹೀಗೆ ಹೇಳೆಂದು ಹೇಳಿದ್ದರೆ ನೀನು ಹೇಳುತ್ತಿದ್ದೆಯಾ ? ಎಂದಿಗೂ ಇಲ್ಲ. ನಿನ್ನ ಸ್ವಭಾವ ನನಗೆ ತಿಳಿಯದೆ ? ಬೇರೆಯವರ ವಿಚಾರ ನನಗೇಕೆ ಎಂದುಬಿಡುತ್ತಿದ್ದಿ ! ಬೇರೆಯವರ ವಿಚಾರ ಮನಸ್ಸಿಗೆ ಹಚ್ಚಿಕೊಳ್ಳದಿದ್ದರೆ ಉಳಿಯುವುದು ಹೇಗಯ್ಯ ? ಅಷ್ಟು ಸ್ವಾರ್ಥಿಯಾಗಿದ್ದರೆ ಹೇಗೆ ? ಹೋಗಲಿ, ಬಿಡು. ಪ್ರಿನ್ಸಿಪಾಲರಿಗೆ ಸುದ್ದಿ ತಿಳಿಯಿತು. ಇನ್ನು ಮೋಹನ ಅವರನ್ನು ಒಪ್ಪಿಸಿಕೊಳ್ಳಲಿ."

"ಓಹೋ, ಅಷ್ಟು ಸುಲಭವೇನಯ್ಯ ? ನೀನು ಮಧ್ಯೆ ಇನ್ನೊಂದು ಪ್ರಸಂಗವನ್ನು ತಂದೊಡ್ಡಿದ್ದೀಯೆ ! ಪದ್ಮನಾಭಶೆಟ್ಟಿಯ ವಿಚಾರ. ಪ್ರಿನ್ಸಿಪಾಲರ ತಲೆಗೆ ಅದು ಹೊಕ್ಕಿದೆ. ಅದರಲ್ಲಿ ಅವರ ಆಸಕ್ತಿಯಿರುವಹಾಗಿದೆ. ಹಾಗಿರುವಾಗ ಮೋಹನನ ಮದುವೆಗೆ ಒಪ್ಪುತ್ತಾರೋ ?"

"ನಾನು ಪದ್ಮನಾಭಶೆಟ್ಟಿಯನ್ನು ಕೇಳಿದೆ. ನನಗೆ ಮೊದಲು ಇದು ತಕ್ಕ ಜೋಡಿಯೆನಿಸಿತು. ಆದರೆ ಅವನು ಸದ್ಯಕ್ಕೆ ಮದುವೆಯಾಗುವುದಿಲ್ಲವಂತೆ. ತಾಯಿಯ ಬೇನೆ ಅವನ ಮನಸ್ಸನ್ನೆಲ್ಲ ಕಡಿದೆ ; ಕೆಲಸಕ್ಕೆ ಇಲ್ಲಿಗೆ ಬರುವ ಉದ್ದೇಶ ತಾಯಿಗೆ ಚಿಕಿತ್ಸೆಮಾಡಿಸಲೆಂದೇ ! ಕೆಲಸ ಇಲ್ಲಿ ದೊರೆಯದಿದ್ದರೆ,

ಅವನ ತಂಗಿ ಇಲ್ಲಿರುವ ಹಾಗಿಲ್ಲ, ಅವಳು ಇಲ್ಲಿರದೆ ಮೋಹನನಿಗೆ ಸಮಾಧಾನವಿಲ್ಲ. ಪದ್ಮನಾಭಶೆಟ್ಟಿಗೆ ಕೆಲಸ ಕೊಡಬಾರದೆಂದು ಪ್ರಿನ್ಸಿಪಾಲರು ನಿರ್ಧರಿಸಿದ್ದರು. ಅವರೇನು ಏಕಾಏಕಿ ಅವನಿಗೆ ಕೆಲಸ ಕೊಡಲು ಒಪ್ಪುತ್ತಿರಲಿಲ್ಲ; ಯಾರ ಶಿಫಾರ್ಸೂ ನಡೆಯುತ್ತಿರಲಿಲ್ಲ. ಅದಕ್ಕಾಗಿ ಪದ್ಮನಾಭಶೆಟ್ಟಿಯ ಮದುವೆಯ ಗಾಳ ಹಾಕಿದೆ. ಸಫಲವಾಯಿತು, ಎನ್ನು. ಹುಡುಗನಿಗೆ ಕೆಲಸ ಸಿಕ್ಕಿತು, ಮೋಹನನಿಗೆ ಮದುವೆಯಾಗುತ್ತದೆ."

ಪ್ರಯತ್ನವಿಲ್ಲದೆ ನಾನು ಜೋರಾಗಿ ನಕ್ಕೆ. ಸುಂದರೇಶನ ಜಾಣತನಕ್ಕೆ ಒಮ್ಮೆಯಾದರೂ ನಗಬೇಡವೆ ? ಆದರೆ ಪ್ರಿನ್ಸಿಪಾಲರಿಗೆ ವಿಷಯ ತಿಳಿದ ಮೇಲೆ ಕೋಪ ಬರುವುದಿಲ್ಲವೇ ? ಪದ್ಮನಾಭಶೆಟ್ಟಿ ತಮ್ಮ ತಂಗಿಯ ಮಗಳನ್ನು ಮದುವೆಯಾಗಲು ಒಪ್ಪದೆ ಇದ್ದರೆ ಅವನ ಮೇಲೆ ಅವರಿಗೆ ಅಸಮಾಧಾನ ಮೂಡುವುದಿಲ್ಲವೆ ? ನಾನೂ ಈ ನಾಟಕದಲ್ಲಿ ಬಣ್ಣ ಬಳಿದುಕೊಂಡೆನೆಂದು ಅವರಿಗೆ ತಿಳಿದರೆ ನನ್ನ ವಿಚಾರ ಏನೆಂದು ಕೊಂಡಾರು ? ನಕ್ಕ ಮರುಕ್ಷಣವೇ ನನಗೆ ಆತಂಕವೂ ಆಯಿತು. ಸುಂದರೇಶನ ಮುಂದೆ ನನ್ನ ಸಂಶಯಗಳನ್ನು ಇಡಲು, ಅದರಿಂದ ಅವನೇನೂ ನಡುಗಲಿಲ್ಲ.

"ಬಿಡಯ್ಯ, ಕೆಲಸ ನಡೆದ ಮೇಲೆ ಯಾರಿಗೆ ಯಾರೋ ! ಅವರು ಸಿಟ್ಟಾದರೆ ನನಗೇನು, ನಿನಗೇನು ? ಅದರಿಂದ ಅವರಿಗೂ ಒಳ್ಳೆಯದೇ ಆದೀತು, ಬಿಡು. ಮನೆಗೆ ಪದ್ಮಾವತಿ ಬಂದರೆ ಅವರ ದುಗುಡವೂ ಕಡಿಮೆಯಾದೀತು !"

"ಆದರೆ, ಅವರ ತಂಗಿಯ ಮಗಳಿಗೆ ಹೇಗೆ ಮೋಕ್ಷಕಾಣಿಸುತ್ತೀ ? ಈ ವಿಚಾರ ತುಂಬ ಮನಸ್ಸಿಗೆ ಹಚ್ಚಿಕೊಂಡಿದ್ದಾರಲ್ಲ, ಅವರು !"

"ಅದಕ್ಕೂ ವ್ಯವಸ್ಥೆ ಮಾಡಿದ್ದೇನೆ. ಪದ್ಮನಾಭಶೆಟ್ಟಿಗೆ ಹೇಳಿದ್ದೇನೆ; ಅವರ ಉಪಕಾರಿಗಳು ಇದ್ದಾರಲ್ಲ, ಲಾಯರು, ಅವರ ಮಗ ಒಬ್ಬನಿದ್ದಾನಂತೆ. ಅವನು ಅಲ್ಲಿಯೇ ಇದ್ದಾನಂತೆ, ಇವನ ಸ್ನೇಹಿತನಂತೆ. ಅವನೂ ಕಾಲೇಜಿನಲ್ಲಿ ಲೆಕ್ಚರರ್, ಇವನ ಓರಗೆಯವನೇ. ಅವನ ವಿಚಾರವನ್ನು ಪದ್ಮನಾಭಶೆಟ್ಟಿಯೇ ಹೇಳಿದ. ಲಾಯರಿಗೆ ಮಗನಿರುವ ವಿಚಾರ ನನಗೆ ತಿಳಿದಿರಲಿಲ್ಲ. ಆ ಹುಡುಗ ಒಪ್ಪುವುದಾದರೆ, ಪ್ರಿನ್ಸಿಪಾಲರಿಗೇನು, ಅವನೇ ಆಯಿತು ! ಪದ್ಮನಾಭಶೆಟ್ಟಿಯ ವಿಚಾರವನ್ನೂ ನಾನೇ ಹೇಳಿದವನಲ್ಲವೆ ? ಅವರೇನು ತಾವಾಗಿ ಮನಸ್ಸು ಮಾಡಲಿಲ್ಲ."

"ಸರಿ, ಆ ಹುಡುಗ ಒಪ್ಪದಿದ್ದರೆ ? ಅಥವಾ ಅವರ ತಂದೆ ಒಪ್ಪದಿದ್ದರೆ ?"

"ಒಪ್ಪದೆ ಏನು ? ಪ್ರಿನ್ಸಿಪಾಲರು ಅವರಿಗೆ ಕಾಗದ ಬರೆದಿದ್ದಾರೆ."

"ಏನೆಂದು ಬರೆದಿದ್ದಾರೆ ?"

"ನನ್ನ ತಂಗಿಯ ಮಗಳು ಮದುವೆಗಿದ್ದಾಳೆ, ವರನನ್ನು ಹುಡುಕುತ್ತಿದ್ದೇನೆ. ನಿಮಗೆ ಯಾರಾದರೂ ತಿಳಿದಿದ್ದರೆ ಹೇಳಿ. ಪದ್ಮನಾಭಶೆಟ್ಟಿ ಹೇಗೆ ? ಅವನನ್ನು ಒಪ್ಪಿಸುವ ಭಾರ ನಿಮ್ಮದು—ಎಂದು ಬರೆದಿದ್ದಾರೆ."

"ಹಾಗೆಂದರೆ ಅವರು ತಮ್ಮ ಮಗನನ್ನೇ ಸೂಚಿಸುತ್ತಾರೆಂದು ಹೇಗೆ ನಂಬುತ್ತೀಯೆ ? ಕಾಗದವನ್ನು ನೀನೇ ಬರೆಸಿದವನೋ ?"

"ಹೌದು, ಇಂಥ ವಿಚಾರ ಬರೆಯಲು ಅವರಿಗೇನು ಬರುತ್ತದೆ ? ಪದ್ಮನಾಭಶೆಟ್ಟಿ ಅಲ್ಲಿ ನನ್ನ ಪರವಾಗಿ ಕೆಲಸ ಮಾಡುತ್ತಾನೆ. ನಾನು ಹೇಳಿ ಕಳುಹಿಸಿದ್ದೇನೆ."

"ವಕೀಲರ ಮಗ ಒಪ್ಪುವುದಾದರೂ, ಅವರ ತಾಯಿ ಇಲ್ಲಿದ್ದಾರಲ್ಲವೆ ? ಅವರು ಒಪ್ಪುತ್ತಾರೆಯೆ ?"

"ಆ ಹುಡುಗನ ತಾಯಿಯನ್ನು ಈಗಾಗಲೇ ಒಪ್ಪಿಸಿದ್ದೇನೆ. ಅವರ ಮನೆಯವರೆಲ್ಲ ನನಗೆ ಚೆನ್ನಾಗಿ ಗೊತ್ತಲ್ಲ"

"ತಂದೆ ಒಪ್ಪುವುದು ?."

"ಅವರು ಒಪ್ಪದೆ ಏನು ಮಾಡುತ್ತಾರೆ ? ಅವರೂ ಈ ಪ್ರಿನ್ಸಿಪಾಲರ ಹಾಗೆಯೇ. ಒಂದನ್ನೂ ತಲೆಗೆ ಹಚ್ಚಿಕೊಳ್ಳುವುದಿಲ್ಲ. ಯಾರಾದರೂ ಮಾಡುತ್ತೇನೆಂದು ಮುಂದೆ ಬಂದರೆ ಮಾಡೆಂದು ಒಪ್ಪಿಕೊಳ್ಳುತ್ತಾರೆ."

"ಗಂಡ—ಹೆಂಡತಿ ಸರಿಯಾಗಿದ್ದಾರೋ ?"

"ಸರಿಯಾಗಿಯೇ ಇದ್ದಾರೆ. ಬೇರೆ ಬೇರೆ ಇದ್ದಾರೆ ಅಷ್ಟೆ. ಕಾಗದ ಪತ್ರ ಎಲ್ಲ ಉಂಟು. ಮಗನಿಗೂ ತಾಯಿಗೂ ಅಷ್ಟಷ್ಟೆ ! ಅದಕ್ಕಾಗಿಯೇ ಅವನು ಮಂಗಳೂರಿನಲ್ಲಿ ತಂದೆಯ ಬಳಿ ಇದ್ದುಬಿಟ್ಟಿದ್ದಾನೆ. ತಾಯಿಯದು ತಪ್ಪು ಎಂದು ಅವನ ವಾದ ; ತಂದೆಯುದು ತಪ್ಪು ಎಂದು ಮಗಳ ವಾದ."

"ಇಬ್ಬರದೂ ತಪ್ಪು ಎಂದು ನಿನ್ನ ವಾದ ?"

"ಅಲ್ಲವೆ, ಮತ್ತೆ ? ಯಾವ ಜಗಳದಲ್ಲೂ ಒಬ್ಬರದೇ ತಪ್ಪು ಇರುತ್ತ

ದೆಯೆ ? ಊರು ಬಿಟ್ಟುಹೋದುದು ಅವರ ತಪ್ಪು ; ಅವರಿದ್ದಲ್ಲಿಗೆ ಹೋಗದೆ ಇಲ್ಲೇ ಇರುತ್ತೇವೆಂದುದು ಇವರ ತಪ್ಪು."

ಸುಂದರೇಶನ ನೇಪಥ್ಯವ್ಯವಸ್ಥೆ ಸಮರ್ಪಕವಾಗಿಯೇ ಇದೆ ಎನಿಸಿತು. ಆದರೆ ಅದರಿಂದ ಪ್ರಿನ್ಸಿಪಾಲರಿಗೆ ಆತಂಕವೇ ಒದಗೀತೆಂದು ನನ್ನ ಎಣಿಕೆ. ಪದ್ಮನಾಭಶೆಟ್ಟಿಯ ಮೇಲೆ ತಮ್ಮ ಅಸಮಾಧಾನವನ್ನು ಹೊರಿಸಲೂಬಹುದು. ಇದರಿಂದ ಪದ್ಮಾವತಿಯ ಮನಸ್ಸಿಗೆ ಕಷ್ಟವಾಗಬಹುದು, ಮೋಹನನ ಉದ್ದೇಶ ಸಫಲವಾಗದೇ ಉಳಿಯಬಹುದು. ಆದರೆ ಈ ಆತಂಕಗಳಿಂದ ಸುಂದರೇಶನನ್ನು ಬೆದರಿಸುವುದು ಸಾಧ್ಯವಿರಲಿಲ್ಲ. ಅವನು ವಿಕಾರರಹಿತ ; ಆತಂಕ ಒದಗಿದರೂ ಅದನ್ನು ಝಾಡಿಸಿಕೊಂಡು ನಡೆಯುತ್ತಾನೆ ಅವನು. ಯಾರಿಗೆ ಏನಾದರೂ ಅವನಿಗೇನು ಚಿಂತೆಯಿಲ್ಲ. ಪೂರ್ವಾಪರಗಳನ್ನು ಚಿಂತಿಸುವ ಸ್ವಭಾವವೇ ಅಲ್ಲ ಅವನದ್ದು. ಹೀಗೆಂದುಕೊಂಡು, ಮಾತನ್ನು ಮುಂದಕ್ಕೆ ಬೆಳೆಸದೆ ಲೋಕಾಭಿರಾಮವಾಗಿ ನಾಲ್ಕು ಮಾತುಗಳನ್ನಾಡಿ ಮನೆಯ ಕಡೆ ನಡೆದೆ.

೧೧

ರಾತ್ರಿ ಒಂಬತ್ತು ಗಂಟೆಯ ಸಮಯ. ಊಟ ಮುಗಿಸಿ ಏನನ್ನೋ ಓದುತ್ತ ಕುಳಿತಿದ್ದೆ. ಬಾಗಿಲು ತಟ್ಟಿದ ಸದ್ದಾಯಿತು. ಸುಂದರೇಶನೇ ಇರಬಹುದೆಂದು ಊಹಿಸಿದೆ. ಇನ್ನು ಮದುವೆ ಮುಗಿಯುವವರೆಗೂ ಇವನ ಕಾಟ ನನಗೆ ತಪ್ಪಿದ್ದಲ್ಲವೆಂದು ಖಚಿತಮಾಡಿಕೊಂಡಿದ್ದೆ. ಇವನಿಗೆ ವೇಳೆ—ಅವೇಳೆಗಳ ಪರಿಜ್ಞಾನವಿಲ್ಲ ; ಉಳಿದವರಿಗೆ ಕೆಲಸವಿದ್ದೀತೆಂದೂ ಅವನ ಮನಸ್ಸಿಗೆ ಬರುವುದಿಲ್ಲ. ಬೇಸರದಿಂದಲೇ ಕುರ್ಚಿ ಬಿಟ್ಟೆದ್ದು ಬಾಗಿಲಕಡೆ ನಡೆದು ಕಿಟಕಿಯಿಂದ ಹೊರಗೆ ತಲೆ ಹಾಕಿ ಇಣಿಕಿನೋಡಿದೆ. ಬಂದವನು ಸುಂದರೇಶನಲ್ಲ, ಮೋಹನ. ನನಗೆ ಇನ್ನಷ್ಟು ಗಾಬರಿಯಾಯಿತು. ಸುಂದರೇಶನ ನಾಟಕದಿಂದ ಯಾರು ಯಾರಿಗೆ ಏನು ಅನಾಹುತ ನಡೆಯುವುದೋ ? ಮೋಹನನ ಮನೆಯಲ್ಲಿ ಏನು ರಾದ್ಧಾಂತ ನಡೆದಿದೆಯೋ ? ನಿಷ್ಕಾರಣವಾಗಿ ಪ್ರಿನ್ಸಿಪಾಲರಿಗೆ ಮೋಹನನ ವಿಚಾರವನ್ನು ಹೇಳಿದವನು ನಾನೇ ಅಲ್ಲವೇ ? ಅವರಿಗಂತೂ ವಿಷಯ ತಿಳಿದಿರ

ಲಿಲ್ಲ. ನಾನು ಅವರಿಗೆ ತಿಳಿಸಬೇಕಾದ ಕಾರಣವಿರಲಿಲ್ಲ. ಇದರಿಂದ ಮೋಹನನ ಮೇಲೆ ಸಿಟ್ಟುಗೊಂಡರೋ ಏನೋ ? ಸುಂದರೇಶ ಇನ್ನೇನು ಹೇಳಿದ್ದಾನೋ ? ಈ ಗೊಂದಲದ ನಡುವೆ ನಾನೇಕೆ ಕೈಹಾಕಿದೆ ಎಂದು ಬೇಸರವಾಯಿತು. ಬೇಸರವನ್ನು ತೋರ್ಪಡಿಸದೆ, ಬಾಗಿಲನ್ನು ತೆರೆದು ಮೋಹನನನ್ನು ಎಂದಿನಂತೆಯೇ ಸ್ವಾಗತಿಸಿ ಒಳಗೆ ಕರೆದು ಕೂಡಿಸಿದೆ. ಮೋಹನ ನಮ್ಮ ಮನೆಗೆ ಬರುವುದು ಅಪರೂಪವೇನಲ್ಲ.

"ಅವೇಳೆಯಲ್ಲಿ ನಿಮಗೆ ತೊಂದರೆ ಕೊಡುತ್ತಿದ್ದೇನೆ, ಕ್ಷಮಿಸಿ, ಸಾರ್"

"ಇಲ್ಲವಯ್ಯ, ನಾನೇ ನಿನ್ನನ್ನು ಕ್ಷಮೆ ಕೇಳಬೇಕೋ ಏನೋ ! ಮನೆಯಲ್ಲಿ ಪ್ರಿನ್ಸಿಪಾಲರು ನಿನ್ನನ್ನು ಏನಾದರೂ ಕೇಳಿದರೋ ?"

"ಕೇಳಿದರು, ಸಾರ್"

"ಅದಕ್ಕೆ ನಾನೇ ಕಾರಣ ! ಈ ಸುಂದರೇಶನ ಮಾತನ್ನು ನಂಬಿ, ನಿಮ್ಮ ಸೋದರ ಮಾವನಿಗೆ ನಿನ್ನ ವಿಚಾರವನ್ನು ನಾನಾಗಿ ಹೇಳಿದೆ. ಅವರು ಇದಕ್ಕಾಗಿಯೇ ನನ್ನನ್ನು ಕರೆಕಳುಹಿಸಿದರು ಎಂದುಕೊಂಡೆ ; ಆದರೆ ಅವರಿಗೆ ಈ ವಿಚಾರ ತಿಳಿದೇ ಇರಲಿಲ್ಲ."

"ಅದು ಒಂದು ವಿಚಾರಕ್ಕೆ ಒಳ್ಳೆಯದೇ ಆಯಿತು, ಸಾರ್. ಈ ವಿಚಾರ ಸುಂದರೇಶ ಅವರು ಅವರಲ್ಲಿ ಪ್ರಸ್ತಾಪಿಸುವೆನೆಂದು ಹೇಳಿದ್ದರು ; ಹಾಗೆ ಮಾಡದೆ, ಪದ್ಮನಾಭಶೆಟ್ಟಿ ನನ್ನ ತಂಗಿಯನ್ನು ಮದುವೆಯಾಗಬೇಕೆಂದು ತಿಳಿಸಿದ್ದಾರೆ. ತಾವು ಅಂದೇ ಈ ವಿಷಯ ಹೇಳಿದಿರಿ. ಸೋದರಮಾವ ನನ್ನನ್ನು ಕೇಳಿದರು, ನಾನು ಹೌದೆಂದು ತಿಳಿಸಿದೆ. ಹುಡುಗಿ ಒಪ್ಪಿದ್ದಾಳೋ ಎಂದು ಕೇಳಿದರು, ಹೂ ಎಂದೆ. ಹುಡುಗಿಯ ತಾಯಿ ಒಪ್ಪಿದ್ದಾರೊ ಎಂದು ಕೇಳಿದರು. ನನಗೆ ತಿಳಿಯದು ಎಂದೆ. ಅದಕ್ಕೆ ನಾನು ಪದ್ಮನಾಭಶೆಟ್ಟಿ ಸದ್ಯಕ್ಕೆ ಮದುವೆ ಮಾಡಿಕೊಳ್ಳುವುದಿಲ್ಲವೆಂದು ಹೇಳಿದೆ. ಹಾಗೆ ಅವನೇ ನನಗೆ ತಿಳಿಸಿದ್ದ. ಅಷ್ಟರಲ್ಲೇ ಮಾತುಕತೆ ಮುಗಿಯಿತು. ಆದರೆ ಈ ಸುಂದರೇಶ ಅವರ ವರ್ತನೆ ನನಗೆ ಅರ್ಥವಾಗುತ್ತಿಲ್ಲ, ಸಾರ್."

"ಅವನ ವರ್ತನೆ ಯಾರಿಗೂ ಅರ್ಥವಾಗುವುದಿಲ್ಲವಯ್ಯ !"

"ಅವರು, ತಾವು ಹೇಳಿದ ಹಾಗೆ, ಪದ್ಮನಾಭಶೆಟ್ಟಿ ನನ್ನ ತಂಗಿಯನ್ನು ಮದುವೆಯಾಗಲೇಬೇಕೆಂದು ಹಟಹಿಡಿದಿದ್ದರೆ ಹೇಗೆ, ಸಾರ್ ?"

"ಅವನು ಯಾವುದಕ್ಕೂ ಹಟ ಹಿಡಿಯುವುದಿಲ್ಲ; ಅದು ಅವನ ಸ್ವಭಾವವೇ ಅಲ್ಲ! ಎಲ್ಲಿದ್ದುದನ್ನು ಅಲ್ಲಿಯೇ ಬಿಡುತ್ತಾನೆ. ಪ್ರಿನ್ಸಿಪಾಲರ ಅಭಿಪ್ರಾಯ ಏನು ಎಂದು ತಿಳಿದುಕೊಂಡಿಯೋ ?"

"ತಿಳಿಯುವುದೇನು, ಸಾರ್ ? ಸುಂದರೇಶ ಹೇಳಿದ ಹಾಗೆ ಅವರು ಕೇಳುತ್ತಾರೆ; ಅವರ ಸ್ವಂತ ಅಭಿಪ್ರಾಯವೆನ್ನುವುದು ಇಂಥ ವಿಚಾರಗಳಲ್ಲಿ ಇರದು. ಸುಂದರೇಶ ತವ್ಮ ಹೊಣೆಗಾರಿಕೆಯನ್ನು ತಾನು ಹೊತ್ತುಕೊಳ್ಳುತ್ತಿದ್ದಾರೆಂದು ಅವರಿಗೆ ಅವರ ವಿಚಾರದಲ್ಲಿ ಇನ್ನೂ ಹೆಚ್ಚು ವಿಶ್ವಾಸ. ಸುಂದರೇಶ ಅವರ ನಿಜವಾದ ಉದ್ದೇಶವೇನಿರಬಹುದು, ನನಗೆ ಅರ್ಥವಾಗುತ್ತಿಲ್ಲ, ಸಾರ್"

"ನನಗೆ ತಿಳಿದ ಮಟ್ಟಿಗೆ ಅವನಿಗೆ ಯಾವ ಸ್ಪಷ್ಟ ಉದ್ದೇಶವೂ ಇಲ್ಲ. ಪದ್ಮನಾಭಶೆಟ್ಟಿ ನಿನ್ನ ತಂಗಿಯನ್ನು ಮದುವೆಯಾದರೆ ಒಳ್ಳೆಯದೆಂದು ಅವನ ಅಭಿಪ್ರಾಯ. ಆದರೆ ಪದ್ಮನಾಭಶೆಟ್ಟಿ ಮದುವೆಯಾಗಲು ಒಪ್ಪದೆ ಇದ್ದರೆ ಅವನೇನು ಮಾಡುತ್ತಾನೆ ? ಪದ್ಮನಾಭಶೆಟ್ಟಿ ಮದುವೆಯಾಗುವುದು ಅಸಂಭವವೆಂದು ಸುಂದರೇಶನೇ ನನಗೆ ಹೇಳಿದ."

"ತಮ್ಮನ್ನು ಪ್ರಿನ್ಸಿಪಾಲರು ಕರೆಕಳುಹಿಸಿದ ಉದ್ದೇಶವೇನು ಸಾರ್, ಕೇಳಬಹುದೆ ?"

"ಪದ್ಮನಾಭಶೆಟ್ಟಿಯ ತಾಯಿಗೆ ಏನೋ ಮಾನಸಿಕ ಬೇನೆಯೆಂದು ನಿನಗೆ ತಿಳಿದಿದೆಯಲ್ಲ. ಅದರ ಚಿಕಿತ್ಸೆಗೆ ವ್ಯವಸ್ಥೆಮಾಡುವುದು ಸಾಧ್ಯವೇ ಎಂದು ಕೇಳುವುದಕ್ಕೆ. ತಾಯಿಯ ಪರೀಕ್ಷೆ, ಚಿಕಿತ್ಸೆ ಅಲ್ಲಿ ನಡೆಯುವುದು ಸಾಧ್ಯವಿಲ್ಲ; ಅದಕ್ಕಾಗಿ ಇಲ್ಲಿಗೆ ಬರಬೇಕೆಂದಿದ್ದಾನಂತೆ ಪದ್ಮನಾಭಶೆಟ್ಟಿ."

"ಅದನ್ನು ನನ್ನ ಮುಂದೆಯೂ ಹೇಳಿದ್ದ"

"ಅವನು ಇಲ್ಲಿಗೆ ಬಂದಾಗ ಮದುವೆಯ ವಿಚಾರ ಪ್ರಸ್ತಾಪಮಾಡಬಹುದು ಎಂದು ಅವರ ಆಶಯ. ಕೆಲಸ ದೊರೆತರೂ, ಈ ಸೌಲಭ್ಯ ಇಲ್ಲದೆ, ಅವನು ಇಲ್ಲಿಗೆ ಬರಲಾರ. ಅದನ್ನು ನನ್ನ ಮುಂದೆಯೇ ಹೇಳಿದ್ದ."

"ತಾವು ಒಪ್ಪಿದ್ದೀರ, ಸಾರ್ ?"

"ಒಪ್ಪದೆ ಇರಲು ಸಾಧ್ಯವೆ ? ಬರಲಿ, ಪರೀಕ್ಷೆಮಾಡಿಸೋಣ. ಪದ್ಮಾವತಿಯ ಯೋಚನೆ ಆಕೆಗೆ ತುಂಬ ಇದೆಯಂತೆ. ಮಗಳು ಇಲ್ಲಿದ್ದುಬಿಟ್ಟದ್ದಾಳೆ ಎನ್ನುವ ಕೊರಗು ಇದ್ದರೂ ಇರಬಹುದು. ಇಲ್ಲಿಗೆ ಬಂದ ಮೇಲೆ ಹೇಗಾಗು

ತ್ತದೆ ಎಂದು ನೋಡೋಣ."

"ಆದರೆ ಈ ವಿಚಾರದಲ್ಲಿ ತಾವು ನನಗೆ ಸಹಾಯ ಮಾಡಲು ಸಾಧ್ಯವೇ ಸಾರ್ ? ಅದನ್ನು ಕೇಳೋಣವೆಂದೇ ಬಂದೆ. ಸಂಕೋಚವಾಯಿತು ; ಆದರೂ ಗಟ್ಟಿ ಮನಸ್ಸು ಮಾಡಿ ಬಂದೆ. ತಾವು ಏನೂ ತಿಳಿದುಕೊಳ್ಳದಿದ್ದರೆ......."

"ತಿಳಿದುಕೊಳ್ಳುವುದು ಏನೂ ಇಲ್ಲ, ಮೋಹನ. ಆದರೆ ಇಂಥ ವಿಚಾರ ಗಳಲ್ಲಿ ನಾನು ಕೈ ಹಾಕುವುದು ಅಷ್ಟು ಉಚಿತ ಅಲ್ಲ ಎನಿಸುತ್ತದೆ. ನೋಡು ನಿಮ್ಮ ಸೋದರಮಾವನಿಗೆ, ಕಾರಣ ಇಲ್ಲದೆ, ನಿನ್ನ ವಿಚಾರ ಹೇಳಿ ನಿನಗೆ ಪೇಚಾಟವಾಗಲಿಲ್ಲವೆ ?"

"ನನಗೆ ಪೇಚಾಟವೇನಿಲ್ಲ, ಸಾರ್. ಒಳ್ಳೆಯದೇ ಆಯಿತು !"

"ಆದರೂ, ಸುಂದರೇಶನ ಕೈವಾಡ ಇಷ್ಟೊಂದು ಇರುವಾಗ ಏನು ಮಾಡಿದರೆ ಏನೋ ? ಯಾವ ಹುತ್ತದಲ್ಲಿ ಯಾವ ಹಾವನ್ನು ಹುದುಗಿಸಿಟ್ಟಿ ದ್ದಾನೋ ? ಅದನ್ನು ತಿಳಿಯದೆ ಕೈಯಾಡಿಸುವ ಹಾಗಿಲ್ಲ. ತಿಳಿಯಬೇಕೆಂದರೆ ಅದು ಭಗೀರಥ ಪ್ರಯತ್ನ !"

"ಹಾಗಲ್ಲ, ಸಾರ್. ನನ್ನ ತಂಗಿಗೆ ಬೇರೆ ವರನನ್ನು ಹುಡುಕುವ ಹೊಣೆ ನಾನು ಹೊತ್ತುಕೊಳ್ಳುತ್ತೇನೆ. ಆದರೆ ಪ್ರಿನ್ಸಿಪಾಲರಿಗೆ ತಿಳಿಸಲು ಸಾಧ್ಯವೇ ?"

"ಯಾವ ವರನನ್ನು ನೋಡಿದ್ದೀ ?"

"ಪದ್ಮಾವತಿಗೆ ಪರಿಚಿತರಾದ ವಕೀಲರೊಬ್ಬರು ಮಂಗಳೂರಿನಲ್ಲಿದ್ದಾರಂತೆ. ಅವರ ಮಗನೊಬ್ಬನಿದ್ದಾನಂತೆ; ಪದ್ಮಾವತಿ ಹೇಳಿದಳು. ಪದ್ಮನಾಭಶೆಟ್ಟಿಗೆ ಹೇಳಿದರೆ, ಅವನು ವಕೀಲರನ್ನು ಕಂಡು ಮಾತನಾಡುತ್ತಾನಂತೆ, ಆ ಹುಡು ಗನೂ ಪದ್ಮನಾಭಶೆಟ್ಟಿಯ ಸ್ನೇಹಿತನಂತೆ. ಅದೇನೂ ಕಷ್ಟವಾಗದು ಎಂದು ಅವಳ ನಿರೀಕ್ಷೆ."

"ಈ ವಿಚಾರ ನನಗೆ ತಿಳಿದಿದೆ, ಸುಂದರೇಶನೇ ಹೇಳಿದ. ಅವನಿಗೂ ಈ ಹುಡುಗ ಗೊತ್ತಂತೆ. ಅದನ್ನು ವ್ಯವಸ್ಥೆ ಮಾಡುವುದೂ ಅವನೇ ಮಾಡಿದರೆ ಒಳ್ಳೆಯದು."

"ಆದರೆ ಅವರೊಂದಿಗೆ ಈ ವಿಚಾರ ಪ್ರಸ್ತಾಪ ಮಾಡಿದಾಗ, ಅದೆಲ್ಲ ಆಗುವುದಿಲ್ಲವಯ್ಯ ; ತಂದೆ ತಾಯಿಯರಿಗೆ ಜಗಳ ; ಅವರಿಬ್ಬರೂ ಒಪ್ಪುವು ದಿಲ್ಲ ; ತಾಯಿ ಬೆಂಗಳೂರು, ತಂದೆ ಮಂಗಳೂರು ಎಂದು ಬಿಟ್ಟರು."

"ಇರಲಿ, ನಾನು ಹೇಳಿ ನೋಡುತ್ತೇನೆ. ಅದು ಆಗುವುದಿದ್ದರೆ ಒಳ್ಳೆಯದೇ! ಪ್ರಿನ್ಸಿಪಾಲರೇನು ಅಡ್ಡಿ ಬರುವುದಿಲ್ಲ. ಅಷ್ಟು ನಾನು ಭರವಸೆ ಕೊಡುತ್ತೇನೆ. ಮಾಡುವ ಪ್ರಯತ್ನ ಮಾಡಬೇಕು. ಇಷ್ಟರ ಮೇಲೆ ಹೇಗಾಗುವುದೋ ನೋಡೋಣ."

ಮೋಹನನಿಗೆ ಇಷ್ಟರಿಂದಲೇ ಸಮಾಧಾನವಾಯಿತು. ಧನ್ಯವಾದಗಳನ್ನು ಹೇಳಿ ನಮಸ್ಕಾರ ಮಾಡಿ ಹೊರಟ. ಸುಂದರೇಶ ನನಗೆ ಹೇಳಿದ ವಿವರಗಳನ್ನೆಲ್ಲ ಅವನಿಗೆ ಹೇಳುವುದೇ ಬೇಡವೇ ಎಂದು ನನಗೆ ಸಂದೇಹವಾಗಿದ್ದಿತು; ಎಲ್ಲವನ್ನೂ ಹೇಳುವುದು ಬೇಡವೆಂದುಕೊಂಡೆ. ಆದರೂ ಮೋಹನನ ಮನಸ್ಸಿಗೆ ನೆಮ್ಮದಿಯಾಗುವಷ್ಟು ಮಾತ್ರ ಪ್ರಕಟಪಡಿಸಿದ್ದೆ. ಆದರೆ ವಕೀಲರ ಮಗನನ್ನು ಮೋಹನನ ತಂಗಿಗೆ ತಂದುಕೊಳ್ಳುವುದು ಕಷ್ಟವೆಂದು ಸುಂದರೇಶ ಮೋಹನನಿಗೆ ಹೇಳಿದ್ದಾನಲ್ಲವೆ? ನನ್ನ ಮುಂದೆ ಅದು ಕಷ್ಟವಾಗದು ಎಂದಿದ್ದ. ಇದರ ಒಳಗುಟ್ಟೇನಿದ್ದೀತು? ಮೋಹನನಿಗೆ ಒಮ್ಮೆಲೇ ಧೈರ್ಯ ಬರಬಾರದೆಂದೋ? ಅಥವಾ ವಿಷಯ ಇತ್ಯರ್ಥವಾಗುವವರೆಗೆ ಆಶ್ವಾಸನೆ ಕೊಡಬಾರದೆಂದೋ" ಎಳೆಯ ವಯಸ್ಸಿನ ಮೋಹನನ ಮುಂದೆ ಎಲ್ಲ ವಿವರಗಳನ್ನೂ ಒಮ್ಮೆಲೆ ಹೇಳಬಾರದೆಂದು ಸುಂದರೇಶ ನಿರ್ಧರಿಸಿದ್ದರೆ ಆಶ್ಚರ್ಯವಲ್ಲ. ಆದರೆ ಇಷ್ಟೊಂದು ಗೊಂದಲದ ಕಣ್ಣಾಮುಚ್ಚಾಲೆಯಲ್ಲಿ ಸುಂದರೇಶ ಯಾರಿಗೆ ಹೇಳಿರುವುದು ನಿಜ? ಯಾರಿಗೆ ಹೇಳಿರುವುದು ಸುಳ್ಳು? ಇವನು ಯಾರನ್ನು ಸಮಾಧಾನ ಮಾಡುತ್ತಿದ್ದಾನೆ, ಯಾವ ಮಗುವನ್ನು ತೂಗುತ್ತಿದ್ದಾನೆ? ಯಾರ ಮಗುವನ್ನು ಚಿವುಟ ಅಳಿಸುತ್ತಿದ್ದಾನೆ? ಎನ್ನುವುದು ಗೊತ್ತಾಗಲಿಲ್ಲ. ಸುಂದರೇಶ ಯಾರ ವಕಾಲತ್ತು ವಹಿಸಿ ಕೆಲಸ ಮಾಡುತ್ತಾನೆಂಬುದೂ ಸ್ಪಷ್ಟವಾಗುವುದಿಲ್ಲ. ಪ್ರಿನ್ಸಿಪಾಲರಿಗೆ ಅವನು ತಮ್ಮ ಅಚ್ಚುಮೆಚ್ಚಿನ ಬಂಟನೆಂದೇ ಕಲ್ಪನೆ. ಮೋಹನನಿಗೆ ತನ್ನ ವಿಶ್ವಾಸಿಯೆಂದೇ ನಂಬಿಕೆ; ಪದ್ಮನಾಭಶೆಟ್ಟಿಗೆ ತನಗೆ ಉಪಕಾರಿಯೆಂದೇ ಎಣಿಕೆ. ಹೀಗೆ ಎಲ್ಲರ ಕಣ್ಣಿಗೂ ಮಣ್ಣನ್ನು ತೂರಿ ಸುಂದರೇಶ ಏನು ಸಾಧಿಸಲಿದ್ದಾನೆ?

ಮೋಹನನನ್ನು ಕಳುಹಿಸಿಕೊಟ್ಟು, ಮತ್ತೆ ಓದುವ ಉದ್ದೇಶದಿಂದ ಕುರ್ಚಿಯಲ್ಲಿ ಕುಳಿತೆ. ಓದುವುದು ಸಾಧ್ಯವಾಗಲಿಲ್ಲ. ಸುಂದರೇಶನೇ ನನಗೆ ದೊಡ್ಡ ಸಮಸ್ಯೆಯಾಗಿಬಿಟ್ಟಿದ್ದ. ಇವನ ವ್ಯಕ್ತಿತ್ವವನ್ನು ವಿಶ್ಲೇಷಣ ಮಾಡುವ

ಕಾತರವೇ ನನಗೆ ಹೆಚ್ಚಾಯಿತು. ಈ ಮಧ್ಯೆ ಪದ್ಮನಾಭಶೆಟ್ಟಿ ಮದುವೆ ಮಾಡಿಕೊಳ್ಳದೆ ಇರುವುದು ಏತಕ್ಕೆ ಎಂದು ಬಗೆಹರಿಯಲಿಲ್ಲ. ತಾಯಿಯ ಬೇನೆಯೇ ಮುಖ್ಯ ಕಾರಣವೆ ? ಅಥವಾ ತಂಗಿಯ ಹಿತಕ್ಕೆ ಅಡ್ಡಿ ಬರಬಾರದೆಂದು ತಾನು ಹಿಂದೆ ಸರಿದಿದ್ದಾನೋ ? ಪದ್ಮಾವತಿ ಅವನಿಗೆ ಮೋಹನನ ವಿಚಾರ ಬರೆದಿರಲಾರಳೆ ? ಮಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ತಾಯಿ ಚಡಪಡಿಸುತ್ತಿದ್ದರೆ ಅದಕ್ಕೆ ಇದೇ ಕಾರಣವಾಗಿರಬಾರದೆ ? ಎಲ್ಲಕ್ಕೂ ಮೀರಿ, ಮಂಗಳೂರಿನ ಶೆಟ್ಟರ ಸಂಬಂಧವನ್ನು ಅಯ್ಯರಾದ ಇವರು ಹೇಗೆ ಬೆಳೆಸುತ್ತಾರೆ ? ಇದಕ್ಕೆ ಯಾರೂ ಅಡ್ಡ ಮಾತಾಡಿದಂತೆ ನನಗೆ ನೆನಪಿಲ್ಲ. ಸುಂದರೇಶನೇನೋ ಇದನ್ನು ತೇಲಿಸಿ ಮಾತನಾಡಿದ್ದ. ಆದರೆ ಜಂಬುನಾಥಯ್ಯರು ಇದನ್ನು ಆಕ್ಷೇಪಣೆ ಎನ್ನಬಹುದಾದ ರೀತಿಯಲ್ಲಿ ಹೇಳಲಿಲ್ಲ. ಹುಡುಗ-ಹುಡುಗಿ ಒಪ್ಪಿದರೂ, ಕಡೆಗೆ ಮದುವೆಯಾದರೂ, ಹಿರಿಯರು ಜಾತಿಯ ವಿಚಾರ ಒಂದು ಮಾತನ್ನಾದರೂ ಎಸೆಯದೆ ಸುಮ್ಮನಿರುತ್ತಾರೆಯೇ ? ಇದು ನನಗೆ ಆಶ್ಚರ್ಯವೆನಿಸಿದರೂ, ಅಸಂಭವವೆನಿಸಲಿಲ್ಲ. ಕಾಲ ಹೇಗೂ ಬದಲಾಯಿಸಿದೆಯೆಂದು ಕಂಡುಕೊಂಡ ಅವರು ಅಡ್ಡ ಮಾತೇಕೆಂದು ಸುಮ್ಮನಿದ್ದರೂ ಇದ್ದಾರು ! ಹೀಗೆಲ್ಲ ಯೋಚನೆ ಮಾಡುತ್ತ ಕುಳಿತೇ ಸುಮಾರು ಹೊತ್ತಾಯಿತು.

ಗಂಟೆ ಹನ್ನೊಂದಾದರೂ ಮಲಗದೆ ಕುಳಿತೇ ಇದ್ದ ನನ್ನನ್ನು ಭಾವ ಸಮಾಧಿಯಿಂದ ಎಬ್ಬಿಸಲು ಮಡದಿ ಬರದೆ ಇರುತ್ತಾಳೆಯೇ ? ಬಂದವಳು "ಏನು ಯೋಚನೆ ಮಾಡುತ್ತಿದ್ದೀರಿ ?" ಎಂದು ಕೆದಕದೆ ಇರುತ್ತಾಳೆಯೇ ? ಕೆದಕಿದರೆ ಧೂಳು ಹಾರದೆ ಇರುತ್ತದೆಯೇ ? ನನ್ನ ಯೋಚನೆಯನ್ನು ನನ್ನ ಹೆಂಡತಿಗೆ ಹೇಳದೇ ಇದ್ದರೆ ಹೇಗೆ ? "ಈ ಸುಂದರೇಶ ಎಷ್ಟು ಗದ್ದಲ ಮಾಡಿದ್ದಾನೆ ಗೊತ್ತೇ ನಿನಗೆ ? ಮೋಹನ, ಪ್ರಿನ್ಸಿಪಾಲರ ತಂಗಿಯ ಮಗ, ಇಲ್ಲಿಗೆ ಬಂದಿದ್ದನಲ್ಲ ಪದ್ಮನಾಭಶೆಟ್ಟಿ, ಅವನ ತಂಗಿಯನ್ನು ಮದುವೆ ಮಾಡಿಕೊಳ್ಳಬೇಕೆಂದಿದ್ದಾನೆ. ಸುಂದರೇಶ, ಪದ್ಮನಾಭಶೆಟ್ಟಿಯನ್ನೇ ಮೋಹನನ ತಂಗಿಗೆ ತಂದುಕೊಳ್ಳುವ ಹಂಬಲವನ್ನು ಪ್ರಿನ್ಸಿಪಾಲರ ತಲೆಗೆ ತುರುಕಿದ್ದಾನೆ. ಇತ್ತ ಕಡೆ ಮೋಹನನೂ ಸುಂದರೇಶನನ್ನು ಆಶ್ರಯಿಸಿದ್ದಾನೆ, ಅತ್ತಕಡೆ ಪ್ರಿನ್ಸಿಪಾಲರು ಅವನನ್ನೇ ಹಿಡಿದಿದ್ದಾರೆ. ಇಬ್ಬರಿಗೂ ಕಣ್ಣು ತಪ್ಪಿಸಿ ಸುಂದರೇಶ ನಾಟಕ ನಡೆಸುತ್ತಿದ್ದಾನೆ"

"ಇದು ಹೀಗಾದೀತೆಂದು ನಾನು ಎಂದುಕೊಂಡಿದ್ದೆ. ಪದ್ಮನಾಭಶೆಟ್ಟಿಗೆ ಕೆಲಸ ಕೊಡಿಸಲು ಪ್ರಿನ್ಸಿಪಾಲರು ಮೊದಲು ಒಪ್ಪಲಿಲ್ಲ ಎಂದಿರಲ್ಲ, ಅವೆಲ್ಲ ನಾಟಕವೇ. ಅವರ ತಂಗಿ, ಮಗಳ ಮದುವೆಯಾದರೆ ಸಾಕು, ತಾನು ಮಧುರೆಗೆ ಹೋಗಬೇಕೆಂದು ಹಂಬಲಿಸುತ್ತಿದ್ದಾಳೆ. ಮಧುರೆಯಲ್ಲಿ ಆಕೆಯ ತಮ್ಮನಿದ್ದಾನೆ; ತುಂಬ ಅನುಕೂಲಸ್ಥ. ಅಲ್ಲಿಗೆ ಈ ಮುಂಚೆಯೇ ಹೋಗುತ್ತಿದ್ದರು. ಆದರೆ ಆ ಕಡೆ ಹೋಗಿಬಿಟ್ಟರೆ ಗಂಡು ನೋಡುವುದು ಕಷ್ಟವಾಗುವುದೆಂದು ಹೆದರಿ ಹೋಗಲಿಲ್ಲ. ಹಾದಿಯಲ್ಲಿ ಹೋಗುವ ಹರೆಯದ ಹುಡುಗರನ್ನೆಲ್ಲ ಆಕೆ ಇದೇ ದೃಷ್ಟಿಯಿಂದಲೇ ನೋಡುತ್ತಾಳೆ; ತನ್ನ ಮಗಳಿಗೆ ಜೋಡಿಯ ಗಂಡನಾಗಬಹುದೇ ಎಂದು. ಆಕೆಗೆ ಸುಂದರೇಶ ಅಚ್ಚುಮೆಚ್ಚಿನ ಚಂಡಿಕೇಶ್ವರ. ಆಕೆ ನೋಡುವುದು, ಈತ ವಿಚಾರ ಮಾಡುವುದು ಹೀಗೇ ನಡೆಯುತ್ತಿತ್ತು. ಈಗ ಈ ಹುಡುಗ, ಪದ್ಮನಾಭಶೆಟ್ಟಿ ಬಲೆಗೆ ಬಿದ್ದಿದ್ದಾನೆ. ಅದು ಸರಿ, ಪದ್ಮನಾಭಶೆಟ್ಟಿಯ ತಂಗಿ ಇಲ್ಲಿದ್ದಾಳೆಯೋ? ನೀವು ಆ ವಿಷಯ ಹೇಳಲೇ ಇಲ್ಲ?"

"ಇಲ್ಲೇ ಇದ್ದಾಳೆ; ನಮ್ಮ ಕಾಲೇಜಿನಲ್ಲೇ ಓದುತ್ತಿದ್ದಾಳೆ; ಸೈಕಾಲಜಿಯೋ. ಆದರೆ ಆ ಹುಡುಗಿ ಪದ್ಮನಾಭಶೆಟ್ಟಿಯ ತಂಗಿಯೆಂದು ನನಗೆ ಮೊದಲು ತಿಳಿದಿರಲಿಲ್ಲ. ಪದ್ಮಾವತಿ ಎಂದು ಅವಳ ಹೆಸರು."

"ಪದ್ಮಾವತಿಯೆ? ಹಾಸ್ಟೆಲ್‌ನಲ್ಲೇ ಇದ್ದಾಳಲ್ಲ? ನಮ್ಮ ಮನೆಗೂ ಬಂದಿದ್ದಾಳೆ. ತುಂಬ ಒಳ್ಳೆಯ ಹುಡುಗಿ! ಮೋಹನನಿಗೆ ಸರಿಯಾದ ಜೋಡಿ. ಪದ್ಮನಾಭಶೆಟ್ಟಿಗೂ ಮೋಹನನ ತಂಗಿ ದಮಯಂತಿಗೂ ಸರಿಹೋಗುವುದಿಲ್ಲ ಬಿಡಿ. ದಮಯಂತಿಯ ಬಣ್ಣ ಗಟ್ಟಿ, ಆಕಾರ ಕುಳ್ಳು, ಗುಣವೂ ಅಷ್ಟಷ್ಟೇ. ಸುಂದರೇಶ ಏನನ್ನುತ್ತಾನೆ?"

"ಅವನು ಮೋಹನನಿಗೆ ಹಾಗೇ ಆಗಲಿ ಎಂದಿದ್ದಾನೆ; ಪ್ರಿನ್ಸಿಪಾಲರಿಗೆ ಪದ್ಮನಾಭಶೆಟ್ಟಿಯನ್ನು ದಮಯಂತಿಗೆ ವಿಚಾರಿಸೋಣ ಎನ್ನುತ್ತಾನೆ. ಪದ್ಮನಾಭಶೆಟ್ಟಿಗೆ 'ಇಲ್ಲಿ ನಿನ್ನ ತಂಗಿಗೆ ಅಪಖ್ಯಾತಿ' ಎಂದು ಹೇಳಿದ್ದಾನೆ. ಏನೋ ಸಡಗರದಿಂದ ಕೆಲಸ ಮಾಡುತ್ತಿದ್ದಾನೆ. ಎಲ್ಲಿಗೆ ಇದು ಮುಟ್ಟುವುದೋ ತಿಳಿಯದು!"

"ನಿಮ್ಮನ್ನೂ ಈ ಸಡಗರದಲ್ಲಿ ಸೇರಿಸಿದ್ದಾನೋ?"

"ಸೇರಿಸದೆ ಇದ್ದಿದ್ದರೆ ಇಷ್ಟೇಕೆ ಯೋಚನೆ ಮಾಡಬೇಕಿತ್ತು? ಪ್ರಿನ್ಸಿ

ಪಾಲರ ಮುಂದೆ ಮೋಹನನ ಸಂಕಲ್ಪವನ್ನು ನನ್ನಿಂದಲೇ ಬಾಯಿಬಿಡಿಸಿದ್ದಾನೆ. ಮೋಹನ ನನ್ನ ವಿಚಾರವನ್ನು ಹೇಳುವ ಹಾಗೆ ಮಾಡಿದ್ದಾನೆ. ಪದ್ಮನಾಭಶೆಟ್ಟಿಯನ್ನು ನಮ್ಮ ಮನೆಗೆ ಕಳುಹಿಸಿದವನೂ ಅವನೇ! ಎಲ್ಲ ಕಡೆಗಳಿಂದಲೂ ನನ್ನನ್ನು ಸಿಕ್ಕಿಸಿದ್ದಾನೆ. ನನ್ನ ಮಾನವನ್ನು ನಾನು ಉಳಿಸಿಕೊಳ್ಳುವುದೇ ಕಷ್ಟವಾಗಿದೆ. ಈಗ ಮೋಹನ ಬಂದಿದ್ದನಲ್ಲ, ಇದೇ ವಿಚಾರಕ್ಕೇ!"

"ಸರಿ ಸರಿ, ಇದೊಂದು ಉದ್ಯೋಗವನ್ನು ಗಂಟು ಹಾಕಿಕೊಂಡಿರಿ ಎನ್ನಿ. ಆದರೆ ನೀವು ಏನೂ ಮಾಡುವುದಕ್ಕೆ ಹೋಗಬೇಡಿ! ಯಾವುದು ಹೋಗಿ ಹೇಗೆ ಬರುತ್ತದೆಯೋ! ಸುಂದರೇಶನಿಗೇನು ಅಚಾಡಿಯಿಲ್ಲ, ಪಿಚಾಡಿಯಿಲ್ಲ. ಬೇರೆ ಕೆಲಸವಿಲ್ಲ; ಹೊತ್ತು ಹೋಗಬೇಕಲ್ಲ? ಉಂಡ ಅನ್ನ ಜೀರ್ಣವಾಗುವುದಾದರೂ ಹೇಗೆ? ಎಲ್ಲಿಯದೋ ಗಾಳಿ ಗಂಟಲು! ನಿಮಗೇಕೆ ಆ ಬವಣೆ? ಸುಮ್ಮನಿರಿ!" ಎಂದಳಾಕೆ! ಆದರೆ ಇಷ್ಟು ದೂರ ಹೋಗಿ ಸುಮ್ಮನಿರುವುದು ಹೇಗೆ? ಅದಲ್ಲದೆ, ನಾನಾಗಿಯೇ ಹಳ್ಳಕ್ಕೆ ಬಿದ್ದೆನಲ್ಲವೆ? ಸುಂದರೇಶ ಬೀಸಿದ ಬಲೆಯೊಳಗೆ ಬುದ್ಧಿಯಿಲ್ಲದ ಮೀನಾಗಿ ಸೇರಿಕೊಂಡೆ! ಈಗ ಕೈ ಝಾಡಿಸಿಕೊಳ್ಳುವುದು ಹೇಗೆ? ನೇರವಾಗಿ ಹೊರ ಬರುವ ಯೋಚನೆಯನ್ನಾದರೂ ಮಾಡಬೇಕು, ಇದೆಲ್ಲ ನನ್ನಾಕೆಗೆ ತಿಳಿಯುವುದಿಲ್ಲ. ನಾನು ಹಳ್ಳದೊಳಗೆ ಬೀಳದಿರುವ ಆನೆಯೆಂದೇ ಆಕೆಯ ಗ್ರಹಿಕೆ! ಆಕೆಗೆ ನಡೆದುದನ್ನೆಲ್ಲಾ ವಿಸ್ತಾರವಾಗಿ ಹೇಳಲು ಹೊರಟರೆ "ಅವಿದಿತ ಗತ ಯಾಮಾ ರಾತ್ರಿ ದೇವ ವ್ಯೆರಂ ಸೀತ್" ಎಂದು ಕವಿ ಹೇಳಿದಂತೆ ಆಗುತ್ತದೆ. ಅಥವಾ ಹೇಳಿ ಪ್ರಯೋಜನವೇನು? ಧರ್ಮಕಾರ್ಯಕ್ಕೆ ಅಡ್ಡಿ ಬರುತ್ತದೆ ಅಷ್ಟೆ. ಇದು ಧರ್ಮಕಾರ್ಯವೇ ನಿಜ, ಧರ್ಮಚಕ್ರ ಎನ್ನುವ ಹಾಗೆ! ಬೆಲೆಯಿಲ್ಲದೆ ಕೆಲಸ.

ಆಕೆಯ ಸಮಾಧಾನಕ್ಕೆಂದು ಹೂಗುಟ್ಟಿ ಮಲಗುವ ಮನೆಯತ್ತ ನಡೆದೆ. ಮಲಗಿದರೆ ನಿದ್ರೆ ಬರುತ್ತದೆಯೆ, ಮಿದುಳಿನ ಮೇಲೆ ಇಷ್ಟು ಒತ್ತಡವಿರುವಾಗ? ಒಂದು ಜಾವ ಹಾಗೇ ಕಣ್ಣು ಮುಚ್ಚಿದಾಗ ಒಂದು ಕನಸು ಅಥವಾ ಒಂದು ಕನವರಿಕೆ. ಪ್ರಿನ್ಸಿಪಾಲರ ಮನೆಯಲ್ಲಿ ಮದುವೆ, ತುಂಬ ಸಂಭ್ರಮದಿಂದ ಪ್ರಿನ್ಸಿಪಾಲರೇ ಓಡಾಡುತ್ತಿದ್ದಾರೆ. ಮೋಹನ ಪದ್ಮಾವತಿಯರು ಮದುವಣಿಗರು, ಮದುಮನೆಯಲ್ಲಿ ಪ್ರಿನ್ಸಿಪಾಲರ ಜೊತೆ

ಓಡಾಡುತ್ತ ಮತ್ತೊಬ್ಬ ಹಿರಿಯ ಹೆಂಗಸಿದ್ದಾರೆ. ; ಇಬ್ಬರೂ ಸಡಗರದಲ್ಲಿ ಪಾಲುಗೊಳ್ಳುತ್ತಿದ್ದಾರೆ! ನಾನು ತಾಂಬೂಲಕ್ಕೆ ಕೈ ಒಡ್ಡಿದಾಗ ಪ್ರಿನ್ಸಿಪಾಲರು ಭರದಿಂದ ಕೈಕುಲುಕಿ "ನಿಮಗೆ ಸಂತೋಷವೋ ?" ಎಂದು ಹೇಳುತ್ತಾರೆ. "ಅಲ್ಲವೆ, ಮತ್ತೆ" ಎಂದು ಹೇಳಬೇಕೆಂದು ಬಾಯಿ ತೆರೆದವನು ಹಾಗೆಯೇ ಎಚ್ಚರಗೊಂಡೆ. ಕನಸುಗಳಲ್ಲಿ ಕಾಮನಾಪೂರಣವೇ ಪ್ರಯೋಜನ ಎಂದು ನಮ್ಮ ಶಾಸ್ತ್ರ, ಸೈಕಾಲಜಿ ಹೇಳುವುದುಂಟು. ಮೋಹನನ ಮದುವೆಯೇನೋ ಕಾಮನೆ ಎಂದು ಒಪ್ಪಿಕೊಳ್ಳುತ್ತೇನೆ. ಆದರೆ ಕನಸಿನಲ್ಲಿ ಪ್ರಿನ್ಸಿಪಾಲರ ಜೊತೆ ಓಡಾಡುತ್ತಿದ್ದವರು ಯಾರು? ಪ್ರಿನ್ಸಿಪಾಲರು ಒಬ್ಬಂಟಿಗರಾಗಿದ್ದಾರೆಂದು ನಾನು ಆಗಾಗ ಮರುಗುತ್ತಿದ್ದುದುಂಟು. ಆದರೆ ಅವರಿಗೆ ಮತ್ತೆ ಮದುವೆ ಯಾಗಬೇಕೆಂದು ನಾನೆಂದೂ ಬಯಸಿರಲಿಲ್ಲ. ಈ ಕನಸಿನ ಒಗಟನ್ನು ಬಿಡಿಸುತ್ತ ನಿದ್ರೆಯನ್ನೂ ಕೆಡಿಸಿಕೊಂಡು, ವಿಚಾರಧಾರೆಯೊಳಗೆ ಜಾರಿದೆ.

ನಿಜವೇ ಈ ಕನಸಿನಲ್ಲಿ ಕಂಡ ಸಂಭ್ರಮ ಪ್ರಿನ್ಸಿಪಾಲರ ಮನೆಯಲ್ಲಿ ಮದುವೆ ಯಾದರೆ ಇರದು. ಸಂಭ್ರಮ ಹೇಗೆ ಬರುತ್ತದೆ? ಪ್ರಿನ್ಸಿಪಾಲರಿಗೆ ಹೆಂಡತಿ ಯಿಲ್ಲ, ಅವರ ತಂಗಿಗೆ ಗಂಡನಿಲ್ಲ. ಪದ್ಮನಾಭಶೆಟ್ಟಿಗೆ ತಂದೆಯಿಲ್ಲ. ಸುಂದರೇಶ ಕಟ್ಟುತ್ತಿರುವ ಬ್ರಹ್ಮ ಗಂಟಿನ ಬಲದಿಂದ ದಮಯಂತಿ ಮಂಗಳೂರಿನ ವಕೀಲರ ಮಗನನ್ನು ಮದುವೆಯಾಗುವುದಾದರೆ, ಆ ವಕೀಲರೂ ಹೆಂಡತಿಯನ್ನು ಬಿಟ್ಟಿದ್ದಾರೆ! ವಿಧುರರು, ವಿಧವೆಯರು ಇವರದ್ದೇ ಓಡಾಟವಲ್ಲವೆ? ಇನ್ನು ಸುಂದರೇಶನಿಗಂತೂ ಮದುವೆಯೇ ಆಗಿಲ್ಲ ; ಅವನದ್ದೂ ಒಂಟಿ ಓಡಾಟವೇ. ನಾವು ದಂಪತಿಗಳು ಓಡಾಡಿದರೇ ಮದುವೆ ಮನೆಗೆ ಕಳೆ! ಧಾರೆಯೆರೆಸಿಕೊಳ್ಳುವವರು ಯಾರು? ಧಾರೆಯೆರೆಯುವವರು ಯಾರು? ಹಿಂದೆ ಯಾರದ್ದೋ ಮದುವೆಯ ಸಮಯದಲ್ಲಿ 'ಇದಿ ನ್ಯಾಯಮಾ ಶ್ರೀರಾಮ ಚಂದ್ರ?' ಎಂದು ಓಲಗದವರ ಊದಿದರಂತೆ. ಹೀಗೆಯೇ ನಡೆಯುತ್ತದೆ ಇಲ್ಲಿಯೂ.

ಆದರೆ ಇದೆಂಥ ಆಲೋಚನೆ? ಮದುವೆಯೇ ನಿಶ್ಚಯವಿಲ್ಲ, ಸಂಭ್ರಮದ ವಿಚಾರ ಈಗಲೇ ಏನು? ದೂರ ನಿಂತು ನೋಡುವವರಿಗೆ ಈ ದೂರಾಲೋಚನೆ ಸಾಧ್ಯ ; ಹತ್ತಿರದಲ್ಲೇ ಇದ್ದು, ಸುಳಿಗೆ ಸಿಕ್ಕವರಿಗೆ ದೂರದ ಕಾತರವಿರದು. ಕನಸು ಕಾಣುವವರು ನಮ್ಮಂಥ ನಿರುತ್ಸಕರು. ಸುಂದರೇಶನೇನು ಕನಸು ಕಾಣುತ್ತಾನೆಯೇ? ದಿನವೆಲ್ಲ ಕೆಲಸ ಮಾಡಿ, ಮೈ ದಣಿದರೂ ಮನಸ್ಸನ್ನು

ವ್ಯಥೆಗೀಡುಮಾಡಿದೆ. ನಿಶ್ಚಿಂತೆಯಿಂದ ಮಲಗಿ ಜನಕ ಮಹಾರಾಜನಂತೆ ಸುಖವಾಗಿ ಗಾಢನಿದ್ರೆ ಪಡೆಯುತ್ತಾನೆ. ನನ್ನ ಹಾಗೆ ನಿದ್ರೆಗೆಟ್ಟು ಕನವರಿಸುವುದಿಲ್ಲ. ಈ ಯೋಗ್ಯತೆ ನನಗೇಕೆ ಬರದು ಎಂದು ನಾನು ಆಗಾಗ ಪರಿತಪಿಸುವುದುಂಟು. ಆದರೆ ಇದು ಜಾಯಮಾನದ ಮಾತು, ಸ್ವಭಾವದ ಮಾತು. ಬೇಕೆಂದರೆ ಬರುವುದಿಲ್ಲ, ಬೇಡವೆಂದರೆ ಹೋಗುವುದಿಲ್ಲ. ಯಾವುದೋ ಯೋಚನೆಗಳನ್ನು ತಲೆಗೆ ಹಚ್ಚಿಕೊಂಡು ನಿದ್ರೆಮಾಡದೆ ಒದ್ದಾಡುವುದು ನನ್ನ ಜಾಯಮಾನ, ಸ್ವಭಾವ. ಅದನ್ನು ತಪ್ಪಿಸಲು ಸಾಧ್ಯವೆ?

ಅಂತೂ ರಾತ್ರಿ ಕಳೆಯಿತು. ಬೆಳಗೆದ್ದ ಕೂಡಲೇ ಇನ್ನೂ ಈ ವಿಚಾರವನ್ನು ಆಲೋಚಿಸಲೇಕೂಡದೆಂದು ನಿರ್ಧರಿಸಿದೆ. ಹೀಗೆಯೇ ನಾಲ್ಕೈದು ದಿನಗಳು ಕಳೆದವು. ಮಲಗಿರುವ ನಾಯಿ ಮಲಗಿಯೇ ಇರಲಿ, ಎಚ್ಚರಗೊಳಿಸುವುದು ಬೇಡ ಎಂದು ಇಂಗ್ಲಿಷ್ ರಾಜಕಾರಣಿಯೊಬ್ಬ ಹೇಳಿದನಂತೆ. ಈ ಹೇಳಿಕೆಯನ್ನು ಶಿರಸಾವಹಿಸಿ, ನಾಲ್ಕು ದಿನಗಳು ಸುಂದರೇಶನನ್ನಾಗಲೀ, ಪ್ರಿನ್ಸಿಪಾಲರನ್ನಾಗಲೀ, ಮೋಹನನನ್ನಾಗಲೀ ನೋಡದೆ ಕಳೆದೆ. ನೋಡಲಿಲ್ಲವೆಂದರೆ ನನ್ನ ಪ್ರಯತ್ನ ಅದರಲ್ಲಿ ಏನೂ ಇರಲಿಲ್ಲ. ಅವರೇ ನನ್ನನ್ನು ನೋಡಬಯಸಿ ನನ್ನ ಬಳಿ ಬರಲಿಲ್ಲ.

೧೨

ಐದನೆಯ ದಿನ ಬೆಳಿಗ್ಗೆ ಎಂಟು ಗಂಟೆ ಸಮಯಕ್ಕೆ ಮೋಹನ ಮತ್ತು ಪದ್ಮಾವತಿ ಇವರು ಮನೆಯ ಮುಂದಿದ್ದರು. ನಾಲ್ಕು ದಿನಗಳ ವ್ರತ ಕೆಟ್ಟಿತೆಂದು ಮನಸ್ಸಿಗೆ ಖೇದವಾಯಿತು; ಆದರೂ ವಿಧಿಯಿಲ್ಲದೆ ಭಾವೀ ದಂಪತಿಗಳನ್ನು ಕರೆದು ಕೂರಿಸಬೇಕಾಯಿತು. ಮೋಹನನೇ ಆರಂಭಿಸಿದ—"ಬೆಳಿಗ್ಗೆ ತಮಗೆ ಸ್ವಲ್ಪ ತೊಂದರೆ ಕೊಡಲು ಬಂದಿದ್ದೇವೆ, ಸಾರ್" ಪದ್ಮಾವತಿಯ ಪ್ರಸ್ತಾಪ ಪರೋಕ್ಷವಾಗಿ ಈಗಾಗಲೇ ಹಲವು ಬಾರಿ ಬಂದಿದ್ದರೂ, ಅವಳ ಮುಂದೆಯೇ ಈ ವಿಚಾರ ಪ್ರಸ್ತಾಪಿಸುವ ಸಂದರ್ಭ ಬಂದಿರಲಿಲ್ಲ. ಈ ವಿಚಾರವನ್ನು ಪ್ರಸ್ತಾಪಿಸಲೇ ಬಂದಿದ್ದಾರೆಂದು ನಾನು ಊಹಿಸಿದೆ. ಆದರೂ ಅವರ ಬತ್ತಳಿಕೆಯಿಂದ ಹೊರ

ಬರುವ ಬಾಣ ಯಾವುದೋ ತಿಳಿಯುವ ಕುತೂಹಲದಿಂದ "ಹೇಳಯ್ಯ, ಈ ಪ್ರಸ್ತಾವನೆ ಬೇಡ!" ಎಂದೆ.

"ಪದ್ಮಾವತಿಯ ಅಣ್ಣನಿಂದ ಈ ಬೆಳಿಗ್ಗೆ ಪತ್ರ ಬಂದಿದೆ, ಸಾರ್. ಈ ವಾರದೊಳಗೆ ಅವರ ತಾಯಿಯನ್ನು ಕರೆದುಕೊಂಡು ಬರುತ್ತಾನಂತೆ."

"ಒಳ್ಳೆಯದು, ಬರಲಿ, ಪರೀಕ್ಷೆಗೆ ವ್ಯವಸ್ಥೆ ಮಾಡೋಣ. ಪದ್ಮಾವತಿಯೇ ಇದ್ದಾಳಲ್ಲ? ಏನಮ್ಮ, ಏನು ಸಮಾಚಾರ ಅವರದ್ದು?"

"ನೀವು ಒಂದು ಬಾರಿ ನೋಡಿ, ಸಾರ್. ಅವರಿಗೆ ಯಾವುದರಲ್ಲೂ ಆಸಕ್ತಿಯಿಲ್ಲ. ಗಡಿಯಾರದ ಹಾಗೆ ನಿಲ್ಲದೆ ಕೆಲಸ ಮಾಡುತ್ತಾರೆ. ಅವರು ನಗು ಮುಖದಿಂದ ಇದ್ದುದನ್ನೇ ನಾನು ನೋಡಿಲ್ಲ. ಎಂದರೆ ಸಿಟ್ಟಾಗುವುದು ಯಾವಾಗಲೂ ಇಲ್ಲ; ತುಂಬ ಸಹನೆ ಅವರಿಗೆ. ನೋಡಿದೊಡನೆ ದುಃಖದ ಜೀವ ಎಂದು ಯಾರಾದರೂ ಹೇಳಬಹುದು. ತಮ್ಮ ಪಾಡಿಗೆ ತಾವು ಇರುತ್ತಾರೆ. ಬೇರೆಯವರೊಡನೆ ಮಾತನಾಡುವುದು ತುಂಬ ಕಡಿಮೆ. ಈಚೆಗೆ ಹಲವಾರು ವರ್ಷಗಳಿಂದ ಅವರಿಗೆ ರಾತ್ರಿ ನಿದ್ರೆ ಬರುವುದು ಅಪರೂಪವಾಗಿ ಬಿಟ್ಟಿದೆ. ದಿನೇ ದಿನೇ ಇಳಿದು ಹೋಗುತ್ತಿದ್ದಾರೆ. ಅಲ್ಲಿನ ವೈದ್ಯರಿಗೆ ತೋರಿಸಿದೆವು. ಅವರು ನೋಡಿ ದೈಹಿಕವಾಗಿ ಬೇನೆಯೇನೂ ಇಲ್ಲವೆಂದರು. ನಿದ್ರೆ ಬರುವ ಮಾತ್ರೆಗಳನ್ನು ಕೊಟ್ಟರು, ಫಲಕಾರಿಯಾಗಲಿಲ್ಲ. ಉಂಡ ಆಹಾರ ಸಮನಾಗಿ ಜೀರ್ಣವಾಗುವುದಿಲ್ಲ. ಏನೋ ಚಿಂತೆಯಿದ್ದೀತು, ಬೆಂಗಳೂರಿನಲ್ಲಿ ತೋರಿಸಿ ಎಂದು ಅಲ್ಲಿನ ವೈದ್ಯರು ಹೇಳುತ್ತಾರೆ. ತಮಗೇನೂ ಚಿಂತೆಯಿಲ್ಲವೆಂದು ನಮ್ಮ ತಾಯಿಯ ವಾದ. ಬೆಂಗಳೂರಿಗೆ ಬರುವುದು ಅವರಿಗೆ ಇಷ್ಟವಿಲ್ಲ. ಮಂಗಳೂರು ಅವರಿಗೆ ಒಗ್ಗಿಹೋಗಿದೆ. ನಾವಿರುವ ಕಡೆ ನೆರೆಹೊರೆ ಅವರಿಗೆ ಹೊಂದಿಕೊಂಡು ಬಿಟ್ಟಿದ್ದಾರೆ."

"ಇದು ಎಷ್ಟು ವರ್ಷಗಳಿಂದ ಹೀಗೆ?"

"ನನಗೆ ನೆನಪಿರುವಷ್ಟು ವರ್ಷಗಳಿಂದಲೂ ಹೀಗೆಯೇ, ಸಾರ್. ನಮ್ಮ ತಂದೆ ತೀರಿಕೊಂಡ ತರುಣದಲ್ಲೇ ಬೆಂಗಳೂರು ಬಿಟ್ಟರಂತೆ, ಆಗಿನ್ನೂ ನಾನೂ ನಮ್ಮಣ್ಣನೂ ಸಣ್ಣಮಕ್ಕಳು. ನಮಗೆ ತಂದೆಯ ನೆನಪೇ ಇಲ್ಲ. ಆಗಿನಿಂದ ಹೀಗೆಯೇ ಎಂದು ಹೇಳುತ್ತಾರೆ. ತಂದೆ ತೀರಿಕೊಂಡುದೇ ಇವರಿಗೆ ದಿಗ್ಭ್ರಮೆ ಹಿಡಿಸಿತೆಂದು ವಕೀಲರು, ವೆಂಕಟಕೃಷ್ಣರಾಯರು ಹೇಳುತ್ತಿದ್ದರು. ಆಗ ನಮ್ಮ

ತಾಯಿಗೆ ತೀರ ಮನೋವೇದನೆಯಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಹವಣಿಸು ತ್ತಿದ್ದರಂತೆ. ನಾವಿಬ್ಬರು ಮಕ್ಕಳಿದ್ದುದು ಅದಕ್ಕೊಂದು ತಡೆಯಾಯಿತಷ್ಟೆ. ಆಗೆಲ್ಲ ಮನೆಯನ್ನು ಸುಧಾರಿಸಿದವರು ಈ ವಕೀಲರೇ. ನಮಗಾಗಿ ತುಂಬ ಶ್ರಮವಹಿಸಿದ್ದಾರೆ ಅವರು. ಈಗ ತಾಯಿಯ ಪರಿಸ್ಥಿತಿ ಸುಧಾರಿಸಿದೆಯೆನ್ನ ಬಹುದು. ಆದರೂ ನಮಗೆ ಆತಂಕವೇ!"

"ಆಗಲಿ ಇಲ್ಲಿಗೆ ಬರಲಿ ಪರೀಕ್ಷೆ ಮಾಡಿಸಿ ನೋಡೋಣ, ಮತ್ತೆ ಏನು ಸಮಾಚಾರ?"

"ಏನಿಲ್ಲ, ಸಾರ್" ಮೋಹನ ಶುರುಮಾಡಿದ. ಏನಿಲ್ಲವೆಂದೇ ಆರಂಭಿಸಿ ಎಲ್ಲವನ್ನೂ ಹೇಳುವುದು ಕೆಲವರ ವಾಡಿಕೆ. "ಇವಳ ಅಣ್ಣ ಕಾಗದ ಬರೆದಿ ದ್ದಾನೆ. ವಕೀಲರ ಮಗನ ವಿಚಾರ. ಹುಡುಗ ಒಪ್ಪುವ ಸಂಭವವಿದೆ. ಆದರೆ ವಕೀಲರು ತಾವಾಗಿ ಸೂಚಿಸಲು ಸ್ವಲ್ಪ ಹಿಂದೆಗೆಯುತ್ತಾರೆ. ಮತ್ತೆ ಯಾರಾ ದರೂ...."

"ಸುಂದರೇಶ ಇದ್ದಾನಲ್ಲ?"

"ಅವರ ಮಾತೆಂದರೆ ಹಲವರಿಗೆ ಅಸಡ್ಡೆ, ಸಾರ್! ಆ ವಕೀಲರಿಗೂ ಇವರಿಗೂ ಹೇಗಿದೆಯೋ, ತಿಳಿಯದು."

"ಅವನ ಕಿವಿಗೆ ಈ ಸುದ್ದಿ ಹಾಕು, ಅವನು ಏನಾದರೂ ವ್ಯವಸ್ಥೆ ಮಾಡುತ್ತಾನೆ."

"ಆದರೆ ಅವರ ಉದ್ದೇಶ ಬೇರೆ, ಸಾರ್. ನಮಗೆ ಅನುಕೂಲವಾಗಿ ಅವರು ಕೆಲಸ ಮಾಡಲಾರರು."

"ನಾನು ಹೇಳುತ್ತೇನೆ, ಕೇಳಿ. ಅವರ ಚಿಂತೆ ಬಿಟ್ಟು ನೆಮ್ಮದಿಯಿಂದಿರಿ."

"ಹಾಗಿದ್ದರೆ ಸರಿ, ಸಾರ್. ಹೋಗಿ ಬರುತ್ತೇನೆ. ತೊಂದರೆಯಾಯಿತು ಕ್ಷಮಿಸಿ" ಎಂದು ಹೇಳಿ ಇಬ್ಬರೂ ಹೊರಬಿದ್ದರು.

ಇಷ್ಟು ದಿವಸ ನೆಮ್ಮದಿಯಿಂದಲೇ ಇದ್ದೆ. ಈ ವಿಚಾರವನ್ನು ಸಾಧ್ಯ ವಾದಷ್ಟೂ ಮನಸ್ಸಿನಿಂದ ಹೊರಗೆ ಹಾಕಿದ್ದೆ. ಈಗ ಇದ್ದಕ್ಕಿದ್ದಂತೆ ಮೋಡ ಕವಿಯಿತು. ಈ ವಾರವೇ ಮಂಗಳೂರಿನಿಂದ ಪದ್ಮನಾಭಶೆಟ್ಟಿಯ ತಾಯಿಯೂ ಬಂದುಬಿಟ್ಟರೆ ಇನ್ನೇನು ರಾದ್ಧಾಂತವೋ ಎನಿಸಿತು. ಇನ್ನೂ ಈ ಯೋಚನೆಗಳ ಸುಳಿಯಲ್ಲೇ ಸಿಕ್ಕು ತೊಳಲುತ್ತಿದ್ದಾಗ, ಭಗವಂತನ ಸಾಕ್ಷಾತ್ಕಾರವಾದ ಹಾಗೆ

ಸುಂದರೇಶ ಪ್ರತ್ಯಕ್ಷನಾದ. ಆಪದ್ಬಾಂಧವನೇ ಅವನು, ಅಡ್ಡಿಯಿಲ್ಲ! ನೆನೆದವರ ಮನದಲ್ಲೇ, ದಾಸರು ಹೇಳಿದ ಹಾಗೆ, ಅಥವಾ ಮನೆಯಲ್ಲೇ ಹಲವು ತೊಡರುಗಳನ್ನು ಒಡ್ಡುವವನೂ ಅವನೇ, ತಡೆಯುವವನೂ ಅವನೇ. ಗಣಪತಿ ವಿಘ್ನಕರ್ತನೂ ಹೌದಂತೆ, ವಿಘ್ನಹರ್ತನೂ ಹೌದಂತೆ. ಸುಂದರೇಶ ಆಕಾರದಲ್ಲಿ ಮಾತ್ರವಲ್ಲ ಸ್ವಭಾವದಲ್ಲಿಯೂ ಗಣಪತಿಯೇ!

"ಬಾರಯ್ಯ, ಇಷ್ಟು ಹೊತ್ತೂ ನಿನ್ನ ಯೋಚನೆಯನ್ನೇ ಮಾಡುತ್ತಿದ್ದೆ. ನಿನಗೆ ನೂರು ವರ್ಷ ಆಯಸ್ಸು, ನಾಟಕದಲ್ಲಿ ಯಾವ ಅಂಕ ಆರಂಭವಾಗಿದೆ ಈಗ? ರಂಗಭೂಮಿಯ ಮೇಲೆ ಸದ್ಯದ ಪಾತ್ರಧಾರಿಗಳು ಯಾರು ಯಾರು? ಏನು ಸಂದರ್ಭ? ಯಾವ ಪ್ರಕರಣ? ಅದಿರಲಿ, ನಾಲ್ಕೈದು ದಿನ ನಿನ್ನನ್ನು ಕಾಣಲೇ ಇಲ್ಲವಲ್ಲ, ಏನು ಕಾರಣ?"

"ಊರಿನಲ್ಲಿರಲಿಲ್ಲ"

"ಯಾವ ಊರಿಗೆ ಹೋಗಿದ್ದೆ? ನಿನಗೆ ಊರು ಬಿಟ್ಟು ಊರಿಗೆ ಹೋಗುವ ಕೆಲಸವೂ ಇರುವುದೆಂದು ನಾನೆಣಿಸಿರಲಿಲ್ಲ."

"ಮಂಗಳೂರಿಗೆ ಹೋಗಿದ್ದೆ."

"ಓಹೋ ನಾಟಕದ ಸಂದರ್ಭದಲ್ಲೇ ತಾನೆ? ನೀನು ನಿಜವಾಗಿ ಕಪಟ ನಾಟಕ ಸೂತ್ರಧಾರಿಯೆ!"

"ಹಾಗೇನಿಲ್ಲ ವೆಂಕಟಕೃಷ್ಣರಾಯರನ್ನು ಕಾಣುವ ಕೆಲಸವಿದ್ದಿತು. ಹೆಂಡತಿ ಹೇಳಿದರು, ಹೋಗಿದ್ದೆ."

"ನೀನೊಬ್ಬನೆ ಹೋಗಿದ್ದೆಯಾ?"

"ಇಂಥ ಕೆಲಸಕ್ಕೆ ಒಬ್ಬನೇ ಹೋಗುವುದೇ? ಆಕೆಯನ್ನೂ ಕರೆದು ಕೊಂಡು ಹೋಗಿದ್ದೆ."

"ಗಂಡ ಹೆಂಡತಿಗೆ ಜಗಳವಲ್ಲವೇನಯ್ಯ?"

"ಎಷ್ಟು ದಿನ ಜಗಳ ಮಾಡುತ್ತಾರೆ? ಸಮಸ್ಯೆಗಳಿಲ್ಲದಿದ್ದರೆ ಎಲ್ಲರೂ ಸ್ವತಂತ್ರರೇ, ಜಗಳವಾಡುವ ಹುರುಪೂ ಇರುತ್ತದೆ. ಸಮಸ್ಯೆ ಪೆಡಂಭೂತ ವಾಗಿ ಮುಂದೆ ನಿಂತರೆ ಇನ್ನೊಬ್ಬರ ಆಶ್ರಯ ಬೇಕೇ ಆಗುತ್ತದೆ. ಮಗಳು ಬ್ಯಾಂಕಿನಲ್ಲಿ ಕೆಲಸಮಾಡುತ್ತಿದ್ದಾಳೆ; ಅದೇ ಬ್ಯಾಂಕಿನಲ್ಲಿ ಕೆಲಸಮಾಡುತ್ತಿರುವ ಭೂಪನೊಬ್ಬ ಇವಳನ್ನು ಮೆಚ್ಚಿಕೊಂಡ. ಮದುವೆಯಾಗುತ್ತೇನೆಂದು ಮುಂದೆ

ಬಂದ. ಇಷ್ಟು ದಿನಕ್ಕೆ ಒಬ್ಬ ಬೆಪ್ಪ ಮುಂದೆ ಬಂದಾಗ ಈಕೆ ಹಿಂದೆ ಹೋದರೆ ಹೇಗೆ? ತಾಯಿ—ಮಗಳು ಇಬ್ಬರೂ ಮಂತ್ರಾಲೋಚನೆ ಮಾಡಿ ವರನನ್ನು ಅಂಗೀಕರಿಸಿದರು. ಆದರೆ ತಂದೆ ಒಪ್ಪುತ್ತಾರೋ ಇಲ್ಲವೋ ಎಂದುಕೊಂಡು ನನ್ನನ್ನು ಕೂಡಿಸಿಕೊಂಡು ತಂತ್ರಾಲೋಚನೆ ಮಾಡಿದರು. ನಾನು ಹುಡುಗ ನನ್ನು, ಹುಡುಗನೇನು, ಮನುಷ್ಯನನ್ನು ನೋಡಿದೆ; ಅವನಿಗೆ ಸದ್ಯಕ್ಕೆ ಹಿರಿಯರು ಯಾರೂ ಇಲ್ಲ. ಒಳ್ಳೆಯದೇ ಆಯಿತು. ಮಂಗಳೂರಿಗೇ ಹೋಗಿ ಬರೋಣ ಎಂದು ಮಗಳನ್ನು ಕರೆದುಕೊಂಡು ಹೊರಟೆ. ಆಕೆಯನ್ನು ಪದ್ಮನಾಭಶೆಟ್ಟಿಯ ಮನೆಯಲ್ಲಿರಿಸಿ ನಾನೊಬ್ಬನೇ ಹೋಗಿ ವಕೀಲರನ್ನು ಕಂಡೆ. ಅವರೂ ಅನಿರೀಕ್ಷಿತವಾಗಿ ಸುಮುಖರಾಗಿದ್ದರು. ಒಂಟಿಯಾಗಿ ಎಷ್ಟು ದಿನ ಇರುತ್ತಾರೆ? ಮಾತಿಗೆ ಮಾತು ಬಂದು "ಅಲ್ಲವಯ್ಯ ಸುಂದರೇಶ, ಅವಳದ್ದೇ ತಪ್ಪಲ್ಲವೇನಯ್ಯ? ಆಸ್ತಿ ಕರಗಿತು ಎಂದು ಗಂಡನನ್ನು ನಿರ್ಲಕ್ಷ್ಯವಾಗಿ ಕಾಣಬಹುದೆ? ಗಂಡಸಿಗೆ ಅಭಿಮಾನವಿರುವುದಿಲ್ಲವೆ?" ಎಂದರು. ನಾನು "ತಮ್ಮ ತಪ್ಪನ್ನು ತಿಳಿದುಕೊಂಡಿದ್ದಾರೆ" ಎಂದು ದನಿಗೂಡಿಸಿದೆ. ಅವರಿಗೆ ಸಂತೋಷವಾಯಿತು. ವರನ ಆಯ್ಕೆಗೆ ಅವರ ಅಂಗೀಕಾರದ ಮುದ್ರೆ ಬಿದ್ದಿತು. ಒಮ್ಮೆ ವರನನ್ನು ನೋಡಿದ್ದರಾಗಿತ್ತು ಎಂದರು ವಕೀಲರು. ಎಷ್ಟಾದರೂ, ವಕೀಲರಲ್ಲವೆ? 'ನಿಮ್ಮ ಮಗಳನ್ನೇ ನೋಡಲ್ಲ, ವರನನ್ನು ಏನು ನೋಡುತ್ತೀರಿ?' ಎಂದು ನಗೆಯಾಡಿದೆ, 'ಹೌದಯ್ಯ ನೋಡಬೇಕು' ಎಂದರು. 'ನೋಡುತ್ತೀರಾ?' ಎಂದೆ, ಕುತೂಹಲದಿಂದ ನನ್ನನ್ನೇ ನೋಡಿದರು. ಮಗಳು ಮಂಗಳೂರಿನಲ್ಲೇ ಇದ್ದಾಳೆ ಎಂದಾಗ ಅವರಿಗೆ ಆಶ್ಚರ್ಯವಾಯಿತು. ಇಬ್ಬರೂ ಕೂಡಿ ಪದ್ಮನಾಭಶೆಟ್ಟಿಯ ಮನೆಗೆ ಹೋದೆವು. ತಂದೆ–ಮಗಳ ಸಮಾಗಮ ಯಶಸ್ವಿಯಾಗಿ, ನಿರಾತಂಕವಾಗಿ ನಡೆಯಿತು. ಮುಂದಿನ ತಿಂಗಳು ಮದುವೆ ತಿರುಪತಿಯಲ್ಲಿ ನಡೆಯುವುದು ನಿಶ್ಚಯವಾಗಿದೆ."

"ತಿರುಪತಿಯಲ್ಲೇನು?"

"ಇಂಥ ಮದುವೆಗಳೆಲ್ಲ ಅಲ್ಲೇ ನಡೆಯಬೇಕಯ್ಯ! ಯಾವುದಕ್ಕೂ ವೆಂಕಟೇಶ್ವರ ಸಾಕ್ಷಿಯಲ್ಲವೆ. ಅಲ್ಲದೆ ವಕೀಲರೂ ಅವರ ಹೆಂಡತಿಯೂ ಒಬ್ಬರನ್ನೊಬ್ಬರು ನೋಡಿ ಹತ್ತಾರು ವರ್ಷಗಳಾಗಿವೆ. ದೇವರ ಸಮ್ಮುಖದಲ್ಲಿಯೇ ಅವರಿಬ್ಬರ ಪರಸ್ಪರ ಸಂದರ್ಶನವಾಗಬೇಕಂತೆ!"

"ಅದಕ್ಕೂ ವ್ಯವಸ್ಥೆ ಮಾಡಿದ್ದೀಯೋ ?"

"ಓಹೋ ಅದೆಲ್ಲ ನಡೆದಿದೆ"

ಮದುವೆಗಳೆಲ್ಲ ತಿರುಪತಿಯಲ್ಲಿ ನಡೆಯಬೇಕೆಂದು ಯಾರು ಯಾವಾಗ ನಿಶ್ಚಯಿಸಿದರೋ ಕಾಣೆ. ವೆಂಕಟೇಶ್ವರ–ಪದ್ಮಾವತಿಯರೇನು ದಾಂಪತ್ಯ ಧರ್ಮಕ್ಕೆ ಆದರ್ಶಗಳಲ್ಲ ಜಗಳವಾಡಿಕೊಂಡು ವೈಕುಂಠವನ್ನು ಬಿಟ್ಟು ಕೊಲ್ಲಾಪುರದಲ್ಲಿ ಲಕ್ಷ್ಮಿ ನಿಂತಳಂತೆ; ವೆಂಕಟೇಶ್ವರ ತಿರುಮಲೆಯನ್ನೇರಿ ದನಂತೆ. ಕಲಿಯುಗದ ಪ್ರಥಮ ಪಾದ ಮುಗಿಯುತ್ತ ಬಂದರೂ ಪದ್ಮಾವತಿ ಬೆಟ್ಟದ ಕೆಳಗೆ ವೆಂಕಟೇಶ್ವರ ಬೆಟ್ಟದ ಮೇಲೆ! ಇಬ್ಬರಿಗೂ ಮುಖಾಬಿಲೆ ಇಲ್ಲ. ಇದನ್ನು ಸ್ಥಳ ಪುರಾಣವೇ ಹೇಳುತ್ತದೆ. ಮನುಷ್ಯರಾದವರು ಅಲ್ಲಿ ಹೋಗಿ ಅವರ ಮುಂದೆ ಮದುವೆ ಮಾಡಿಕೊಂಡು ಅವರಿಗೆ ಪೇಚಾಟ ಪಡಿಸುವುದು ಏಕೆ? ನೆಂಟರು–ಇಷ್ಟರು ಮದುವೆಯ ನೆಪಮಾಡಿಕೊಂಡು ಬರುತ್ತಾರಷ್ಟೆ, ದೇವರ ದರ್ಶನಕ್ಕೆಂದು ಹೊರಟು ಬಿಡುತ್ತಾರೆ! ಮದುವೆಯ ಸಂಭ್ರಮವೆಲ್ಲ ಮದುವಣಿಗರಿಗೆ ಮಾತ್ರ. ನಾನೂ ಇಂಥ ಮದುವೆಗಳಿಗೆ ಹೋಗಿದ್ದೇನೆ; ದೇವಸ್ಥಾನದ ಕಡೆಗೇ ದೃಷ್ಟಿಯೆಲ್ಲ! ನಾನು—

"ಅದು ಸರಿಯಯ್ಯ, ತಿರುಪತಿಗೆ ನಾನೂ ಬರಬಹುದಷ್ಟೆ? ದೇವರ ದರ್ಶನ ಮಾಡಿ ಸುಮಾರು ದಿನ ಆಯಿತು! ಅದಿರಲಿ, ವಕೀಲರ ಮಗ ಪ್ರಿನ್ಸಿ ಪಾಲರ ತಂಗಿಯ ಮಗಳನ್ನು ಮದುವೆ ಮಾಡಿಕೊಳ್ಳಲು ಒಪ್ಪಿದ್ದಾನೋ ?"

"ಒಪ್ಪದೆ ಏನು ಮಾಡುತ್ತಾನೆ? ಅವನೂ ಒಪ್ಪುತ್ತಾನೆ, ಅವನಪ್ಪನೂ ಒಪ್ಪುತ್ತಾನೆ!"

"ಅವನಮ್ಮ ?"

"ಅವನಮ್ಮ ಆಗಲೇ ಒಪ್ಪಿದ್ದಾಳಲ್ಲ? ನಾನು ಇದನ್ನು ಒಪ್ಪಿಸಿಯೇ ಬ್ಯಾಂಕ್ ಕೆಲಸಗಾರರ ದಾಂಪತ್ಯ ನಿಶ್ಚಯಕ್ಕೆ ಒಪ್ಪಿದೆ. ಅಲ್ಲಿ ವಕೀಲರೊಂದಿಗೂ ಈ ವಿಚಾರ ಪ್ರಸ್ತಾಪಮಾಡಿದೆ; ಅವರೂ ಒಪ್ಪಿದರು. ಆದರೆ ಅವರು ಒಂದು ಷರತ್ತು ಹಾಕಿದರು. ಪದ್ಮಾವತಿಯನ್ನು ಮೋಹನನಿಗೆ ತಂದುಕೊಳ್ಳಲು ಅವ ರೊಪ್ಪಬೇಕು; ಹಾಗಾದರೇ ತಮ್ಮ ಮಗನನ್ನು ದಮಯಂತಿಗೆ ಕೊಡುವುದು ಎಂದು. ಈ ವಿಚಾರ ಪ್ರಿನ್ಸಿಪಾಲರಿಗೆ ಬರೆದಿದ್ದಾರೆ ಆಗಲೇ."

ಈ ವಕೀಲರಿಗೆ ಪದ್ಮನಾಭಶೆಟ್ಟಿಯ ಮನೆಯವರ ಮೇಲೆ ಏನಷ್ಟು

ವಿಶ್ವಾಸ? ಅವರ ಸಂಸಾರದ ಮೇಲ್ವಿಚಾರಣೆಯನ್ನು ಇವರೇ ನೋಡಿ ಕೊಳ್ಳುತ್ತಿದ್ದಾರಂತೆ; ಹಿತಚಿಂತಕರೆಂದು ಪದ್ಮನಾಭಶೆಟ್ಟಿಯೇ ಹೇಳಿ ದನಲ್ಲ? ಇನ್ನೇನಾದರೂ ಪ್ರಾಕೃತವಾದ ಸಂಬಂಧವಿದ್ದೀತೆ? ಇರಲಾರದು. ಪದ್ಮನಾಭಶೆಟ್ಟಿಯ ತಾಯಿ ಚಿರದುಃಖಿನಿಯಂತೆ ಇದ್ದಾರೆ; ಬಾಳಿನಲ್ಲಿ ನಿರುತ್ಸುಕರೆಂದು ಪದ್ಮಾವತಿಯೇ ಹೇಳಿದಳಲ್ಲವೆ? ಇಂಥವರು ವಕೀಲ ರೊಂದಿಗೆ ಶೀಲ ತಪ್ಪಿ ನಡೆಯುತ್ತಾರೆಯೇ? ವಕೀಲರ ವಿಚಾರವಾಗಿಯೂ ಕೆಟ್ಟ ಮಾತನ್ನು ನಾನು ಈವರೆಗೆ ಕೇಳಿಲ್ಲ. ಆದರೂ ಈಕೆ ಒಂಟಿ ಹೆಂಗಸು, ಆತ ಒಂಟಿ ಗಂಡಸು. ಉಪಕಾರದ ಬುದ್ಧಿಯೇ ಇದ್ದರೂ ಜನ ಸಂಶಯ ಪಡುವುದಿಲ್ಲವೆ? ಆದಕ್ಕೆ ಆಸ್ಪದ ಕೊಡಬಾರದೆನ್ನುವ ವ್ಯವಹಾರ ಜ್ಞಾನ ವಕೀಲರಿಗಿಲ್ಲವೆ? ಸುಂದರೇಶ ವಕೀಲರ ಮಗಳನ್ನು ಮಂಗಳೂರಿಗೆ ಕರೆದುಕೊಂಡು ಹೋಗಿ ಈಕೆಯ ಮನೆಯಲ್ಲೇ ಇರಿಸಿದ್ದ ಕಾರಣವೇನು? ನಿರಾತಂಕವಾಗಿ ವಕೀಲರೂ ಅವರ ಮನೆಯಲ್ಲೇ ಮಗಳನ್ನು ಭೇಟಿ ಮಾಡಿದ ರಲ್ಲವೆ? ಇದರ ತಾತ್ಪರ್ಯವನ್ನು ಸುಂದರೇಶನೇ ವಿವರಿಸಬೇಕೆನ್ನುವ ಆಸೆ ಯಿಂದ ಅವನನ್ನೇ ಕೇಳಿದೆ—

"ಸುಂದರೇಶ, ಈ ವಕೀಲರಿಗೂ ಪದ್ಮನಾಭಶೆಟ್ಟಿಯ ಮನೆಯವರಿಗೂ ಹೇಗೆ ಸಂಬಂಧ?"

"ಸಂಬಂಧವೆಂದವರು ಯಾರು? ಅವರಿಗೇನೂ ಸಂಬಂಧವಿಲ್ಲ. ಬೆಂಗ ಳೂರಿನಲ್ಲಿದ್ದಾಗ ಇಬ್ಬರೂ ನೆರೆಹೊರೆಯವರು. ವಕೀಲರಿಗೂ ಸುಂದರಮ್ಮ —ಅದೇ ಪದ್ಮನಾಭಶೆಟ್ಟಿಯ ತಾಯಿ—ಅವರ ಗಂಡನಿಗೂ ತುಂಬ ಸ್ನೇಹವಿ ದ್ದಿತು. ಸುಂದರಮ್ಮ ಗಂಡನಿಲ್ಲದೆ ದಿಕ್ಕೆಟ್ಟು ಮಂಗಳೂರಿಗೆ ಹೋದಾಗಲೇ ವಕೀ ಲರೂ ಮನೆಯಲ್ಲಿ ಜಗಳವಾಡಿ ಅಲ್ಲಿಗೇ ಬಂದರು. ಇಬ್ಬರು ಸಣ್ಣಮಕ್ಕಳನ್ನು ಕಟ್ಟಿಕೊಂಡು ಒದ್ದಾಡುತ್ತ ಕಷ್ಟದಲ್ಲಿದ್ದ ಸುಂದರಮ್ಮನಿಗೆ ನೆರವಾದರು ಅಷ್ಟೆ."

"ಆಕೆ ಹೇಗಿದ್ದಾರೆ? ಆಕೆಗೆ ಏನೋ ಖಾಯಿಲೆಯೆಂದು ಕೇಳಿದೆ"

"ಹೌದು, ಆಕೆಗೆ ಮಾನಸಿಕರೋಗ. ಗಂಡನಿಲ್ಲದೆ ಆದಾಗಿನಿಂದ ಆಕೆಯ ಮನಸ್ಸು ಕೆಟ್ಟಿದೆ. ಮಕ್ಕಳಿಗಾಗಿ ಜೀವ ಇಟ್ಟುಕೊಂಡಿದ್ದಾರಷ್ಟೆ. ಗಂಡನ ಮೇಲೆ ಅವರಿಗೆ ತುಂಬ ಪ್ರೀತಿಯಿದ್ದಿತಂತೆ, ಗಂಡನಿಗೂ ಇವರ ಮೇಲೆ ತುಂಬ ಪ್ರೀತಿಯಿದ್ದಿತಂತೆ. ಆದರೆ ಏನೋ ಅಚಾತುರ್ಯವಾಯಿತು, ಬೇರೆ ಬೇರೆ

ಯಾದರು. ಆಕೆಗೆ ಗಂಡನ ಸುಳಿವೇ ಸಿಕ್ಕಲಿಲ್ಲ; ಮಂಗಳೂರಿನಲ್ಲಿದ್ದಾರೆಂದು ಯಾರೋ ಹೇಳಿದರು. ಈಕೆ ಮಕ್ಕಳನ್ನು ಕರೆದುಕೊಂಡು ಅಲ್ಲಿಗೇ ಹೋದರು. ಈ ವಕೀಲರೇ ಅವರ ಗಂಡನನ್ನು ಹುಡುಕಾಡಿದರು. ಅಷ್ಟರಲ್ಲಿ ಗಂಡ ಊರು ಬಿಟ್ಟರೆಂದೂ, ಮಂಗಳೂರಿನಿಂದ ಮದ್ರಾಸಿಗೆ ಹೋಗಿ ಅಲ್ಲಿ ತೀರಿಕೊಂಡ ರೆಂದೂ ಸುಂದರಮ್ಮನಿಗೆ ಸುದ್ದಿ ಬಂದಿತು. ಸರಿ, ಸುಂದರಮ್ಮನಿಗೆ ದಿಕ್ಕು ಯಾರು ?ಸಣ್ಣ ಮಕ್ಕಳು ಬೇರೆ ! ಮಂಗಳೂರಿನಲ್ಲೇ ನಿಂತರು. ಆಗಿನಿಂದಲೂ ಆಕೆಗೆ ಗಂಡನ ಕೊರಗು !"

"ಪದ್ಮಾವತಿ ಮೋಹನನನ್ನು ಮದುವೆಯಾಗುವ ವಿಚಾರ ಅವರಿಗೆ ತಿಳಿದಿದೆಯೋ ?"

"ತಿಳಿಯದೆ ಏನು ? ಪದ್ಮನಾಭಶೆಟ್ಟಿ ಮೊದಲೇ ಹೇಳಿದ್ದ ; ಆಕೆಗೆ ಇಷ್ಟ ವಿಲ್ಲ. ಬೆಂಗಳೂರೆಂದರೆ ಆಕೆಗೆ ಆಗದು ; ಬೆಂಗಳೂರಿನ ಸಂಬಂಧ ಅವರಿಗೆ ಇಷ್ಟವಿಲ್ಲ. ನಾನೂ ಅವರೊಂದಿಗೆ ಮಾತನಾಡಿದೆ. 'ಯಾವ ಪ್ರಿನ್ಸಿಪಾಲರೋ ? ಯಾರೋ ? ಅವರಿಗೆ ಹೆಂಡತಿಯಿಲ್ಲ, ತಂಗಿಗೆ ಗಂಡನಿಲ್ಲ ! ನಮ್ಮ ಸಂಸಾರದ ಹಾಗೆಯೇ ಅವರ ಸಂಸಾರವೂ ಒಡಕೇ, ಪದ್ಮಾವತಿಗೆ ಏನು ಸುಖ ? ಹುಟ್ಟಿದ ಮನೆ ಶಿವರಾತ್ರಿ, ಹೊಕ್ಕ ಮನೆ ಗೋಕುಲಾಷ್ಟಮಿ ; ಎರಡೂ ಉಪವಾಸವೇ ಎನ್ನುತ್ತಾಳೆ ಆಕೆ."

"ಮತ್ತೇನು ಮಾಡುತ್ತಿ ?"

"ಮಾಡುವುದು ಏನು ? ಮೊದಲು ಅಡ್ಡಿ ಮಾಡಿದರೂ ಕಡೆಗೆ ಒಪ್ಪು ತ್ತಾರೆ. ಅವರಿಗೆ ಬೆಂಗಳೂರೆಂದರೆ ಏನೋ ಆತಂಕವಿರುವುದರಿಂದ ಅಡ್ಡಿ ಮಾಡುತ್ತಾರೆ ಅಷ್ಟೆ."

"ಅವರು ಇಲ್ಲಿಗೆ ಈ ವಾರ ಬರುತ್ತಾರಂತೆ."

"ಹೌದು, ನಾನೇ ಬಲವಂತ ಮಾಡಿದೆ. ಬಂದು ಒಮ್ಮೆ ಪರೀಕ್ಷೆಮಾಡಿಸಿ ಕೊಳ್ಳಿ ಎಂದು. ತುಂಬ ಪ್ರಯಾಸಪಟ್ಟ ಮೇಲೆ ಒಪ್ಪಿದ್ದಾರೆ. ಅದೇ ವಿಷಯ ನಿನ್ನೊಂದಿಗೆ ವಿಚಾರ ಮಾಡಲು ಬಂದೆ. ಅವರು ಇಲ್ಲಿಗೆ ಬಂದಾಗ ವಕೀಲರ ಹೆಂಡತಿಯ ಮನೆಯಲ್ಲೇ ಇರುತ್ತಾರೆ. ಎಷ್ಟು ದಿನ ಇರಬೇಕಾಗುತ್ತದೆ ?"

"ಅವರು ಹಿಂದಕ್ಕೆ ಹೋಗಬೇಕಾದ ತುರ್ತು ಇರುವುದಾದರೆ ಎರಡು ಮೂರು ದಿನ ಇದ್ದರೇ ಸಾಕು."

"ಬಂದಾಗ ಪ್ರಿನ್ಸಿಪಾಲರ ಕಡೆಯಿಂದ, ಅವರ ಪರವಾಗಿ ಯಾರಾದರೂ ಮದುವೆಯ ಪ್ರಸ್ತಾಪ ಮಾಡಬೇಕು. ಅದನ್ನು ಯಾರು ಮಾಡುತ್ತಾರೆ ಎನ್ನುವುದು ಒಂದು ಸಮಸ್ಯೆ."

"ಸಮಸ್ಯೆಯೇನು ? ಯಾರೇನು ಪ್ರಸ್ತಾಪ ಮಾಡುವುದು ? ಆ ವೇಳೆಗೆ ವಕೀಲರ ಮಗನಿಗೂ ದಮಯಂತಿಗೂ ಪತ್ರ ನಿಶ್ಚಿತಾರ್ಥ ಆಗಿದ್ದರೆ, ಪ್ರಿನ್ಸಿಪಾಲರ ಮನಸ್ಸಿಗೆ ಸಮಾಧಾನವಾದರೆ, ಅವರೇ ಆಕೆಯನ್ನು ಕಂಡು ಮಾತನಾಡುತ್ತಾರೆ."

"ಅಯ್ಯೋ, ನಿಮ್ಮ ಪ್ರಿನ್ಸಿಪಾಲರ ಸ್ವಭಾವ ನಿನಗೆ ತಿಳಿಯದೆ? ಎಮ್ಮೆಯಂಥ ಮನುಷ್ಯ ! ಅವರೇನು ತಾವಾಗಿ ಯಾರನ್ನೂ ಕಂಡು ಕೇಳುವುದಿಲ್ಲ. ಅವರಿಗೆ ಇಂಥ ವಿಚಾರಗಳನ್ನು ಮಾತನಾಡಲೂ ಬರುವುದಿಲ್ಲ. ಅವರಿಗೆ ಹೇಳಿ ಪ್ರಯೋಜನವಿಲ್ಲ. ಪ್ರಿನ್ಸಿಪಾಲರ ತಂಗಿಯೂ ಅಷ್ಟೆ. ಅವರಿಗಂತೂ ಈ ಸಂಬಂಧ ಇಷ್ಟವಿಲ್ಲ. ಇನ್ನು ಯಾರಿದ್ದಾರೆ? ಅದಕ್ಕಾಗಿಯೇ ನೀನು ಈ ವಿಚಾರ ಮಾತನಾಡುತ್ತೀಯೋ ಎಂದು ಕೇಳಿದೆ."

"ಮಹಾರಾಯಾ ! ಈ ವೇಳೆಗಾಗಲೇ ನನ್ನನ್ನು ಮಂಡಿಯುದ್ದ ಕೆಸರಿನಲ್ಲಿ ನಿಲ್ಲಿಸಿದ್ದೀ ! ನನಗೆ ಸಂಬಂಧವಿರದ ವಿಚಾರಗಳನ್ನು ಬೆನ್ನಮೇಲೇರಿಸಿಕೊಂಡು ತಿರುಗುತ್ತಿದ್ದೇನೆ. ಇಷ್ಟು ಸಾಕು ! ಇನ್ನು ಯಾವ ಹೊಣೆಗಾರಿಕೆಯೂ ಬೇಡ. ಅದಲ್ಲದೆ ಬಂದಾಕೆಯ ಮುಂದೆ ಮದುವೆಯ ಪ್ರಸ್ತಾಪ ಮಾಡುವುದಕ್ಕೆ ನಾನು ಯಾರಯ್ಯ ? ನಾನೇನು ಪ್ರಿನ್ಸಿಪಾಲರ ಸಂಬಂಧಿಯೇ ? ಆಪ್ತನೆ ? ಇಷ್ಟನೆ ? ಅವರ ವಕೀಲನೆ ? ಅಥವಾ ನಾನು ಮಾತನಾಡಿದರೆ ಪ್ರಿನ್ಸಿಪಾಲರು ಒಪ್ಪುತ್ತಾರೋ ? ಅದು ಅಧಿಕ ಪ್ರಸಂಗಿತನವಾದೀತು ! ನೀನು ಮಾತುಕತೆ ನಡೆಸಿದ್ದೀಯಲ್ಲ, ಆಗಲೇ, ಮೋಹನನೇ ಹೋಗಿ ನೋಡಲಿ, ನಷ್ಟವೇನು ?"

"ಅದು ಹೇಗೆ ಸಾಧ್ಯ? ಮೋಹನನೇ ನಿನಗೆ ಹೇಳುವುದಕ್ಕೆ ಹೇಳಿದ. ಪ್ರಿನ್ಸಿಪಾಲರನ್ನು ನಾನು ಒಪ್ಪಿಸುತ್ತೇನೆ, ಅದರ ಯೋಚನೆ ನಿನಗೆ ಬೇಡ. ಆಕೆ ಹೇಗೂ ನಿನ್ನನ್ನು ಕಾಣಲು ಇಲ್ಲಿಗೆ ಬರುತ್ತಾರೆ. ಬಂದಾಗ ಪ್ರಿನ್ಸಿಪಾಲರ ಪರವಾಗಿ ಪದ್ಮಾವತಿಯನ್ನು ಮೋಹನನಿಗೆ ಕೇಳಿಬಿಡು, ಅಷ್ಟೆ. ಮೋಹನನ ವಿಚಾರ ನಾಲ್ಕು ಒಳ್ಳೆಯ ಮಾತನ್ನು ಹೇಗೂ ಆಡುತ್ತೀಯೆ !"

"ಆಗುವುದಿಲ್ಲ, ಮಹಾರಾಯ, ಖಂಡಿತ. ನನ್ನನ್ನು ಮಾತ್ರ ನಿರ್ಬಂಧ

ಮಾಡಬೇಡ! ಆಕೆಯ ಪರೀಕ್ಷೆ, ಚಿಕಿತ್ಸೆಗೆ ವ್ಯವಸ್ಥೆ ಮಾಡುವುದಷ್ಟು ನನ್ನ ಕೆಲಸ. ಅದಕ್ಕೂ ಇದಕ್ಕೂ ಗಂಟು ಹಾಕಲೂಬಾರದು. ಈ ಗೊಂದಲದಲ್ಲಿ ನಾನು ಎಷ್ಟಕ್ಕೂ ಸಿಕ್ಕಿಬೀಳುವವನಲ್ಲ.

ನಾನು ನಿಷ್ಠುರವಾಗಿಯೇ, ಕಡ್ಡಿ ತುಂಡಾದಂತೆಯೇ, ಹೇಳಿದೆ. ಸುಂದರೇಶನಲ್ಲಿ ಯಾವ ಅನುಮಾನವೂ ಉಳಿದಿರಬಾರದೆಂದೇ ಸ್ಪಷ್ಟಮಾಡಿದೆ. ಸುಂದರೇಶ ಇನ್ನೇನು ಮಾತನಾಡುತ್ತಾನೆ? ಸರಿಯೆಂದು ಹೊರಟು ಹೋದ.

೧೩

ಆದಿನ ಕಾಲೇಜಿನಲ್ಲಿ ಮಧ್ಯಾಹ್ನ ಪಾಠ ಮುಗಿಸಿ ನನ್ನ ಕೋಣೆಗೆ ಹಿಂದಿರುಗುತ್ತಿದ್ದೆ. ಪ್ರಿನ್ಸಿಪಾಲರು ತಾವೇ ನನ್ನ ಕೋಣೆಗೆ ಬರುತ್ತಿದ್ದರು. ಅವರನ್ನು ಕರೆದುಕೊಂಡು ಹೋಗಿ ನನ್ನ ಕೋಣೆಯಲ್ಲಿ ಕೂರಿಸಿದೆ. ಅವರು ಲೋಕಾಭಿರಾಮವಾಗಿ ಈ ಮಾತು ಆ ಮಾತು ಆಡಿ, ಅನಂತರ, "ನಿಮ್ಮಿಂದ ಇನ್ನೊಂದು ಉಪಕಾರವಾಗಬೇಕಲ್ಲ, ಸ್ವಾಮಿ" ಎಂದರು.

"ನೀವು ಹೇಳಿದ ಕೆಲಸಕ್ಕೆ ವ್ಯವಸ್ಥೆ ಮಾಡಿದ್ದೇನೆ, ಸ್ವಾಮಿ. ಮಂಗಳೂರಿನಿಂದ ಆಕೆ, ಪದ್ಮನಾಭಶೆಟ್ಟಿಯ ತಾಯಿ, ಈ ವಾರ ಬರುತ್ತಾರಂತೆ. ಅವರಿಗೆ ಪರೀಕ್ಷೆ ನಡೆಯುವ ವ್ಯವಸ್ಥೆ ಆಗಿದೆ."

"ಅದೇ ಆ ವಿಚಾರವಲ್ಲಿಯೇ ಬಂದೆ! ನೋಡಿ, ಪದ್ಮನಾಭಶೆಟ್ಟಿ ಸದ್ಯಕ್ಕೆ ಮದುವೆಯಾಗುವುದಿಲ್ಲವಂತೆ. ಮಂಗಳೂರಿನ ವಕೀಲರು ಪತ್ರ ಬರೆದಿದ್ದಾರೆ. ವಕೀಲರ ಮಗನೇ ಒಬ್ಬನಿದ್ದಾನಂತೆ; ದಮಯಂತಿಗೆ ಅನುರೂಪನಾದ ವರ ಎಂದು ಸುಂದರೇಶ ಶಿಫಾರಸು ಮಾಡಿದ್ದಾನೆ. ಅದೇ ನಡೆದು ಹೋಗಲಿ ಬಿಡಿ. ನಾನು ಒಪ್ಪಿಕೊಂಡಿದ್ದೇನೆ. ತಿರುಪತಿಯಲ್ಲಿ ಮದುವೆ, ಮುಂದಿನ ತಿಂಗಳು. ನನ್ನ ಒಂದು ಹೊಣೆ ಹರಿಯಿತು ಎನ್ನಿ. ಈಗ ಮೋಹನನ ವಿಚಾರ. ಅಂದು ನೀವು ತಿಳಿಸಿದಿರಲ್ಲ; ಅವನು ಪದ್ಮಾವತಿಯನ್ನು ಮದುವೆಯಾಗಲು ನಿಶ್ಚಯಿಸಿದ್ದಾನೆ. ನಿಮ್ಮ ಸುದ್ದಿ ನಿಜ. ನನ್ನ ತಂಗಿಗೆ ಇಷ್ಟವಿಲ್ಲ, ಆದರೂ ಏನು ಮಾಡುವುದು, ಹುಡುಗ ಹಠ ಹಿಡಿದಿದ್ದಾನೆ. ಪದ್ಮಾವತಿಯ ತಾಯಿ ಇಲ್ಲಿಗೆ

ಹೇಗೂ ಬರುತ್ತಾರಲ್ಲ, ಅವರೊಂದಿಗೆ ನಿಮ್ಮ ಪೈಕಿ ಯಾರಾದರೂ ಮಾತನಾಡ ಬೇಕು. ನಿಮ್ಮನ್ನು ನಮ್ಮ ರಾಯಭಾರಿಗಳನ್ನಾಗಿ ಕಳುಹಿಸಬೇಕೆಂದಿದ್ದೇನೆ, ಏನನ್ನುತ್ತೀರಿ ?"

"ಅಯ್ಯೋ ಸ್ವಾಮಿ ! ಇದು ಕಷ್ಟದ ಕೆಲಸ. ಅದೂ, ಗೃಹಕೃತ್ಯದ ವಿಚಾರ, ನಾನು ಹೊರಗಿನವನು. ಮನೆಯವರೇ ಹೋದರೆ ಚೆನ್ನು ಅಲ್ಲವೆ ? ನಾನು ನಿಮಗೆ ನೆರವಾಗಬಾರದೆಂದಲ್ಲ; ಆದರೆ ಇದು 'ಡೆಲಿಕೆಟ್' ಎನ್ನು ತ್ತಾರಲ್ಲ, ಅಂಥ ಪ್ರಸಂಗ. ತಾವು ತಪ್ಪು ತಿಳಿದುಕೊಳ್ಳಬಾರದು, ಕ್ಷಮಿಸ ಬೇಕು."

"ಇಲ್ಲ, ನೀವು ನನಗೆ ಇಷ್ಟು ಉಪಕಾರ ಮಾಡಲೇಬೇಕು. ಇದು ಇನ್ನು ಯಾರಿಂದಲೂ ಆಗುವ ಕೆಲಸವಲ್ಲ, ನನ್ನಿಂದಲೂ ಆಗಲಾರದು. ಮೋಹನನಿ ಗಾಗಿ, ನನಗಾಗಿ ಇಷ್ಟು ತಾವು ಮಾಡಬೇಕು, ದೊಡ್ಡ ಮನಸ್ಸು ಮಾಡಿ."

ಎಂದು ಪ್ರಿನ್ಸಿಪಾಲರು ಹೇಳಿದರು, ಬೇಡಿದರು ಎಂದರೂ ಸರಿಯೆ. ಸುಂದರೇಶನೇ ಇವರ ಮುಂದೆ ಈ ಸಲಹೆಯನ್ನು ಕೊಟ್ಟವನು ಎನ್ನುವು ದಂತೂ ನನಗೆ ಸ್ಪಷ್ಟವೇ. ಅವನ ಮುಂದೇನೋ ಅಷ್ಟು ಖಂಡ ತುಂಡಾಗಿ ಆಗದೆಂದು ಹೇಳಿಬಿಟ್ಟದ್ದೆ ; ಆದರೆ ಈಗ ಆಗದೆನ್ನಲು ಸಂಕೋಚವಾಯಿತು.

"ಇಷ್ಟು ಹೇಳಿದ ಮೇಲೆ, ಆಗದೆಂದು ಹೇಗೆ ಹೇಳಲಿ ಸ್ವಾಮಿ ? ಆಗಲಿ ಏನು ವಿವರಗಳನ್ನು ಹೇಳಬೇಕೋ ಹೇಳಿ. ಹುಡುಗನ ಜಾತಕ, ವಯಸ್ಸು, ಓದು, ಮನೆತನ, ಮದುವೆ ಎಲ್ಲಿ, ಯಾವಾಗ ಎಂದೆಲ್ಲ ಹೇಳಬೇಕಲ್ಲವೆ ?"

"ಅದೊಂದೂ ನನಗೆ ತಿಳಿಯದು. ನೀವು ಹೇಳಿದ್ದನ್ನು ನಾನು ಒಪ್ಪಿ ಕೊಳ್ಳುತ್ತೇನೆ, ಅಷ್ಟೆ. ಉಳಿದ ವಿಚಾರಗಳಿಗೆ ಸುಂದರೇಶನನ್ನು ನಿಮ್ಮ ಬಳಿ ಕಳುಹಿಸುತ್ತೇನೆ."

ಎಂದು ಹೇಳಿ ಹೊರಟೇ ಬಿಟ್ಟರು. ಹಿಂಬಾಗಿಲಿನಿಂದ ಓಡಿಸಿದ ಪಿಶಾಚಿ ಗವಾಕ್ಷಿಯಿಂದ ಮತ್ತೆ ಮನೆಯೊಳಗೇ ಬಂದಿತಲ್ಲ? ಇದಲ್ಲವೇ ಪ್ರಾರಬ್ಧ ಎನ್ನುವುದು ? 'ನಾ ಮಾಡಿದಾ ಕರ್ಮ ಬಲವಂತವಾದರೆ' ಯಾರೇನು ಮಾಡು ವರು ? ಹೀಗೆ ನನ್ನ ಕಷ್ಟಕ್ಕಾಗಿ ಪರಿತಪಿಸಿ ಕಾಲೇಜನ್ನು ಬಿಟ್ಟು ಮನೆಗೆ ಬಂದೆ. ನಡೆದ ವಿಚಾರವನ್ನು ಹೆಂಡತಿಗೆ ಹೇಳಲಿಲ್ಲ. ಅವಳ ಕಟ್ಟಾಜ್ಞೆಯನ್ನು ಈಗಾ ಗಲೇ ಯಥೇಚ್ಛವಾಗಿ ಉಲ್ಲಂಘಿಸಿದ್ದೇನಷ್ಟೆ.

ಆ ಸಂಜೆ ಹೊರಗಿನ ಹವೆಯನ್ನು ಸಾವಧಾನವಾಗಿ ಮೆಲ್ಲುತ್ತ ಮನೆಯ ಹೊರಗೆ ಕುಳಿತಿದ್ದೆ. ಸಾಕ್ಷಾತ್ ಸುಂದರೇಶನೇ ಪ್ರತ್ಯಕ್ಷನಾದ. ಅವನ ಮೇಲೆ ನನಗೆ ಸಿಟ್ಟು ಬಂದಿದ್ದಿತು. ಇಲ್ಲಿ ನಾನು ಆಗದೆಂದು ಹೇಳಿ ಕಳುಹಿಸಿದ್ದೇನೆ; ಅಲ್ಲಿ ಪ್ರಿನ್ಸಿಪಾಲರಿಗೆ ಹೇಳಿ ಒಪ್ಪಿಸಿಬಿಟ್ಟಿದ್ದಾನಲ್ಲ, ಇವನು! ನಾನು ಇವನಿಗೆ ಮುಖವನ್ನು ತಾನೇ ಹೇಗೆ ತೋರಿಸಲಿ?

"ಏನಯ್ಯ, ನೀನು ಹೀಗೆಯೋ ಮಾಡುವುದು? ನಾನು ಆಗದೆಂದು ಹೇಳಲಿಲ್ಲವೆ? ಪ್ರಿನ್ಸಿಪಾಲರಿಗೆ ಅದೇ ಸಲಹೆಯನ್ನು ನೀನು ಕೊಟ್ಟುದೇಕೆ?"

"ನಾನು ಹೇಳಿದಾಗ ಒಪ್ಪದೆ, ಅವರು ಹೇಳಿದಾಗ ಮಾತ್ರ ಒಪ್ಪಬೇಕೋ ನೀನು? ಆ ವಿಷಯ ನಿನಗೆ ಅಷ್ಟು ಅಹಿತವಾಗಿದ್ದರೆ ಅಲ್ಲಿಯೂ ಒಪ್ಪಬಾರದಾಗಿತ್ತು! ನೀನು ಒಪ್ಪದಿದ್ದರೆ ಯಾರಾದರೂ ನಿನ್ನನ್ನು ಗಲ್ಲಿಗೇರಿಸುತ್ತಿದ್ದರೇ? ನಿನಗೆ ನೆರವಾಗುವ ಇಷ್ಟವಿದೆಯೆಂದೇ ಅರ್ಥ. ಅದನ್ನು ತಿಳಿದೇ ನಾನು ನಿನ್ನಲ್ಲಿ ಪ್ರಸ್ತಾಪ ಮಾಡಿದೆ. ದಾರಿಯಲ್ಲಿ ಹೋಗುವವರನ್ನೆಲ್ಲ ಕರೆಯುವುದಕ್ಕಾಗುತ್ತದೆಯೇ?

ಈ ಭಂಡಾಟಕ್ಕೆ ಏನನ್ನುತ್ತೀರಿ? ಹೋಗಲಿ, ಹೀಗೆ ಕುಶಲ ಪ್ರಶ್ನೆಗಳಾದ ಮೇಲೆ ಸುಂದರೇಶ ಬಂದ ಉದ್ದೇಶವನ್ನು ತಿಳಿಸಿದ. ಅವನು ಅದೇ ಪ್ರಿನ್ಸಿಪಾಲರ ಮನೆಯಿಂದಲೇ ಬರುತ್ತಿದ್ದ. ಕೈಯ್ಯಲ್ಲಿ ಮೋಹನನ ಜಾತಕವಿತ್ತು. ಮದುವೆ ಮುಂದಿನ ತಿಂಗಳು, ದಮಯಂತಿಯ ಮದುವೆಯಾದ ಒಂದು ವಾರದೊಳಗೇ ಆದರೆ ಒಳಿತೆಂದು ಪ್ರಿನ್ಸಿಪಾಲರು ತಿಳಿಸಿದ್ದರು, ಎಂದರೆ ಸುಂದರೇಶನೇ ನಿರ್ಧರಿಸಿದ್ದ. ವರದಕ್ಷಿಣೆ, ವರೋಪಚಾರದ ಪ್ರಶ್ನೆ ಇಲ್ಲವೆಂಮ ನಿರ್ದಿಷ್ಟವಾಗಿದ್ದಿತು. ಸುಂದರೇಶ ಇದೆಲ್ಲವನ್ನೂ ಸಾವಧಾನವಾಗಿ ನಿರೂಪಿಸಿ ನಾನು ಯಾವ ಪ್ರಶ್ನೆಗೆ ಹೇಗೆ ಉತ್ತರ ಕೊಡಬೇಕೆಂದು ಕಲಿಸಿದ. ಹೇಗೆ ಪ್ರಶ್ನೆ ಕೇಳಬೇಕೆಂದು ಅವರಿಗೆ ಕಲಿಸಿರಬೇಕು ಇವನು. ನಾನು ಕೇಳಿದೆ—

"ಪ್ರಿನ್ಸಿಪಾಲರು ಆಕೆಯನ್ನು ಒಂದು ಬಾರಿ ಕಾಣಬೇಡವೇನಯ್ಯ? ಮನೆಗೆ ಕರೆದು ಉಪಚಾರ ಮಾಡಬೇಡವೆ?"

"ಅದೆಲ್ಲ ಈಗೆಲ್ಲಿ ಆಗುವುದಯ್ಯ? ಮುಂದೆ ಎಂದಾದರೂ ಬಂದಾಗ ನೋಡಿಕೊಳ್ಳೋಣ."

ಸುಂದರೇಶ ಇಷ್ಟು ಹೇಳಿ ಹೊರಟ. ನಾನು ಒಪ್ಪುವುದು ಬಿಡುವುದು ನನ್ನಿಚ್ಛೆಯೆ? ಕೋಳಿಯನ್ನು ಕೇಳಿ ಸಂಬಾರ ಅರೆಯುತ್ತಾರೆಯೆ? ಯಂತ್ರಕ್ಕೆ ಸಿಕ್ಕ ಗೊಂಬೆಯಂತೆ ನಾನಷ್ಟೆ!

೧೪

ಶನಿವಾರ ಮಂಗಳೂರಿನಾಕೆ ಬಂದರು. ಸ್ಟೇಷನ್ನಿಗೆ ಪದ್ಮಾವತಿ ಮತ್ತು ಮೋಹನ ಇಬ್ಬರೂ ಹೋಗಿದ್ದರಂತೆ. ಸುಂದರೇಶ ಅವರನ್ನು ವಕೀಲರ ಹೆಂಡತಿಯ ಮನೆಯಲ್ಲಿ ಸ್ವಾಗತಿಸಿದನಂತೆ; ಅಲ್ಲಿಯೇ ಅವರ ಬಿಡಾರದ ವ್ಯವಸ್ಥೆಯಾಗಿದ್ದಿತು. ಮರುದಿನ ಬೆಳಿಗ್ಗೆ ನಮ್ಮ ಮನೆಗೆ ಆಕೆಯನ್ನು ಪದ್ಮಾವತಿ ಕರೆದುಕೊಂಡು ಬಂದಳು. ಭಾನುವಾರ ಬಿಡುವಿದ್ದುದರಿಂದ ಸಾವಧಾನವಾಗಿ ನಾನೇ ಆಕೆಯಿಂದ ಅಗತ್ಯವಾದ ವಿವರಗಳನ್ನು ಪಡೆದುಕೊಂಡೆ. ಹೆಂಗಸು ತುಂಬ ಒಳ್ಳೆಯವಳಂತೆ ಕಂಡಳು. ಭಾವುಕಳು ಎನಿಸಿತು. ದಾಂಪತ್ಯ ಜೀವನದಲ್ಲಿ ವಿಶೇಷವಾದ ಕನಸುಗಳನ್ನು ಕಟ್ಟಿಕೊಂಡವಳು, ಯಾವುದೋ ಪ್ರಸಂಗದ ಕಹಿಯಿಂದ ಗಂಡನಿಗೂ ಈಕೆಗೂ ವಿರಸವಾಯಿತು. ವಿರಸ ಹರಿಯುವುದರೊಳಗೆ ಗಂಡ ಊರಿನಿಂದ ಹೊರಟು ಹೋದ. ಆಮೇಲೆ ಇಬ್ಬರೂ ಭೇಟಿಯಾಗಲಿಲ್ಲ. ಆತ ತೀರಿಕೊಂಡನೆಂದು ವಕೀಲರು ಹೇಳಿದ್ದರೂ ಈಕೆ ಅದನ್ನು ನಂಬುವುದಿಲ್ಲ. ಗಂಡ ಬದುಕಿದ್ದಾನೆಂದೇ ಈಕೆಯ ವಿಶ್ವಾಸ. ಅವನಿಗಾಗಿಯೇ ಕಾತರಳಾಗಿದ್ದಾಳೆ. ತನ್ನನ್ನು ತುಂಬ ಪ್ರೀತಿಸಿ, ತನ್ನ ಮೇಲೇ ವಿಶ್ವಾಸವನ್ನಿಟ್ಟು, ತನ್ನನ್ನೇ ಆಶ್ರಯಿಸಿದ್ದ ಗಂಡ ಬಾಳಿನಲ್ಲಿ ಒಂಟಿಯಾಗಿ ಬಾಳುವುದು ಅಸಾಧ್ಯವೆಂದು ಆಕೆ ಹೇಳಿದಳು. "ಎಷ್ಟು ಕಷ್ಟಪಡುತ್ತಿದ್ದಾರೊ, ನಾನಿದ್ದು ಏನು ಪ್ರಯೋಜನ?" ಎಂದಳಾಕೆ. ತಾನು ವಿಧವೆಯೆಂದು ಈಕೆ ನಂಬದಿರುವುದು ಮಾನಸಿಕ ವಿಕಾರವೆಂದು ವೈದ್ಯರ ತರ್ಕ. ತೀರಿಕೊಂಡ ಗಂಡ ಜೀವಿಸಿಯೇ ಇದ್ದಾನೆಂದು ಭಾವಿಸಿರುವ ಉನ್ಮತ್ತ ಸ್ತ್ರೀಯರು ಇಲ್ಲದಿಲ್ಲ. ಆದರೆ ಈಕೆಯ ಮಾತಿನಲ್ಲಿ ಅಸಮಂಜಸವೇನೂ ಕಾಣಲಿಲ್ಲ. ಮನೋವಿಕಾರ ನನಗಂತೂ ಅಷ್ಟು ಸ್ಪಷ್ಟವಾಗಲಿಲ್ಲ. ಗಂಡ ತೀರಿಕೊಂಡುದನ್ನು ಈಕೆಯಾಗಲೀ, ವಕೀಲರಾಗಲಿ ಕಣ್ಣಾರೆ ಕಾಣಲಿಲ್ಲ. ಆಕೆಗೆ ನೇರವಾದ ಸುದ್ದಿಯೂ ಬರಲಿಲ್ಲ.

ಹೀಗಾಗಿ ಅವರಿವರು ಹೇಳಿದುದನ್ನು ಕೇಳಿ ತನ್ನ ಗಂಡ ಸತ್ತನೆಂದು ಹೇಗೆ ನಂಬಿಯಾಳು? ಗಂಡ ಎಲ್ಲಿಯೋ ಇದ್ದಾನೆಂದೂ, ಎಂದೋ ಹಿಂದಿರುಗಿ ಬಂದಾನೆಂದೂ ಈಕೆಯು ವಿಶ್ವಾಸ. ಇದೇ ವಿಶ್ವಾಸದಿಂದ ಇಪ್ಪತ್ತು ವರ್ಷಗಳನ್ನು ಈಕೆ ಕಳೆದಿದ್ದಾಳೆ! ನಿರಾಶೆಯು ಕಿರಣ ಈಗೀಗ ವಿಧಿಯಿಲ್ಲದೆ ಅವಳಲ್ಲಿ ಪ್ರವೇಶ ಮಾಡುತ್ತಿದೆ. ಇದು ಉದ್ವೇಗಕ್ಕೆ ಎಡೆಮಾಡಿಕೊಟ್ಟಿದೆ. ಉಳಿದೆಲ್ಲ ವಿಕಾರಗಳೂ ಇದರಿಂದಲೇ ಉಂಟಾದವು ಎಂಬುದು ಸ್ಪಷ್ಟವಾಗಿದ್ದಿತು. ನನಗೆ ಮೊದಲ ಭೇಟಿಯಿಂದ ತಿಳಿದು ಬಂದುದು ಇಷ್ಟು.

ನಾನು ಪದ್ಮಾವತಿಗೆ ವಿವರಗಳನ್ನು ತಿಳಿಸಿದೆ. ಪದ್ಮಾವತಿಗೂ ತಮ್ಮ ತಂದೆ ತೀರಿಕೊಂಡಿದ್ದಾರೆಂದೇ ನಂಬಿಕೆ; ತಾಯಿ ಮೊದಲು ಇದನ್ನು ನಂಬಿದ್ದಳೆಂದೂ, ಹಲವು ವರ್ಷಗಳು ಹಣೆಗೆ ಕುಂಕುಮವನ್ನಿಡದೆ, ಮಾಂಗಲ್ಯವನ್ನು ತೆಗೆದಿಟ್ಟು, ಶುಭಸಂದರ್ಭಗಳಲ್ಲಿ ಸೇರದೆ ಕಾಲ ಕಳೆಯುತ್ತಿದ್ದಳೆಂದೂ ಪದ್ಮಾವತಿ ಹೇಳಿದಳು. ಆಮೇಲೆ ಯಾರೋ ಕಾಶಿಯ ಕಡೆಯ ಯಾವನೋ ಬೈರಾಗಿ ಬಂದವನು 'ನೀನು ವಿಧವೆಯಲ್ಲ, ನಿನ್ನ ಗಂಡ ಬದುಕಿದ್ದಾನೆ, ಮತ್ತೆ ಒಡಗೂಡುತ್ತೀರಿ' ಎಂದು ಹೇಳಿ ಹೋದನಂತೆ. ಅವನ ಮಾತನ್ನು ನಂಬಿ ಈಕೆ ಮತ್ತೆ ಕುಂಕುಮವನ್ನಿಡಲಾರಂಭಿಸಿ ತೆಗೆದಿಟ್ಟಿದ್ದ ಮಾಂಗಲ್ಯವನ್ನು ತಿರುಗಿ ಕಟ್ಟಿಕೊಂಡಳಂತೆ. ಅಂದಿನಿಂದ ಒಂದೆರಡು ವರ್ಷ ತುಂಬ ಉತ್ಸಾಹದಲ್ಲಿದ್ದು ಕಾಲ ಕಳೆದರಂತೆ. ಇವೆಲ್ಲ ಮನೋರೋಗದ ಪ್ರಕಾರಗಳೇ ಎಂದು ಮಂಗಳೂರಿನ ವೈದ್ಯರು ತೀರ್ಮಾನಿಸಿ ಇಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಸಲಹೆ ಮಾಡಿದರಂತೆ. ಈಚೆಗೆ ನಾಲ್ಕೈದು ವರ್ಷಗಳಿಂದ ದೈಹಿಕ ವಿಕಾರಗಳೂ ಕಾಣತೊಡಗಿವೆಯಂತೆ.

ಇಷ್ಟು ವಿವರಗಳನ್ನು ಪದ್ಮಾವತಿಯಿಂದ ಪಡೆದ ಮೇಲೆ ನಾನು ಸುಂದರಮ್ಮನನ್ನು ಕೇಳಿದೆ.

"ತಾಯಿ, ಈಗ ನಿಮ್ಮ ಯಜಮಾನರು ಬಂದರೆ ಏನು ಮಾಡುತ್ತೀರಿ?"

"ಮಾಡುವುದೇನು? ಸುಖವಾಗಿರುತ್ತೇನೆ."

"ಇಪ್ಪತ್ತು ವರ್ಷಗಳಾಗಿವೆ! ಇನ್ನೂ ನಿಮ್ಮ ಮೇಲೆ ಅಭಿಮಾನ ಇಟ್ಟುಕೊಂಡಿರುತ್ತಾರೆಯೆ?"

"ಇರದೆ ಏನು? ಅವರ ಅಭಿಮಾನ ಎಂದಿನಂತೆಯೇ ಇರುತ್ತದೆ. ನನಗೆ ಇದರಲ್ಲಿ ಯಾವ ಸಂಶಯವೂ ಇಲ್ಲ!"

ನಾನು ಮತ್ತೆ ಕೇಳುವುದಾದರೂ ಏನು? ಅನಂತರ ಪದ್ಮಾವತಿಯ ಮದುವೆಯ ವಿಚಾರ ಪ್ರಸ್ತಾಪಕ್ಕೆ ಬಂದಿತು.

"ನನಗೆ ಇಷ್ಟವಿಲ್ಲ. ಆದರೆ ಪದ್ಮಾವತಿಯ ಸುಖಕ್ಕೆ ನಾನು ಅಡ್ಡಿ ಬರುವುದಿಲ್ಲ. ಅವಳ ತಂದೆ ಬರುವವರೆಗೂ ಕಾಯಲಿ, ಎನ್ನುತ್ತೇನೆ ಅಷ್ಟೆ! ಅವರಿಗೂ ಕನ್ಯಾದಾನ ಮಾಡಿದ ಪುಣ್ಯ ಬರಬಾರದೆ?"

"ಆದರೆ ಅವರು ಬರುತ್ತಾರೆ ಎನ್ನುವುದು ಏನು ನಂಬಿಕೆ? ಅವರಿವರು ಆಡುವಂತೆ, ಅವರು ಜೀವಂತರಾಗಿರುವುದು ನಿಚ್ಚಿಗೆಯಿಲ್ಲವಲ್ಲ!"

"ಬರದೆ ಏನು ಮಾಡುತ್ತಾರೆ? ತಂದೆಯಿಂದಲೇ ಕನ್ಯಾದಾನವೆಂದು ಇವಳ ಜಾತಕದಲ್ಲಿಯೂ ಇದೆ!"

ಉನ್ಮಾದದ ರೀತಿಯಲ್ಲಿಯೇ ಮಾತನಾಡುತ್ತಿದ್ದಾರೆಂದು ನನಗೆ ದೃಢ ವಾಯಿತು. ಆದರೂ ಅವರ ಧಾಟಿಯಲ್ಲೇ ಹೋದರೆ ಒಳಿತೆಂದು, ನಾನು ಮುಂದುವರೆಸಿ—

"ಇರಲಿ, ಬಂದರೆ ಒಳ್ಳೆಯದೇ! ಮಗಳ ಮದುವೆ ನಿಶ್ಚಯವಾಯಿ ತೆಂದು ತಿಳಿದರೆ ತಾವಾಗಿ ಬರುತ್ತಾರಲ್ಲವೆ? ಬೇಗ ಲಗ್ನ ಇಡಿಸಿ; ನಿಶ್ಚಿತಾರ್ಥ ವನ್ನು ಪ್ರಸಿದ್ಧಿಪಡಿಸಿ. ಈ ಸುದ್ದಿ ನಾಲ್ಕು ಜನರ ಕಿವಿಗೆ ಬೀಳಲಿ. ಇದೊಂದು ಅವರು ಬರುವುದಕ್ಕೆ ಒಳ್ಳೆಯ ಸಂದರ್ಭವಾಯಿತಲ್ಲ" ಎಂದು ಹೇಳಿದೆ.

ಆಕೆಯ ಮುಖ ಗೆಲುವಾಯಿತು; ಕಣ್ಣುಗಳಲ್ಲಿ ಕಳೆ ಮೂಡಿತು. ಈ ಉಪಾಯ ಆಕೆಗೆ ಸರಿತೋರಿತು. ಸ್ವಲ್ಪ ಹೊತ್ತು ಆಲೋಚನೆ ಮಾಡಿ, ಆಕೆ "ನೀವು ಏನಾದರೂ ಮಾಡಿ, ನಾನು ಒಪ್ಪುತ್ತೇನೆ. ಎಂದಾದರೂ ಮದುವೆಗೆ ಮುಹೂರ್ತ ಇಡಿಸಿ. ಅಷ್ಟರೊಳಗೆ ಅವರು ಬಂದೇ ಬರುತ್ತಾರೆ. ಯಾವ ವಿವರ ಗಳಿಗೂ ನನ್ನನ್ನು ಕೇಳಲೇ ಬೇಡಿ. ನೀವು ಹೇಳಿದ್ದಕ್ಕೆಲ್ಲ ನಾನು ಒಪ್ಪುತ್ತೇನೆ" ಎಂದು ಸಮಾಧಾನದಿಂದಲೇ ಆಕೆ ಹೇಳಿದಳು. ಪದ್ಮಾವತಿಗೆ ಈ ನಿರ್ಧಾರದಿಂದ ಸಂತೋಷವಾಗಿರಬಹುದಾದರೂ ತಾಯಿಯ ಮಾನಸಿಕ ಪರಿಸ್ಥಿತಿಯ ಬಗ್ಗೆ ಕಳ ವಳವೇ ಆಯಿತು. ಮದುವೆಯ ಸಮಯಕ್ಕೆ ಆಕೆಯ ಗಂಡ ಬಾರದೆ ಹೋದರೆ ಆಕೆಯ ಹುಚ್ಚು ಇನ್ನಷ್ಟು ಹೆಚ್ಚುವುದೆಂದು. ನನಗೂ ಅನಿಸದಿರಲಿಲ್ಲ. ಆದರೆ ಮಾಡುವುದೇನು?

ಇಷ್ಟಾದ ಮೇಲೆ, ಉಳಿದಂತೆ ಲೋಕಾಭಿರಾಮವಾಗಿ ನಾಲ್ಕಾರು

ಮಾತುಗಳನ್ನಾಡಿ ತಾಯಿ-ಮಕ್ಕಳನ್ನು ಕಳುಹಿಸಿಕೊಟ್ಟೆ.

ಅವರು ಹೋಗುವುದನ್ನೇ ಕಾಯುತ್ತಿದ್ದನೆಂಬಂತೆ ಸುಂದರೇಶ ಎಲ್ಲಿಂದಲೋ ಬಂದು ಒಳಗೆ ನುಗ್ಗಿದ.

"ಏನನ್ನುತ್ತಾರೆ, ನಿಮ್ಮ ರೋಗಿ"

"ರೋಗವೇನೋ ಬಲವಾಗಿಯೇ ಇದ್ದ ಹಾಗೆ ಇದೆ. ಉನ್ಮಾದವೇ ನಿಜ ಎನ್ನು. ಭ್ರಾಂತಿ ಬಹಳ ಇದೆ. ಗಂಡನ ಗೀಳು ತುಂಬ ಹಚ್ಚಿಕೊಂಡಿದ್ದಾಳೆ. ಮದುವೆಯ ವೇಳೆಗೆ ಗಂಡ ಬರುತ್ತಾನೆಂದು ನಂಬಿದ್ದಾಳೆ! ಬರದೆ ಹೋದರೆ ಏನು ಗತಿ! ತೀರ ಹುಚ್ಚಿಯೇ ಆಗಿಬಿಡುತ್ತಾಳೆ! ಸತ್ತುಹೋದ ಗಂಡ ಮತ್ತೆ ಬರುವುದು ಹೇಗೆ? ಏನೋ ನೀನೇನು ಮಾಡುತ್ತೀಯೋ ಮಾಡು. ಆಕೆ ಎಲ್ಲ ದಕ್ಕೂ ಸಿದ್ಧ. ನಾನಂತೂ ಮುಂದುವರಿಯುವುದಿಲ್ಲ. ಪರಿಸ್ಥಿತಿ ತುಂಬಾ ಜಟಿಲ ವಾಗುವುದೆಂದು ನನ್ನ ಹೆದರಿಕೆ!"

ಇದರಿಂದ ಸುಂದರೇಶನೇನೂ ಕದಲಲಿಲ್ಲ. "ಆಗುವುದಂತೂ ಆಗುತ್ತದೆ; ನೀನೂ, ನಾನೂ ಮಾಡುವುದೇನು? ಮದುವೆಗೆ ಮುಹೂರ್ತ ನಿಶ್ಚಯಮಾಡಿ ಯಾಗಿದೆ. ತಿರುಪತಿಯಲ್ಲಿಯೇ ಈ ಮದುವೆಯೂ ನಡೆಯಲಿ. ದಮಯಂತಿಯ ಮದುವೆಯಾದ ನಾಲ್ಕನೆಯ ದಿನ ಮೋಹನನ ಮದುವೆಯಾಗಬಹುದು ಎಂದು ಜೋಯಿಸರು ಹೇಳಿದ್ದಾರೆ. ನೀನೇನೂ ಹೆದರಬೇಡ. ಈಕೆಯ ಉನ್ಮಾದ ವೇನೂ ಹೆಚ್ಚುವುದಿಲ್ಲ, ಇಪ್ಪತ್ತು ವರ್ಷಗಳನ್ನೇ ಹೀಗೆ ಕಳೆದಿದ್ದಾಳೆ! ಈಗ ಇನ್ನೇನು ಆದೀತು?"

ಸುಂದರೇಶನ ಸಮಾಧಾನ ನನಗೆ ಹಿಡಿಸಲಿಲ್ಲ. ನಾನು ಮಾತುಕತೆಯಾಡಿ ಮುಗಿಸುವುದನ್ನೂ ಕಾಯದೆ ಲಗ್ನವನ್ನು ಇಡಿಸಿಬಿಟ್ಟಿದ್ದಾನಲ್ಲ ಈ ಭೂಪ, ಯಾವ ಧೈರ್ಯ ಇವನಿಗೆ ಎಂದು ನನಗೇನೋ ಆಶ್ಚರ್ಯವಾಯಿತು. ಯಾವ ನಂಬಿಕೆ ಇವನನ್ನು ಹೀಗೆ ಮುನ್ನುಗ್ಗಿಸುತ್ತದೆ? ಎಂದು ನನಗೆ ತಿಳಿಯದಾಯಿತು. ನಾನಂತೂ ಈ ಮದುವೆಗಳಿಗೆ ತಿರುಪತಿಗೆ ಹೋಗಬಾರದೆಂದು ನಿಶ್ಚಯಿಸಿದೆ. ಅಲ್ಲಿ ಏನೋ ಅಚಾತುರ್ಯ, ಅನಾಹುತ ನಡೆದೇ ನಡೆಯುತ್ತದೆ ಎಂದು ನನಗೆ ಖಚಿತವಾಯಿತು. ಇದನ್ನು ಸುಂದರೇಶನಿಗೆ ಹೇಳಿದೆ. ಅದಕ್ಕೆ ಅವನು. "ನೀನು ಬರದೆ ಉಂಟೆ? ಬಂದೇ ಬರುತ್ತೀ! ಮದುವೆ ಚೆನ್ನಾಗಿಯೇ ನಡೆಯು ತ್ತದೆ. ಸುಂದರಮ್ಮನೂ ನೆಟ್ಟಗಾಗುತ್ತಾರೆ, ನೋಡು. ನಿನಗೆ ಪ್ರಪಂಚದ ಅನು

ಭವ ಸಾಲದು" ಎಂದು ನಗುತ್ತ ಹೇಳಿದ. ಇವನ ಹುಚ್ಚೇನು ಸುಂದರಮ್ಮನ ಹುಚ್ಚಿಗಿಂತ ಕಡಿಮೆಯಲ್ಲ ಎನಿಸಿತು ನನಗೆ.

ಹೆಚ್ಚು ಹೊತ್ತು ನಿಲ್ಲದೆ ಹೊರಟೂ ಹೋದ. ನಾನು ಆ ದಿನವೇ ಪ್ರಿನ್ಸಿಪಾಲರ ಮನೆಗೆ ಹೋಗಿ ನಡೆದುದನ್ನು ವಿವರಿಸಿದೆ. ಅವರ ಆತಂಕ ಹೆಚ್ಚಿತೆಂದರೆ ಆಶ್ಚರ್ಯವೇನಿಲ್ಲ. ಹುಚ್ಚಿಯ ಮಗಳನ್ನು ಮೋಹನನಿಗೆ ತಂದುಕೊಳ್ಳುವುದು ಯಾರಿಗೆ ತಾನೇ ಸಮಾಧಾನವೆನಿಸೀತು ? "ಏನೋ, ಆದ ಹಾಗೆ ಆಗಲಿ ! ನಾನೇನು ಮಾಡಲಿ ? ಮೋಹನನಿಗೆ ಇನ್ನಿಲ್ಲದಂತೆ ಹೇಳಿದೆ, ಅವನು ಕೇಳಲಿಲ್ಲ. ಇಷ್ಟಬಂದ ಹಾಗೆ ಮಾಡಿಕೊಳ್ಳಲಿ ?" ಎಂದು ಕಡೆಗೆ ಮೊಂಡು ಸಮಾಧಾನವನ್ನು ಮೈಮೇಲೆಳೆದುಕೊಂಡು ತೆಪ್ಪಗಾದರು. ನಾನು ಮಾಡುವುದಾದರೂ ಏನು ? ಆದದ್ದು ಆಗಲಿ, ತಪ್ಪಿಸುವುದಕ್ಕೆ ನಾನು ಯಾರು ಎಂದುಕೊಂಡು ಹಿಂದಿರುಗಿದೆ.

೧೫

ಮುಂದಿನ ತಿಂಗಳು ತಿರುಪತಿಯಲ್ಲಿ ಮದುವೆಗಳು ನಡೆಯಲು ನಿಶ್ಚಯವಾಗಿ ಲಗ್ನಪತ್ರಿಕೆಗಳು ಹೊರಟವು. ಮೋಹನ–ಪದ್ಮಾವತಿ ಇಬ್ಬರೂ ಕೂಡಿ ತಮ್ಮ ಹೆಸರಿನಲ್ಲೇ ಕರೆಯೋಲೆಗಳನ್ನು ಒಕ್ಕಣಿಸಿದ್ದರು; ಎಷ್ಟಾದರೂ ಓದಿದವರಲ್ಲವೆ ? ಅಷ್ಟಲ್ಲದೆ ಇಬ್ಬರಿಗೂ ತಂದೆಯಿಲ್ಲ. ದಮಯಂತಿ ಮತ್ತು ವಕೀಲರ ಮಗ ಸುಬ್ಬರಾಯನ ಲಗ್ನಪತ್ರಿಕೆ ವಕೀಲರ ಹೆಸರಿನಲ್ಲಿಯೇ ಹೊರಬಿದ್ದಿತು. ವಕೀಲ ವೆಂಕಟಕೃಷ್ಣರಾಯರು ತಮ್ಮ ಶ್ರೀಮತಿಯ ಹೆಸರನ್ನೂ ಸೇರಿಸಿಕೊಂಡು 'ಗುರುಹಿರಿಯರ, ಹರಿವಾಯುಗಳ ಪ್ರೇರಣೆಯಿಂದ ನಡೆಯಲಿರುವ ತಮ್ಮ ಮಗ ಸುಬ್ಬರಾಯನ ಮದುವೆಗೆ ಬಂಧುಮಿತ್ರರು ಬರಬೇಕೆಂದು ಕರೆಯೋಲೆಯಲ್ಲಿ ಕೋರಿದ್ದರು. ಹರಿವಾಯುಗಳ ಪ್ರೇರಣೆಯೋ, ಸುಂದರೇಶನ ಪ್ರೇರಣೆಯೋ ಯಾರಿಗೆ ಗೊತ್ತು ? ಅಂತೂ ಶ್ರೀಮತಿ ಮತ್ತು ಶ್ರೀಯುತ ವೆಂಕಟಕೃಷ್ಣ ರಾಯರು ಕರೆಯೋಲೆಯ ತಲೆಭಾಗದಲ್ಲಿ ಕಲೆತಿದ್ದುದು ಸ್ವಾರಸ್ಯವಾಗಿದ್ದಿತು.

ಮದುವೆಗೆ ಹೋಗಬಾರದೆಂದೇನೋ ನಿಶ್ಚಯಿಸಿದ್ದೆ. ಅಲ್ಲಿ ಏನೋ

ಅಚಾತುರ್ಯ ನಡೆದೀತು, ನನಗೇಕೆ ಆ ಸಂಕಟ ಎನ್ನುವ ಹೆದರಿಕೆ ನನಗೆ. ಆದರೆ ಪ್ರಿನ್ಸಿಪಾಲರ ನಿರ್ಬಂಧದಿಂದ ಹೋಗಲೇಬೇಕಾಯಿತು. ಈ ನಿರ್ಬಂಧದ ಹಿನ್ನೆಲೆಯಲ್ಲಿ ಸುಂದರೇಶನ ಪ್ರೇರಣೆ ಇದ್ದೀತೆಂದು ಊಹಿಸಲು ನನಗೆ ಕಷ್ಟವಾಗ ಲಿಲ್ಲ. ಮದುವೆ ಬೆಟ್ಟದ ಕೆಳಗೆ, ಪದ್ಮಸರೋವರದ ಮೇಲೆ ನಡೆಯುವುದಿದ್ದಿತು. ದಮಯಂತಿಯ ಮದುವೆಯ ಹಿಂದಿನ ದಿನ ವಕೀಲರೂ ಅವರ ಹೆಂಡತಿಯೂ ದೇವರ ಸನ್ನಿಧಿಯಲ್ಲಿ ಪುನರ್ದರ್ಶನದ ವಿಧಿಯನ್ನು ನಡೆಸುವ ಸಲುವಾಗಿ ಬೆಟ್ಟದ ಮೇಲೆ ಹೋದರು. ಅವರೊಂದಿಗೆ ನಾನೂ ಪ್ರಿನ್ಸಿಪಾಲರೂ ಹೋದೆವು ; ನಾವು ಹೋದದ್ದು ವಿಧಿಯಿಲ್ಲದೆ, ಕೇವಲ ಸಾಕ್ಷಿಗಳಂತೆ.

ಆ ವೇಳೆಗಾಗಲೇ ಪದ್ಮಾವತಿಯ ಕಡೆಯವರು, ಎಂದರೆ ಅವಳ ತಾಯಿ ಮತ್ತು ಪದ್ಮನಾಭಶೆಟ್ಟಿ ಬೆಟ್ಟದ ಮೇಲೆ ಬಂದಿದ್ದರು. ಅವರು ಅಲ್ಲಿಗೆ ಎರಡು ದಿನಗಳ ಮೊದಲೇ ಬಂದರಂತೆ ; ಯಾವುದೋ ಹರಕೆಯಿದ್ದಿತು ಎಂದು ಅವ ರೊಂದಿಗೇ ಇದ್ದ ಸುಂದರೇಶ ತಿಳಿಸಿದ. ಅವರ ಯೋಗಕ್ಷೇಮವನ್ನು ವಿಚಾರಿಸಿ ಕೊಳ್ಳಲು ಸುಂದರೇಶನನ್ನೇ ಬಿಟ್ಟಿದ್ದರು. ನಮ್ಮ ಪ್ರಿನ್ಸಿಪಾಲರು 'ಯೋಗ ಕ್ಷೇಮಂ ವಹಾಮ್ಯಹಂ' ಎನ್ನುವುದೂ ಸುಂದರೇಶನ ಸೂತ್ರವೇ. ಅಂತೂ ಎಲ್ಲರೂ ಒಟ್ಟುಗೂಡಿ ಮರುದಿನ ಶುಕ್ರವಾರದ ತಿರುಮಂಜನ ಸೇವೆಗೆ ಹೋಗು ವುದೆಂದು ಮಾತಾಯಿತು. ಅಂದು ಮತ್ತೆ ನಾನು ಕಲೆಯಲಿಲ್ಲ. ನಾವು ಆಕಾಶ ಗಂಗೆಯ ಕಡೆ ಹೊರಟುಹೋದೆವು.

ಮರುದಿನ ಬೆಳಿಗ್ಗೆ ಐದು ಗಂಟೆಗೇ ಎದ್ದು ಸ್ನಾನಮಾಡಿ, ಮಡಿಯುಟ್ಟು ಗುಡಿಯ ಕಡೆ ಹೊರಟೆವು. ಗುಡಿಯ ಒಳಗೆ ನರಸಿಂಹಸ್ವಾಮಿಯ ಸನ್ನಿಧಿ ಯಿಂದ ಸೇವಾಕರ್ತರ ಕ್ಯೂ ನಿಂತಿದ್ದಿತು ; ನಾನೂ ಪ್ರಿನ್ಸಿಪಾಲರೂ ಆಗಲೇ ಬೆಳೆದಿದ್ದ ಕ್ಯೂವಿನ ಬಾಲಕ್ಕೆ ಸೇರಿಕೊಂಡೆವು. ಆ ಸಮಯಕ್ಕೆ ಎಲ್ಲಿಂದಲೋ ಸುಂದರೇಶನೂ ಬಂದು ನಮ್ಮ ಹಿಂದೆ ಸೇರಿದ. ನಾನು ಹಾಗೇ ಕಣ್ಣಾಡಿಸಿ ನೋಡಿದೆ. ನಮಗೆ ಸ್ವಲ್ಪ ಮುಂದೆ ಪದ್ಮಾವತಿಯ ಮನೆಯವರೂ, ವಕೀಲರೂ ಅವರ ಹೆಂಡತಿಯೂ ನಿಂತಿದ್ದರು. ಕ್ಯೂ ಮುಂದೆ ಸರಿದು ಬಂಗಾರ ಬಾಗಿಲನ್ನು ದಾಟಿದ ಮೇಲೆ ಎಲ್ಲರೂ ಕುಳಿತು ಅಭಿಷೇಕವನ್ನು ನೋಡಿದೆವು. ಅಭಿಷೇಕ ಮುಗಿದು ದೇವರಿಗೆ ದೀಪಾರಾಧನೆಯಾದ ಮೇಲೆ ಕ್ಯೂನಲ್ಲಿಯೇ ಜನ ಗರ್ಭ ಗುಡಿಯ ತಲೆಬಾಗಿಲವರೆಗೆ ಸರಿಯಲಾರಂಭಿಸಿದರು. ನನ್ನ ಹಿಂದೆಯೇ ನಿಂತಿದ್ದ

ಸುಂದರೇಶನನ್ನು ಮಾತನಾಡಿಸಲು ಹಿಂತಿರುಗಿದಾಗ ಅವನು ಮುಂದೆ ನಿಂತಿದ್ದ ಯಾರಿಗೋ ಕಣ್ಣು ಸನ್ನೆ ಮಾಡಿದುದನ್ನು ನೋಡಿದೆ. ಒಡನೆಯೇ ಅವನು ನನ್ನ ಮುಂದಿದ್ದ ಪ್ರಿನ್ಸಿಪಾಲರ ಕೈ ಹಿಡಿದು ಎಳೆದುಕೊಂಡು ಮುಂದೆ ಸರಿದ; ಅವರ ಕಿವಿಯಲ್ಲಿ ಏನೋ ಪಿಸುಗುಟ್ಟುತ್ತಿದ್ದ. ನಾನು ಇದರ ತಾತ್ಪರ್ಯ ಏನಿದ್ದೀತೆಂದು ಯೋಚನೆ ಮಾಡುವಷ್ಟರಲ್ಲಿಯೇ ಗರ್ಭಗುಡಿಯ ಬಾಗಿಲಲ್ಲಿ ಸುಂದರೇಶ ಮತ್ತು ಪ್ರಿನ್ಸಿಪಾಲರು ಒಂದು ಕಡೆ ಪದ್ಮಾವತಿಯ ತಾಯಿ ಸುಂದರಮ್ಮ ಇನ್ನೊಂದು ಕಡೆ ದೇವರ ಮುಂದೆ ಕೈಮುಗಿದು ನಿಂತಿದ್ದರು.

ಸುಂದರೇಶ ತನ್ನ ಕೈಯ್ಯಲ್ಲಿದ್ದ ಎರಡು ಹೂಮಾಲೆಗಳನ್ನು ಅರ್ಚಕರ ಕೈಗಿತ್ತ. ಅವರು ಒಂದನ್ನು ಪ್ರಿನ್ಸಿಪಾಲರಿಗೂ ಇನ್ನೊಂದನ್ನು ಸುಂದರಮ್ಮ ನಿಗೂ ಕೊಟ್ಟರು. ದೇವರಿಗೆ ಆರತಿ ಬೆಳಗಿದ ನಂತರ, ಪ್ರಿನ್ಸಿಪಾಲರು ಸುಂದ ರಮ್ಮನಿಗೂ, ಸುಂದರಮ್ಮ ಪ್ರಿನ್ಸಿಪಾಲರಿಗೂ ಹೂಮಾಲೆ ಹಾಕಿದುದನ್ನು ನೋಡಿದೆ. ಕ್ಯೂನಲ್ಲಿ ನಿಂತ ಜನವೆಲ್ಲಾ 'ಗೋವಿಂದಾ, ಗೋವಿಂದ!' ಎಂದು ಕೂಗಿದಾಗ ನಾನೂ ನನ್ನ ಧ್ವನಿಯನ್ನು ಸೇರಿಸಿದೆ. ಅಪರಿಚಿತರಾದ ಆ ಜನಕ್ಕೆ ಏನು ಅರ್ಥವಾಯಿತೋ ನನಗೂ ಅದೇ ಅರ್ಥವಾಯಿತು. ಅರ್ಚಕರು ಶ್ರೀಪಾದ ಶಿಖರವನ್ನು ಪ್ರಿನ್ಸಿಪಾಲರು ಮತ್ತು ಸುಂದರಮ್ಮನ ತಲೆಗಳ ಮೇಲಿಟ್ಟು ಹರಸಿದರು, ಅವರಿಬ್ಬರೂ ಮುಂದೆ ಸರಿದರು. ಇದೇ ವಿಧಿ ವಕೀಲ ರಿಗೂ ಅವರ ಹೆಂಡತಿಗೂ ನಡೆಯಿತು; ಈ ಎರಡನೆಯ ಪ್ರಸಂಗ ನಡೆಯುವು ದೆಂದು ನನಗೆ ಮೊದಲೇ ತಿಳಿದಿದ್ದಿತು. ಮೊದಲನೆಯದು ಮಾತ್ರ ನನಗೆ ಒಗ ಟಾಗಿಯೇ ಉಳಿಯಿತು.

ದೇವರ ದರ್ಶನವನ್ನು ಸಮಾಧಾನದಿಂದ ಮಾಡುವುದು ನನಗೆ ಸಾಧ್ಯವಿರ ಲಿಲ್ಲ. ಆತುರದಲ್ಲಿ ಮುಗಿಸಿ ಹೊರಬರುವ ವೇಳೆಗೆ ಮುಂದಿನ ಜನ ಎಲ್ಲ ವಿಮಾನ ಪ್ರದಕ್ಷಿಣೆಗೆ ಹೊರಟಿದ್ದರು; ಪ್ರಿನ್ಸಿಪಾಲರು ಮತ್ತು ಸುಂದರಮ್ಮ ಮಾತ್ರ ಬಂಗಾರ ಬಾವಿಯ ಬಳಿ ಮಾತನಾಡುತ್ತ ನಿಂತಿದ್ದರು. ಸುಂದರೇಶನೂ ಇರ ಲಿಲ್ಲ! ನಾನು ಮುಖಮಂಟಪದಿಂದ ಹೊರ ಬಂದೊಡನೆ ಪ್ರಿನ್ಸಿಪಾಲರು ನನ್ನನ್ನು ನೋಡಿ ನಗುತ್ತ "ಬನ್ನಿ, ಬನ್ನಿ, ನಿಮಗೊಂದು ಸಂತೋಷದ ಸುದ್ದಿ" ಎಂದರು. ನಾನು ಅವರ ಬಳಿ ಹೋದೆ. "ಏನು ಊಹಿಸಿ, ನೋಡೋಣ" ಎಂದು ಕೇಳಿದರು. ಶಂಕಾತುರಗಳ ಗೊಂದಲದಿಂದ ನಾನಿನ್ನೂ ಚೇತರಿಸಿ

ಕೊಂಡೇ ಇರಲಿಲ್ಲ. "ಏನೋ ತಿಳಿಯದು, ಸ್ವಾಮಿ, ಊಹಿಸಲಾರೆ" ಎಂದು ನನ್ನ ಅಸಾಮರ್ಥ್ಯವನ್ನು ಒಪ್ಪಿಕೊಂಡೆ. ಅವರು ನಗುತ್ತ ಸುಂದರಮ್ಮನ ಮುಖ ನೋಡಿದರು. ಸುಂದರಮ್ಮನ ಮುಖ ಗಂಭೀರವಾಗಿಯೇ ಇದ್ದಿತು. ಪ್ರಿನ್ಸಿಪಾಲರು ಹೀಗೆ ಸಂತೋಷವಾಗಿದ್ದುದನ್ನು ನಾನು ಆವರೆಗೆ ನೋಡಿಯೇ ಇರಲಿಲ್ಲ. ಸುಂದರಮ್ಮನ ಮುಖವೂ ಗೆಲುವಾಗಿದ್ದಿತು, ರೋಗದ ಕಳೆ ಮಾಯ ವಾಗಿದ್ದಿತು.

ಸಮಸ್ಯಾಪೂರಣದ ಕಡೆ ಸಣ್ಣ ಕಲ್ಲೊಂದನ್ನು ಒಗೆಯುತ್ತ; ನಾನು "ಇಬ್ಬರಿಗೂ ಮೊದಲೇ ಪರಿಚಯವೋ ಹೇಗೆ?" ಎನ್ನಲು ಪ್ರಿನ್ಸಿಪಾಲರು

"ಪರಿಚಯವೆ! ನಾವಿಬ್ಬರೂ ಗಂಡ ಹೆಂಡಿರು, ಸ್ವಾಮಿ! ಇಪ್ಪತ್ತು ವರ್ಷಗಳಾದ ಮೇಲೆ ಒಬ್ಬರನ್ನೊಬ್ಬರು ಕಾಣುತ್ತಿದ್ದೇವೆ! ನೀವು ವಯಸ್ಸಿನಲ್ಲಿ ನನಗಿಂತ ಸಣ್ಣವರು, ಆದರೂ ಹರಸಿ, ಪರವಾಗಿಲ್ಲ" ಎಂದರು.

ನಾನು ಅವಾಕ್ಕಾದೆ. ಸ್ವಲ್ಪ ಸುಧಾರಿಸಿಕೊಂಡು, "ಜಾತಕಫಲ ಅಂತೂ ದಿಟವಾಯಿತಲ್ಲ? ತಂದೆಯಿಂದಲೇ ಕನ್ಯಾದಾನ ಎಂದು ಪದ್ಮಾವತಿಯ ಜಾತಕ ದಲ್ಲಿದೆಯಂತೆ?" ಎಂದು ನಾನು ಹೇಳಲು ಪ್ರಿನ್ಸಿಪಾಲರು, "ಯಾರು ಹೇಳಿ ದರು?" ಎಂದು ಕೇಳಿದರು. "ಇನ್ನು ಯಾರು, ನಿಮ್ಮವರೇ! ಸುಂದರಮ್ಮನ ಕಡೆ ತೋರಿಸಲು ಅವರು ನಕ್ಕರು. "ನನಗೇನೋ ಸಂದೇಹವೇ ಇರಲಿಲ್ಲ" ಎಂದು ಆಕೆ ಒಪ್ಪಿಕೊಂಡರು. ಪ್ರಿನ್ಸಿಪಾಲರು "ನನ್ನ ಜಾತಕದಲ್ಲಿ ಕನ್ಯಾ ಸ್ವೀಕಾರ ಎಂದಿದೆಯೋ ಏನೋ! ನನ್ನದು ಏಕಪತ್ನೀ ಪುನರ್ವಿವಾಹದ ಯೋಗವೋ, ಸ್ವಪುತ್ರಿಪ್ರತ್ಯಭಿಜ್ಞಾನದ ಯೋಗವೋ ಇದ್ದೀತಲ್ಲವೆ?" ಎಂದು ನಕ್ಕರು.

ಪ್ರಿನ್ಸಿಪಾಲರು "ಏನೋ ಸ್ವಾಮಿ, ಜಗನ್ನಿಯಾಮಕನಾದ ಶ್ರೀನಿವಾಸನ ದಯೆಯಿಂದ ಮತ್ತೆ ಒಂದಾದೆವು. ಪದ್ಮಾವತಿ ನನ್ನ ಮಗಳೇ ಎಂದು ತಿಳಿಯದೆ ಬವಣೆ ಪಟ್ಟೆನಲ್ಲ!" ಎಂದು ಸಮಾಧಾನಪಟ್ಟುಕೊಂಡು ಪ್ರದಕ್ಷಿಣೆ ಹೊರಟರು. ನಾವೂ ಅವರೊಂದಿಗೆ ನಡೆದೆವು.

ಅವರು ಮತ್ತೆ ಒಂದಾದುದು ಶ್ರೀನಿವಾಸನ ದಯೆಯಿಂದಲೋ ಸುಂದ ರೇಶನ ಸಾಹಸದಿಂದಲೋ ಎಂದು ನನಗೆ ಸಂದೇಹವೇ. ಶ್ರೀನಿವಾಸನದು ದೈವ ವಾದರೆ ಸುಂದರೇಶನದು ಪುರುಷಾಕಾರ ಎನ್ನೋಣ. ಆದರೂ ಸಮಸ್ಯೆಯೇನೂ

ಬಗೆಹರಿಯಲಿಲ್ಲ. ಪುನರ್ಮಿಲನಪ್ರಸಂಗದ ಗುಹೆಯಲ್ಲಿ ಬೆಳಕಿನ ಬಳ್ಳಿಗಳು ಕಾಣಲಾರಂಭಿಸಿದವು ನಿಜ, ಆದರೆ ಅದರ ಹಿನ್ನೆಲೆ, ವಿರಹದ ಕಾರಣ, ಇವೊಂದೂ ಅರ್ಥವಾಗಲಿಲ್ಲ. ಸಮಸ್ಯೆ ಪೂರ್ತಿ ಸಮಸ್ಯೆಯಾಗಿಯೇ ಉಳಿದರೆ ವಾಸಿ; ಹೀಗೆ ಅರ್ಧವರ್ಧ ಹರಿದರೆ ಅದರಿಂದ ಉತ್ಕಂಠತೆ ಹೆಚ್ಚು. ಈಗ ನನ್ನ ಮನಸ್ಸಿನಲ್ಲಿ ಮೊದಲಿಗಿಂತ ಹೆಚ್ಚಿನ ಬಿರುಗಾಳಿ ಬಡಿಯತೊಡಗಿತು. ಜಂಬುನಾಥಯ್ಯರು ಮದ್ರಾಸು ಕಡೆಯವರು. ಸುಂದರಮ್ಮ ಮಂಗಳೂರು ಕಡೆಯವರು, ಜಾತಿ ಬೇರೆ. ಇಪ್ಪತ್ತು ವರ್ಷಗಳಿಗೆ ಮುಂಚೆ ಇವರು ಒಟ್ಟಿಗೆ ಇದ್ದುದೆಂದರೆ ಹೇಗೆ, ಎಲ್ಲಿ? ಅವರನ್ನೇ ನೇರವಾಗಿ ಕೇಳುವಂತಿರಲಿಲ್ಲ. ವಕೀಲರಿಗೆ ಈ ವಿಚಾರ ತಿಳಿದಿದ್ದಿರಬಹುದು; ಆದರೆ ಅವರಿಗೂ ಸಂತೋಷದ ಸಮಯ ಇದು. ಅವರ ಪುನರ್ಮಿಲನದ ಸಮಯದಲ್ಲಿ ನನ್ನ ಜಿಜ್ಞಾಸೆ ಉಚಿತವೂ ಅಲ್ಲ, ಸಫಲವೂ ಆಗದು. ಎಲ್ಲರೂ ತಂತಮ್ಮ ಸುಖಸಂತೋಷಗಳಲ್ಲಿಯೇ ಇದ್ದರು, ಹಾಗೆ ನೇರವಾದ ಸಂತೋಷಕ್ಕೆ ಕಾರಣ ಇಲ್ಲದವರೆಂದರೆ ನಾವಿಬ್ಬರೇ — ಸುಂದರೇಶ, ನಾನು. ಸರಿ, ಸುಂದರೇಶನೇ ಶರಣು ಎಂದು ನಿಶ್ಚಯಿಸಿಕೊಂಡೆ.

ಆ ಮಧ್ಯಾಹ್ನವೇ ಬೆಟ್ಟವಿಳಿದು ಕೆಳ ತಿರುಪತಿಗೆ ಬರುವ ನಿರ್ಧಾರವಿದ್ದಿತು. ಸಮಯವನ್ನು ಸಾಧಿಸಿ ಬಸ್ಸಿನಲ್ಲಿ ಸುಂದರೇಶನ ಪಕ್ಕದಲ್ಲಿಯೇ ಕುಳಿತೆ. ಕೆದಕಿ ಕೆದಕಿ ಕಥೆಯನ್ನೆಲ್ಲ ಕೇಳಿದೆ. ಮಸಕು ಮಸಕಾಗಿದ್ದ ವಿವರಗಳು ತಿಳಿಯಾಗಿ ಹರಿದುವು; ಗೋಜಾಗಿದ್ದ ಗಂಟುಗಳು ಕಳಚಿಕೊಂಡವು. ಜಂಬುನಾಥಯ್ಯರು ದಿಟವಾಗಿ ಮಂಜುನಾಥಶೆಟ್ಟಿಯಂತೆ! ಯಾವ ಅಪಭ್ರಂಶದ ಪರಿವರ್ತನೆಯೋ! ಇವರು ಮಂಗಳೂರಿನಿಂದ ಮದ್ರಾಸಿಗೆ ಬಂದ ದಿನ ಅಪಘಾತಕ್ಕೆ ತುತ್ತಾದುದೇನೋ ನಿಜವೇ. ಇದರಿಂದ ಅವರು ತೀರಿಕೊಂಡರೆಂಬ ಸುದ್ದಿಯೂ ಅಲೆಅಲೆಯಾಗಿ ಅಡ್ಡಾಡಿ ವಕೀಲರನ್ನೂ ಮುಟ್ಟಿದುದು ಸೋಜಿಗವೇನಲ್ಲ. ಶೆಟ್ಟರು ಆಸ್ಪತ್ರೆಯಲ್ಲಿದ್ದು ಗಾಯಗಳು ಗುಣವಾಗಿ ಆರೋಗ್ಯ ಸುಧಾರಿಸಿದ ನಂತರ ಬೆಂಗಳೂರಿಗೆ ಬಂದು, ಅಲ್ಲಿ ತಮ್ಮ ಹೆಂಡತಿಯನ್ನು ಹುಡುಕಿ, ಹುಡುಕಿ ಕಾಣದೆ ಬೇಸತ್ತು ನಿರ್ವಾಹವಿಲ್ಲದೆ ಒಂಟಿಯಾಗಿಯೇ ಉಳಿಯಬೇಕಾಯಿತು. ಇದು ಬೆಳಕಿಗೆ ಬಂದ ಕಥೆಯ ಎಳೆ.

ಗಂಡ ಹೆಂಡಿರು ಹೀಗೆ ಇಪ್ಪತ್ತು ವರ್ಷಗಳು ಒಬ್ಬರನ್ನೊಬ್ಬರು ಕಾಣದೆ ದೂರದೂರವೇ ಇದ್ದರೂ ಅವರ ಪರಸ್ಪರ ಅನುರಾಗವೇನೂ ಕಡಮೆಯಾಗಲಿಲ್ಲ

ವೆಂದು ಸುಂದರೇಶ ಶಪಥಮಾಡಿ ಹೇಳಿದ. ಇಬ್ಬರೂ ಒಳಗೊಳಗೇ ಕುದಿಯು ತ್ತಿದ್ದುದೂ, ತವಕಪಡುತ್ತಿದ್ದುದೂ ಸುಂದರೇಶನಿಗೆ ಖಚಿತವಾದ ಮೇಲೇ ಈ ನಾಟಕಕ್ಕೆ ಕೈಹಾಕಿದೆನೆಂದು ಅವನು ಸಮಾಧಾನ ಹೇಳಿದ.

ಸಮಾಧಾನ ನನಗಾಗಿ, ಅಷ್ಟೆ; ಅವನಿಗೇನು ಅದರ ಅಗತ್ಯವಿರಲಿಲ್ಲ; ಅವನ ಸಮಾಧಾನ ಕೆಲಸ ಮಾಡಿತು, ಹೃದಯ ಹಗುರಾಯಿತು. ಆದರೆ ಮನಸ್ಸಿನಲ್ಲಿ ಮೋಡಗಳು ಹಾಗೆಯೇ ಉಳಿದುಕೊಂಡಿದ್ದುವು. ಮನುಷ್ಯರ ವ್ಯವಹಾರದಲ್ಲಿ ವಿಚಿತ್ರಗಳೇನೋ ನಡೆಯುತ್ತವೆ. 'ದೇವೋ ನ ಜಾನಾತಿ ಕುತೋ ಮನುಷ್ಯಃ'. ಆದರೆ ಹೀಗೂ ಆಗುವುದುಂಟೆ? ಕಷ್ಟಗಳು ಬೆಟ್ಟದಂತೆ ಮೇಲೆರಗಿ ಬಂದು, ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಹೀಗೆ ಮಂಜು ನೀರಾಗಿ ಹರಿಯುವಂತೆ ಕರಗಿ ಹೋಗುವುದು ನಿಸರ್ಗದ ನಿಯಮವೇನಲ್ಲ. ಅದಕ್ಕೆ ಅಪ ವಾದವೆಂದರೂ ತಡೆದೀತು. ಇದು 'ಅಘಟಿತ ಘಟನೆ'ಯೇ; ಆಕಸ್ಮಿಕವೆಂದರೂ ಸರಿಯೇ, ದೈವವೆಂದರೂ ಸರಿಯೇ. ಆಕಸ್ಮಿಕವೆನ್ನುವುದು ಅಷ್ಟು ಸರಿಯಾಗ ದೇನೋ; ಏಕೆಂದರೆ ಇದರಲ್ಲಿ ಸುಂದರೇಶನ ಕೈವಾಡ ಸ್ಪಷ್ಟವಾಗಿದ್ದಿತು.

ಅಂದು ನಾಲ್ಕು ದಂಪತಿಗಳು ಅವನಿಂದಲೇ ಒಟ್ಟಿಗೆ ಕಲೆತಿದ್ದರು. ಹೊಸ ಸಂಸಾರಗಳೆರಡು, ಹಳೆಯವೆರಡು. ಹೊಸಬರಿಗೂ ಹಳಬರಿಗೂ ಆಗೇನೋ ಪ್ರಥಮ ಸಮಾಗಮದ ಸಂತಸವೇ. ಪುನರ್ಮಿಲನದಲ್ಲಿ ರಸವಿಲ್ಲ, ಆನಂದವಿಲ್ಲ ಎನ್ನುವವರಾರು? ಪ್ರಥಮ ಸಮಾಗಮದ ಪ್ರತೀಕ್ಷೆ, ಕುತೂಹಲ, ತವಕ ಒಂದು ರೀತಿಯದು ಇಲ್ಲಿನ ಕೌತುಕ, ತವಕ, ನಿರೀಕ್ಷೆಗಳು ಇನ್ನೊಂದು ರೀತಿಯದು. ಬಹುಕಾಲದ ಆತಂಕ ಮರೆಯಾಗಿ, ವಿರಹದ ಉರಿ ಆರಿ, ಅನಿಶ್ಚಿ ತತೆಯ ವೇದನೆ ಮಾಯವಾದಾಗ ಒದಗುವ ಸಮಾಧಾನ ಎಣೆಯಿಲ್ಲದುದು. ಭಾರವನ್ನು ಕೆಳಗಿಳಿಸಿ ಹೆಗಲು ಹಗುರವಾದಂತೆ ಅದು.

ನಮ್ಮ ಪ್ರಕಟಣೆಗಳು

ಕಾದಂಬರಿ		ರೂ. ಪೈ.
ಉದಯರವಿ	ಬಿ. ಪುಟ್ಟಸ್ವಾಮಯ್ಯ	7-50
ರಾಜ್ಯಪಾಲ	,,	12-75
ಕಲ್ಯಾಣೇಶ್ವರ	,,	9-00
ನಾಗಬಂಧ	,,	6-00
ಮುಗಿಯದ ಕನಸು	,,	7-50
ಕ್ರಾಂತಿ ಕಲ್ಯಾಣ	,,	15-00
ದ್ವಾಸುಪರ್ಣ	,,	4-00
ರೂಪಲೇಖಾ	,,	3-00
ಅರ್ಧಾಂಗಿ	,,	2-00
ತೇಜಸ್ವಿನಿ	,,	3-00
ಚಹಕಟ್ಟೆದ ಸಾಮ್ರಾಜ್ಯ	,,	1-50
ಚಾಲುಕ್ಯ ತೈಲಪ	,,	4-50
ಮಹಾಬ್ರಾಹ್ಮಣ	ದೇವುಡು	12-00
ಮಹಾದರ್ಶನ	,,	19-50
ಮಹಾಕ್ಷತ್ರಿಯ	,,	9-00
ಅಂತರಂಗ	,,	6-00
ಸೋಲೋ ಗೆಲುವೊ	,,	4-50
ಸುಖ ಪ್ರಾರಬ್ಧ	ಪ್ರೊ॥ ಎಸ್. ಕೆ. ರಾಮಚಂದ್ರರಾವ್	4-50
ಆಕಸ್ಮಿಕ	ತ.ರಾ.ಸು.	2-00
ಬೇಡದ ಮಗು	,,	4-00
ಶಿಲ್ಪಶ್ರೀ	,,	7-50
ಸರ್ವಮಂಗಳಾ	ಚದುರಂಗ	4-50
ವಸುಂಧರಾ	ಕೃಷ್ಣಮೂರ್ತಿ ಪುರಾಣಿಕ	2-75
ಕುಲವಧು	,,	4-00
ದೇವಲಹರಿ	,,	2-40

		ರೂ. ಪೈ
ಪ್ರೇಮಹಾರ	ಎಂ. ಎಸ್. ರಾಮಯ್ಯ	2-00
ಸುಳಿಗಾಳಿ	ಜಯತೀರ್ಥ ರಾಜಪುರೋಹಿತ	2-75
ಸರಸ್ವತಿಯ ಸಂಹಾರವೇ	ಲಲಿತಾಂಬ	3-25
ಗೌರೀಶಂಕರ	ಎನ್ಕೆ	3-75
ಕುಡಿನೋಟ	ಎಂ. ನರೇಂದ್ರಬಾಬು	2-00
ಸತ್ಯಭಾಮ	,,	2-40
ನಾಲ್ಕನೇ ಮನೆ	,,	5-00
ಮುಕ್ತಾಫಲ	ಅಡಿಗ	1-50
ಎರಡು ಧ್ರುವ	ಖಾಂಡೇಕರ್	4-00
ಕಮರಿದ ಚಿಗುರು	,,	9-00
ರಾಜಮೋಹನನ ಹೆಂಡತಿ	ಬಂಕಿಮಚಂದ್ರ	2-50
ಹೇಮಂತಗಾನ	ವ್ಯಾ. ಬಲ್ಲಾಳ	6-00
ನಾನೂ ವಿದ್ಯಾವಂತಳಾದೆ	ದಕ್ಷಿಣಾಮೂರ್ತಿ	8-25
ಹೊಸವಸಂತ	,,	6-50
ಟೆಸ್‌ಡರ್ಬರ್‌ವೀಲ್	ಥಾಮಸ್ ಹಾರ್ಡಿ	9-75
ಬಾಳುರಿ	ರಂ. ಶ್ರೀ. ಮುಗಳಿ	1-80
ತಾಯಬಯಕೆ	ಎಂ. ವಿ.ಸೀ	2-25
ಜೂಡಿಲಕ್ಷ್ಮಿ	,,	2-25
ಬದಲಿಸಿದ ತಲೆ	ಪು. ತಿ. ನ.	1-50

ನಾಟಕಗಳು

ಕುರುಕ್ಷೇತ್ರ	ಬಿ. ಪುಟ್ಟಸ್ವಾಮಯ್ಯ	6-00
ಅಕ್ಕಮಹಾದೇವಿ	,,	3-60
ಸಂಪೂರ್ಣ ರಾಮಾಯಣ	,,	4-00
ದಶಾವತಾರ	,,	4-00
ಬಿಡುಗಡೆಯ ಬಿಚ್ಚುಗತ್ತಿ	,,	4-50
ರಾಣಿ	,,	2-50
ಅಭಿನೇತ್ರಿ	,,	1-00

		ರೂ. ಪೈ
ಸತೀ ತುಲಸಿ	ಬಿ. ಪುಟ್ಟಸ್ವಾಮಯ್ಯ	1-50
ಬಭ್ರುವಾಹನ	,,	3-75
ಯಾಜ್ಞಸೇನಿ	,,	1-75
ಗೌತಮ ಬುದ್ಧ	,,	3-20
ತಾರಕವಧೆ	,,	2-00
ಷಾಜಹಾನ್	,,	5-00
ನೆಲೆಯಾಗು, ಶಿಲೆಯಾಗು, ಕಲೆಯಾಗು ದೇವಿ	,,	4-00
ಶಾಂತಿದೂತ ಬಾಹುಬಲಿ	,,	4-00
ಹಿಟ್ಟಿನ ಕೋಳಿ	,,	2-25
ಘನಾನಂದ	ವಸಂತ ಕವಲಿ	3-75
ನಾದೋಪಾಸನೆ	,,	2-50
ಹೃದಯಾಂತರಾಳ	ಎಸ್. ಎನ್. ಶಿವಸ್ವಾಮಿ	1-25
ಕೈಲಾಸಂ ನಾಟಕಗಳು		2-25
ಆಹ್ವಾನ	ನಿರಂಜನ	2-25

ಕಥಾ ಸಂಗ್ರಹ

ಇತಿಹಾಸದ ಪುಟಗಳಿಂದ	ಬಿ. ಪುಟ್ಟಸ್ವಾಮಯ್ಯ	4-00
ಧ್ರುವಸ್ವಾಮಿನಿ	,,	2-80
ಕಾರವಾನ್	ಕಟ್ಟೀಮನಿ	1-10
ಬಿಡಿಹೂಗಳು	,,	2-00
ಮಮತೆಯ ಸುಳಿಯಲ್ಲಿ	ದಕ್ಷಿಣಾಮೂರ್ತಿ	2-50
ಶವದ ಮನೆ	ಚದುರಂಗ	1-30

ಕವನ ಸಂಗ್ರಹ

ಮಧುಚಂದ್ರ	ಚೆನ್ನವೀರಕಣವಿ	1-25
ಮಣ್ಣಿನ ಮೆರವಣಿಗೆ	,,	1-50
ಕಾಡಿನ ಕತ್ತಲಲ್ಲಿ	ಜಿ. ಎಸ್. ಶಿವರುದ್ರಪ್ಪ	3-50
ಊರ್ಣನಾಭ	ವಿ. ಕೃ. ಗೋಕಾಕ್	1-75

ಈ ಕಾದಂಬರಿಯನ್ನು ಕುರಿತು

★

ತಮ್ಮ ಹಿತವನ್ನು ಸುಖವನ್ನು ಬದಿಗಿತ್ತು ಬೇರೆಯವರ ಕಷ್ಟಸುಖದಲ್ಲಿ ಆಸಕ್ತಿವಹಿಸುವವರು ಸಮಾಜದಲ್ಲಿ ಬಹು ಮಂದಿ ಇದ್ದಾರೆ. ಅವರ ನಡೆ ನುಡಿ ಆಚಾರ ವ್ಯವಹಾರಗಳು ವಿಚಿತ್ರವಾಗಿರುವುದೂ ಉಂಟು. ನಯ ನಾಜೋಕು, ಘನತೆ ಗಾಂಭೀರ್ಯ ಬಿಗುಮಾನವಿಲ್ಲದ ಒರಟು ನಿರ್ದಾಕ್ಷಿಣ್ಯ ಪ್ರವೃತ್ತಿಯ ಇವರನ್ನು ನೋಡಿ ನೀವು ನಕ್ಕರೆ, ಅವರು ಸಂತೋಷ ಪಡುತ್ತಾರೆ. ಇಂಥ ಧೀರೋದಾತ್ತ ವಿದೂಷಕರಿಗೆ ಅನುಕಂಪ ಹೆಚ್ಚು. ಬೇರೆಯವರ ಕಷ್ಟ ಸುಖಕ್ಕೆ ಮರುಗುವ ಹೃದಯ ಅವರದ್ದು. ತೊಂದರೆಗೀಡಾದವರ ನೆರವಿಗೆ ಹೋಗುವುದರಲ್ಲಿ ಹಿಂದೆ ಮುಂದೆ ನೋಡುವುದಿಲ್ಲ.

ಇಂಥ ವ್ಯಕ್ತಿಯೊಬ್ಬರ ಜೀವನ ವಿಧಾನವೇ ಈ ಕಾದಂಬರಿಯ ಜೀವ ದ್ರವ್ಯ ಪಾಂಡಿತ್ಯ ಪ್ರತಿಭೆಗೆ ಹೆಸರಾಂತ ವಿದ್ಯಾಲಂಕಾರ, ಪ್ರೊ॥ ಎಚ್. ಕೆ. ರಾಮಚಂದ್ರರಾಯರ ಮನೋಜ್ಞ ಲೇಖನಿಯಿಂದ ಸುಲಲಿತವಾಗಿ ಮೂಡಿ ಬಂದಿರುವ ಸುಖ ಪ್ರಾರಬ್ಧ ಕನ್ನಡ ಸಾರಸ್ವತ ಲೋಕಕ್ಕೊಂದು ಅಮೂಲ್ಯ ಕೊಡುಗೆ.

* * * *

ಶಾರದಾ ಪ್ರಕಾಶನದ

ಮತ್ತೊಂದು ಹೆಮ್ಮೆಯ ಕೃತಿ